ಸಂಪುಟ: 06 ಸಂಚಿಕೆ: 22 ಪುಟಗಳು: 08 ಸೋಮವಾರ 06 ಏಪ್ರಿಲ್ 2026
www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail. com
ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 +91 8035841833 ₹5

**ಮುಂಜಾನೆ ಮಾತು**
ಇತರರಿಗೆ ಒಳಿತನ್ನುಂಟು ಮಾಡಬಲ್ಲ ಸುಳ್ಳು, ತೊಡಕುಂಟು ಮಾಡಬಹುದಾದ ಸತ್ಯಕ್ಕಿಂತ ಶ್ರೇಷ್ಠ. ಮಾತಿನಲ್ಲಿ ಒಳಿತು ಕೆಡುಕುಗಳ ವಿವೇಚನೆಯಿರಲಿ.

**ಉದಯ ವಾಹಿನಿ**
UV ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

## ಹಾವೇರಿ ವಿವಿ ಗೌರವ ಡಾಕ್ಟರೇಟ್ ಸ್ವೀಕರಿಸಲು ಬೊಮ್ಮಾಯಿ ನಿರಾಕರಣೆ

• ಉದಯವಾಹಿನಿ, ಬೆಂಗಳೂರು

ಮಾಜಿ ಸಿಎಂ ಬಸವರಾಜ ಬೊಮ್ಮಾಯಿ ಹಾವೇರಿ ವಿಶ್ವವಿದ್ಯಾಲಯ ನೀಡಲು ಉದ್ದೇಶಿಸಿರುವ ಗೌರವ ಡಾಕ್ಟರೇಟ ಸ್ವೀಕರಿಸಲು ನಯವಾಗಿ ನಿರಾಕರಿಸಿದ್ದಾರೆ.

ಈ ಬಗ್ಗೆ ಟ್ವೀಟ್ ಮಾಡಿರುವ ಅವರು, ಹಾವೇರಿ ವಿಶ್ವವಿದ್ಯಾಲಯವು ತಮ್ಮ ಸಿಂಡಿಕೇಟ್ ಸಭೆಯಲ್ಲಿ ನನಗೆ ಗೌರವ ಡಾಕ್ಟರೇಟ್ ನೀಡಲು ತೀರ್ಮಾನಿಸಿರುವುದಕ್ಕೆ ಕುಲಪತಿಗಳು, ಉಪಕುಲಪತಿಗಳು, ಕುಲಸಚಿವರು ಹಾಗೂ ಸಿಂಡಿಕೇಟ್ ಸದಸ್ಯರಿಗೆ ಹೃತ್ಪೂರ್ವಕ ಕೃತಜ್ಞತೆಗಳು ಮತ್ತು ಧನ್ಯವಾದಗಳು ಎಂದಿದ್ದಾರೆ.

ನಾನು ಗೌರವ ಡಾಕ್ಟರೇಟ್ ಸ್ವೀಕರಿಸುವುದಿಲ್ಲವೆಂದು ಈಗಾಗಲೇ ಕುಲಪತಿಗಳಿಗೆ ತಿಳಿಸಿದ್ದೇನೆ. ನಾನು ಸಾರ್ವಜನಿಕ ಸೇವೆಯಲ್ಲಿ ಇರುವುದರಿಂದ, ಸಾರ್ವಜನಿಕ ಸೇವೆಗೆ ಯಾವುದೇ ಪ್ರಶಸ್ತಿಯನ್ನು ಅಪೇಕ್ಷಿಸುವುದಿಲ್ಲ. ಸಾರ್ವಜನಿಕ ಸೇವೆಗೆ ಜನರ ಪ್ರೀತಿ ಮತ್ತು ವಿಶ್ವಾಸವೇ ನನಗೆ ಅತ್ಯಂತ ದೊಡ್ಡ ಗೌರವವೆಂದು ಭಾವಿಸುತ್ತೇನೆ. ಆದ್ದರಿಂದ ಗೌರವ ಡಾಕ್ಟರೇಟ್ ಸ್ವೀಕರಿಸುವುದಿಲ್ಲವೆಂದು ವಿನಮ್ರವಾಗಿ ಪುನರುಚ್ಚರಿಸುತ್ತೇನೆ ಎಂದು ತಿಳಿಸಿದ್ದಾರೆ.ಗೌರವ ಡಾಕ್ಟರೇಟ್ ಎಂಬುದು ದೀರ್ಘಕಾಲದಿಂದ ಯಾವುದಾದರೂ ಕ್ಷೇತ್ರದಲ್ಲಿ ವಿಶಿಷ್ಟ ಮತ್ತು ಮಹತ್ತರ ಸೇವೆ ಸಲ್ಲಿಸಿದವರಿಗೆ ನೀಡಬೇಕಾದ ಗೌರವವೆಂಬುದು ನನ್ನ ಅಭಿಪ್ರಾಯ. ಹೀಗಾಗಿ ಇದನ್ನು ಅಂಥ ಸಾಧಕರಿಗೆ ನೀಡಬೇಕು.

ರಾಜಕಾರಣಿಗಳಿಗೆ ಅಥವಾ ಸ್ವಯಂ ಪ್ರೇರಣೆಯಿಂದ ಸಮಾಜ ಸೇವೆಯಲ್ಲಿ ತೊಡಗಿರುವವರಿಗೆ ಗೌರವ ಡಾಕ್ಟರೇಟ್ ನೀಡುವುದು ಸಮಂಜಸವಲ್ಲ ಎಂಬುದು ನನ್ನ ವೈಯಕ್ತಿಕ ಅಭಿಪ್ರಾಯ. ಈ ವಿಷಯದಲ್ಲಿ ಪುನರ್ ವಿಚಾರ ಮಾಡಬೇಕೆಂದು ವಿನಂತಿಸಿದ್ದಾರೆ. ಮತ್ತೊಮ್ಮೆ ವಿನಯಪೂರ್ವಕವಾಗಿ ಗೌರವ ಡಾಕ್ಟರೇಟ್ ಸ್ವೀಕರಿಸುವುದಿಲ್ಲವೆಂದು ತಿಳಿಸುತ್ತಾ, ಹಾವೇರಿ ವಿಶ್ವವಿದ್ಯಾಲಯಕ್ಕೆ ನನ್ನ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ ಎಂದಿದ್ದಾರೆ.

## ’ಸಿದ್ದರಾಮಯ್ಯ ಅನ್ನರಾಮಯ್ಯ ಎನ್ನುವುದಕ್ಕಿಂತ ಕನ್ನರಾಮಯ್ಯ

• ಉದಯವಾಹಿನಿ, ಬೆಂಗಳೂರು

ಕೇಂದ್ರದಿಂದ ಪಡಿತರ ಕೊಟ್ಟಿದ್ದು ನಾವು. ಸಿದ್ದರಾಮಯ್ಯ ಅನ್ನರಾಮಯ್ಯ ಎನ್ನುವುದಕ್ಕಿಂತ ಕನ್ನರಾಮಯ್ಯ ಎನ್ನಬಹುದು ಎಂದು ಕೇಂದ್ರ ಸಚಿವ ಹೆಚ್ ಡಿ ಕುಮಾರಸ್ವಾಮಿ ವಾಗ್ದಾಳಿ ನಡೆಸಿದರು. ನಗರದಲ್ಲಿ ಮಾತನಾಡಿದ ಅವರು, 28 ಸಾವಿರ ಕೋಟಿ ಹಣ 15 ಲಕ್ಷ ಮನೆಗಳನ್ನು ಕಟ್ಟಲು ಬೇಕಾಗಿತ್ತು ಆದರೆ ಈಗ ಅದೇ 15 ಲಕ್ಷ ಮನೆ ಕಟ್ಟಲು 2 ಸಾವಿರ ಕೋಟಿ ಇಟ್ಟಿದ್ದಾರೆ. ಗ್ಯಾಸ್ ಸಿಲಿಂಡರ್ ಪೂರೈಕೆ ಕಷ್ಟ ಇದೆ. ಆದರೆ ಈ ಕಾಂಗ್ರೆಸ್ ಪ್ರಧಾನಿಗಳು ಪೂರೈಕೆ ಮಾಡುತ್ತಿಲ್ಲ ಎಂದು ಅರೋಪ ಮಾಡುತ್ತಿದ್ದಾರೆ. ಬೇರೆ ಬೇರೆ ದೇಶಗಳಲ್ಲಿನ ಪರಿಸ್ಥಿತಿ ಯಾವ ರೀತಿ ಇದೆ ಎನ್ನುವುದು ಗೊತ್ತಿದೆ. ಆದರೆ ಪ್ರಧಾನಿಗಳು ಬೇರೆ ದೇಶಗಳ ಜೊತೆ ಇಟ್ಟುಕೊಂಡ ಸ್ನೇಹದಿಂದ ಅಲ್ಲಿಂದ ನಮ್ಮ ದೇಶಕ್ಕೆ ಆಮದು ಮಾಡಿಕೊಳ್ಳುತ್ತಿದ್ದಾರೆ. ಹಾರ್ಮುಜ್ ಜಲಸಂಧಿಯ ಮೂಲಕ ದೇಶಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಗ್ಯಾಸ್ ಆಮದು ಮಾಡಿಕೊಳ್ಳುತ್ತಿದ್ದಾರೆ ಎಂದರು. ಇದರ ಬಗ್ಗೆ ಸಿಎಂ, ಡಿಸಿಎಂ, ಸುರ್ಜೇವಾಲ ಮಾತನಾಡಿದ್ದು ನೋಡಿದ್ದೆ. ಕೇಂದ್ರದಿಂದ ಬರುವ ಪಡಿತರವನ್ನು ಕೊಟ್ಟು ನಾವು ಕೊಟ್ಟಿದ್ದೇವೆ ಎಂದು ಹೇಳುತ್ತಿದ್ದಾರೆ.

## ಕರ್ನಾಟಕಕ್ಕೆ ಬಿಜೆಪಿ ಹಾನಿಕಾರಕ

• ಉದಯವಾಹಿನಿ ಬೆಂಗಳೂರು

ಕೇಂದ್ರದ ಬಿಜೆಪಿ ಸರ್ಕಾರ ಕರ್ನಾಟಕಕ್ಕೆ ಹಾನಿಕಾರಕ ಎಂದು ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಆಪಾದಿಸಿದರು.ಕೆಪಿಸಿಸಿ ಕಚೇರಿಯಲ್ಲಿ ಸುದ್ದಿಗೋಷ್ಠಿ ನಡೆಸಿದ ಸುರ್ಜೇವಾಲಾ, ಮೋದಿ ಸರ್ಕಾರ ಮತ್ತು ಬಿಜೆಪಿಯ ಕನ್ನಡಿಗ ವಿರೋಧಿ ಸೇಡಿನ ರಾಜಕಾರಣ ಬಯಲಾಗಿದೆ. ಕೇಂದ್ರ ಸರ್ಕಾರದಿಂದ ಕರ್ನಾಟಕಕ್ಕೆ ಬರಬೇಕಾದ 2 ಲಕ್ಷ ಕೋಟಿ ಹಕ್ಕಿನ ಹಣಕ್ಕೆ ಕನ್ನ ಹಾಕಲಾಗಿದೆ. ರಾಜ್ಯಕ್ಕೆ ಕೃಷಿ, ನೀರಾವರಿ, ರಕ್ಷಣೆ, ಮೂಲಸೌಕರ್ಯ ಯೋಜನೆಗಳನ್ನು ತಡೆಯುವ ಮೂಲಕ ಕರ್ನಾಟಕದ ವಿರುದ್ಧ ಮೋದಿ ಸರ್ಕಾರದಿಂದ ವ್ಯವಸ್ಥಿತ ಪಿತೂರಿ ನಡೆಸಲಾಗಿದೆ. ಹೀಗಾಗಿಯೇ ಬಿಜೆಪಿ ಕರ್ನಾಟಕಕ್ಕೆ ಹಾನಿಕಾರಕ ಎಂದು ವಾಗ್ದಾಳಿ ನಡೆಸಿದರು. ಕಾಂಗ್ರೆಸ್‌ನ 5 ಗ್ಯಾರಂಟಿಗಳಿಗೆ ಬಿಜೆಪಿ ವಿರೋಧಿಸುತ್ತಿದೆ. ಬಿಜೆಪಿ ಕರ್ನಾಟಕಕ್ಕೆ ದ್ರೋಹ ಬಗೆದಿದೆ. ಕನ್ನಡಿಗರ ಮತ ಪಡೆಯುವ ಅರ್ಹತೆ ಅವರಿಗಿಲ್ಲ ಎಂದು ಸುರ್ಜೇವಾಲಾ ಆರೋಪಿಸಿದರು. 1,97,257 ಕೋಟಿ ಮೊತ್ತದ ತೆರಿಗೆ ಮತ್ತು ಅನುದಾನದ ಪಾಲು ನಿರಾಕರಣೆ ಮಾಡಲಾಗಿದೆ.

14ನೇ ಮತ್ತು 15ನೇ ಹಣಕಾಸು ಆಯೋಗದಲ್ಲಿ ಕರ್ನಾಟಕಕ್ಕೆ ಬರಬೇಕಿದ್ದ 79,770 ಕೋಟಿ ಪಾಲಿನ ನಿರಾಕರಿಸಲಾಗಿದೆ. ಅವೈಜ್ಞಾನಿಕ ಜಿಎಸ್‌ಟಿ ಜಾರಿಯಿಂದ ಕರ್ನಾಟಕಕ್ಕೆ ಆಗಿರುವ ನಷ್ಟ 59,274 ಕೋಟಿ. ಹೊಸ ಜಿಎಸ್‌ಟಿ ಪರಿಷ್ಕರಣೆಯಿಂದ ಕರ್ನಾಟಕಕ್ಕೆ ಆಗಿರುವ ನೇರ ನಷ್ಟ 9,000 ಕೋಟಿ. ಜಲಜೀವನ್ ಮಿಷನ್ ಅಡಿಯಲ್ಲಿ 10,889 ಕೋಟಿ ಅನುದಾನ ಕೊಟ್ಟಿಲ್ಲ ಎಂದರು.

ಬಾಗಲಕೋಟೆ ಉಪಚುನಾವಣೆಯ ಪ್ರಚಾರ ಕಾರ್ಯ ಭರದಿಂದ ಸಾಗಿದೆ. ಇಂದು ಬಿಜೆಪಿ ಪ್ರಚಾರದಲ್ಲಿ ಭಾಗಿಯಾದ ಮಾಜಿ ಸಿಎಂ ಯಡಿಯೂರಪ್ಪ, ಸಿಎಂ ಸಿದ್ದರಾಮಯ್ಯ ಆಡಳಿತದ ಬಗ್ಗೆ ಕಿಡಿಕಾರಿದ್ದು, ಸಿಎಂ ಅವರ ಸಮಾಜದ ವ್ಯಕ್ತಿ ನಿಂತಿದ್ದಾರೆಂಬ ಕಾರಣಕ್ಕೆ ಪ್ರಚಾರ ಮಾಡ್ತಿದ್ದಾರೆ. ಆದ್ರೆ ಗೆಲ್ಲೋದು ನಮ್ಮ ಪಕ್ಷದ ಅಭ್ಯರ್ಥಿಯೇ ಎಂದಿದ್ದಾರೆ.

**ಕಾಂಗ್ರೆಸ್ ಮತ್ತು ವಿಪಕ್ಷ ಬಿಜೆಪಿ ನಡುವೆ ನೇರ ಸ್ಪರ್ಧೆ**

# ಉಪ ಚುನಾವಣಾ ಪ್ರಚಾರ ತಾರಕಕ್ಕೆ

**ಗೆಲುವು ರಾಜ್ಯದ ಭವಿಷ್ಯದ ರಾಜಕಾರಣಕ್ಕೆ ದಿಕ್ಸೂಚಿ**




**ರಂಗೇರಿದ್ದ ಉಪ ಕಣ**

1 ಉಪ ಚುನಾವಣೆ ಪ್ರಚಾರ ಬಿರುಸು
2 ಸಿಎಂ ಕಟು ಶಬ್ಧಗಳಿಂದ ಟೀಕಿಸಿದ ಬಿಎಸ್ ವೈ
3 ದಾವಣಗೆರೆ ದಕ್ಷಿಣ ಕಾಂಗ್ರೆಸ್ ಭದ್ರಕೋಟೆ

**ದಾವಣಗೆರೆ ಹಾಗೂ ಬಾಗಲಕೋಟೆ ಎರಡೂ ಕಡೆ ನಮ್ಮ ಅಭ್ಯರ್ಥಿಗಳು ಗೆಲ್ತೇವೆ**

### ಸಮರ್ಥ್ ಗೆಲ್ಲಿಸುವ ಕೆಲಸ ಮಾಡ್ತೀನಿ

ಇಲ್ಲಿನ ದಕ್ಷಿಣ ಕ್ಷೇತ್ರದ ಉಪಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಸಮರ್ಥ್ ಶಾಮನೂರು ಅವರನ್ನು ನೂರಕ್ಕೆ ನೂರರಷ್ಟು ಗೆಲ್ಲಿಸುವ ಕೆಲಸ ಮಾಡ್ತೀನಿ ಎಂದು ಜಮೀರ್ ಅಹ್ಮದ್ ಹೇಳಿದ್ದಾರೆ. ದಾವಣಗೆರೆಯಲ್ಲಿ ಸಚಿವ ಎಸ್.ಎಸ್ ಮಲ್ಲಿಕಾರ್ಜುನ್ ನಿವಾಸದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ನಾನು ಕೇರಳದಲ್ಲಿ ಸ್ಟಾರ್ ಪ್ರಚಾರಕನಾಗಿದ್ದೆ. ಹತ್ತು ಕ್ಷೇತ್ರ ಕೊಟ್ಟಿದ್ದರು. ಇಲ್ಲಿಗೆ ಬರುತ್ತೇನೆ ಎಂದು ಹೇಳಿದ್ದೆ. ದಾವಣಗೆರೆಗೆ ಬಂದಿದ್ದೇನೆ ಸಮರ್ಥ್ ಗೆಲ್ಲಿಸಿಕೊಂಡು ಹೋಗುತ್ತೇನೆ. ನೂರಕ್ಕೆ ನೂರರಷ್ಟು ಸಮರ್ಥ್ ಗೆಲ್ಲಿಸುವ ಕೆಲಸ ಮಾಡುತ್ತೇನೆ ಎಂದಿದ್ದಾರೆ. ಕಳೆದ ಚುನಾವಣೆಯಲ್ಲಿ ನಾಲ್ಕು ಜನ ಮುಸ್ಲಿಮರು ನಿಂತಿದ್ದರು. ಆದರೂ ಕೂಡ ಗೆದ್ದು ಬಂದಿದ್ದೇವೆ. ದಾವಣಗೆರೆ ದಕ್ಷಿಣ ಕ್ಷೇತ್ರ ಕಾಂಗ್ರೆಸ್ ಭದ್ರಕೋಟೆಯಾಗಿದೆ. ಯಾರಾದರೂ ಶಾಸಕರು ಸಾವನ್ನಪ್ಪಿದರೆ ಅವರ ಕುಟುಂಬಕ್ಕೆ ಟಿಕೆಟ್ ಕೊಡುವುದು ನಮ್ಮ ಪಕ್ಷದ ಸಂಪ್ರದಾಯ. 2028ಕ್ಕೆ ಯಾರಿಗೆ ಟಿಕೆಟ್ ಕೊಡುತ್ತಾರೆ ಎಂಬುದು ಹೈಕಮಾಂಡ್‌ಗೆ ಬಿಟ್ಟಿದ್ದು ಎಂದರು. ಇದೇ ವೇಳೆ ನಾನು ಮಲ್ಲಿಕಾರ್ಜುನ್ ಆತ್ಮೀಯ ಸ್ನೇಹಿತರು ಎಂದಿದ್ದಾರೆ.



• ಉದಯವಾಹಿನಿ, ಬೆಂಗಳೂರು

ದಾವಣಗೆರೆ ದಕ್ಷಿಣ ಹಾಗೂ ಬಾಗಲಕೋಟೆ ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆಯ ಬಹಿರಂಗ ಪ್ರಚಾರಕ್ಕೆ ಇನ್ನು 2 ದಿನಗಳಷ್ಟೇ ಬಾಕಿ ಇದ್ದು, ಚುನಾವಣಾ ಪ್ರಚಾರದ ಕಾವು ತಾರಕಕ್ಕೇರಿದೆ. ಈ ಉಪಚುನಾವಣೆಯ ಗೆಲುವು ರಾಜ್ಯದ ಭವಿಷ್ಯದ ರಾಜಕಾರಣಕ್ಕೆ ದಿಕ್ಸೂಚಿಯಾಗಿರುವುದರಿಂದ ಕಾಂಗ್ರೆಸ್ ಮತ್ತು ಬಿಜೆಪಿ ಎರಡೂ ಪಕ್ಷಗಳು ಗೆಲುವಿಗಾಗಿ ಎಲ್ಲಾ ರೀತಿಯ ಚುನಾವಣಾ ಕಾರ್ಯತಂತ್ರಗಳನ್ನು ಹೆಣೆದಿವೆ.

ಈ ಎರಡು ಕ್ಷೇತ್ರಗಳಲ್ಲೂ ಆಡಳಿತಾರೂಢ ಕಾಂಗ್ರೆಸ್ ಮತ್ತು ವಿಪಕ್ಷ ಬಿಜೆಪಿ ನಡುವೆ ನೇರ ಸ್ಪರ್ಧೆ ಏರ್ಪಡಿಸಿದ್ದು, ಗೆಲುವಿಗಾಗಿ ಎರಡೂ ಪಕ್ಷಗಳ ನಡುವೆ ಜಿದ್ದಾಜಿದ್ದಿಯ ಪೈಪೋಟಿ ನಡೆದಿದೆ. ಬಾಗಲಕೋಟೆಯಲ್ಲಿ ಚುನಾವಣಾ ಪ್ರಚಾರದ ವೇಳೆ ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ, ಸಿಎಂ ಸಿದ್ದರಾಮಯ್ಯ ಅವರನ್ನು ಟೀಕಿಸಿದ್ದಾರೆ. ನಂಬಿಕೆ ದ್ರೋಹ, ವಿಶ್ವಾಸ ದ್ರೋಹಕ್ಕೆ ಮತ್ತೊಂದು ಹೆಸ್ರು ಸಿಎಂ ಸಿದ್ದರಾಮಯ್ಯ ಎಂದಿದ್ದಾರೆ. ಭಾನುವಾರ ಚುನಾವಣಾ ಪ್ರಚಾರದ ವೇಳೆ ಖಜಾನೆಯನ್ನ ಲೂಟಿ ಮಾಡೋ ಕಾಯಕದಲ್ಲಿ ಸರ್ಕಾರ ಮಗ್ನವಾಗಿದೆ. ಸಿದ್ದರಾಮಯ್ಯ ಅವ್ರು ವಾರಗಟ್ಟಲೇ, ಇಲ್ಲಿ ಬಂದು ಪ್ರಚಾರ ಮಾಡ್ತಿರೋದು ಕೇವಲ ಅವ್ರ ಸಮಾಜದ ವ್ಯಕ್ತಿ ಇಲ್ಲಿ ಸ್ಪರ್ಧೆ ಮಾಡಿದ್ದಾರೆ ಎಂಬ ಕಾರಣಕ್ಕೆ ಇಲ್ಲಿಗೆ ಬಂದು ಪ್ರಚಾರ ಮಾಡ್ತಿದ್ದಾರೆ ಎಂದರು.

ನಿಮ್ಮ ಹಣ ಹೆಂಡಕ್ಕೆ ಈ ಜನ್ರು ಸೊಪ್ಪು ಹಾಕಲ್ಲ! ನಮ್ಮ ಅಭ್ಯರ್ಥಿ ಭಾರಿ ಅಂತರದಿಂದ ಗೆಲ್ಲುವವರಿದ್ದಾರೆ. ಪ್ರಧಾನಿ ಮೋದಿ ಅವ್ರಿಗೆ ಭರವಸೆ ಕೊಡ್ತೇನೆ, ನಿಮ್ಮ ಕಾರ್ಯಕರ್ತರ ಉತ್ಸಾಹದಿಂದ ದಾವಣಗೆರೆ ಹಾಗೂ ಬಾಗಲಕೋಟೆ ಎರಡೂ ಕಡೆ ನಮ್ಮ ಅಭ್ಯರ್ಥಿಗಳು ಗೆಲ್ತೇವೆ. ಜನರು ಸಹ ಒಳ್ಳೆಯ ರೀತಿಯಿಂದ ನಮಗೆ ಸ್ಪಂದಿಸಿದ್ದಾರೆ. ಕೇಂದ್ರ ಸಚಿವ ಕುಮಾರಸ್ವಾಮಿ ಅವ್ರು ಬಂದು ನಮ್ಮ ಅಭ್ಯರ್ಥಿ ಪರ ಪ್ರಚಾರ ಮಾಡ್ತಿರೋ ನಮಗೆ ಮತ್ತಷ್ಟು ಶಕ್ತಿ ಬಂದಂತಾಗಿದೆ. ಸೂಟ್ಕೇಸ್ ನಲ್ಲಿ ಹಣ ತುಂಬಿಕೊಂಡು, ಹಣ ಹೆಂಡದ ಬಲದ ಮೇಲೆ ಚುನಾವಣೆ ಗೆಲ್ತೀವಿ ಅಂತಾ ತಿಳ್ಕೊಂಡಿದ್ದಾರೆ.


ನಿಮ್ಮ ಹಣ ಹೆಂಡಕ್ಕೆ ಈ ಜನ್ರು ಸೊಪ್ಪು ಹಾಕಲ್ಲ. ಜನ ನಮಗೆ ಓಟ್ ಹಾಕುವ ಮೂಲಕ ಕಾಂಗ್ರೆಸ್ ಗೆ ಪಾಠ ಕಲಿಸ್ತಾರೆ ಎಂದು ಬಿಎಸ್ ಯಡಿಯೂರಪ್ಪ ಕಾಂಗ್ರೆಸ್ ವಿರುದ್ಧ ಹರಿಹಾಯ್ದಿದ್ದಾರೆ. ಚುನಾವಣೆ ಆಯೋಗದ ನಿರ್ದೇಶನದ ಮೇರೆಗೆ ಅಧಿಕಾರಿಗಳ ವರ್ಗಾವಣೆ ನಗರದಲ್ಲಿ ಎನ್ ಎಸ್ ಯುಐ ಕಾರ್ಯಕರ್ತರನ್ನು ವಶಕ್ಕೆ ಪಡೆದಿದ್ದ ಪೊಲೀಸ್ ಅಧಿಕಾರಿಗಳನ್ನು ವರ್ಗಾಯಿಸಲಾಗಿದೆ. ಬಾಗಲಕೋಟೆಯ ಮಹಿಳಾ ಪೊಲೀಸ್ ಠಾಣೆ ಸಿಪಿಐ ವಿಜಯ ಮುರಗುಂಡಿ ಅವರನ್ನು ವಿಜಯಪುರದ ಮಹಿಳಾ ಪೊಲೀಸ್ ಠಾಣೆ, ನವನಗರದ ಠಾಣೆಯ ಸಿಪಿಐ ಅಶೋಕ ಚವ್ಹಾಣ ಅವರನ್ನು ಬೆಳಗಾವಿಯ ಐಜಿಪಿ ಕಚೇರಿಗೆ ವರ್ಗಾಯಿಸಲಾಗಿದೆ. ಮಹಿಳಾ ಠಾಣೆಗೆ ವಿಜಯಪುರದ ಮಹಿಳಾ ಠಾಣೆಯ ಸಿಪಿಐ ಜಯವಂತ ದುಲಾರಿ, ನವನಗರ ಠಾಣೆಗೆ ಬೆಳಗಾವಿಯ ಐಜಿಪಿ ಕಚೇರಿಯ ಸಂಜೀವ ಕಾಂಬಳೆ ವರ್ಗಾವಣೆಗೊಂಡಿದ್ದಾರೆ.

■ ಸಿದ್ದರಾಮಯ್ಯ ಅವ್ರು ವಾರಗಟ್ಟಲೇ, ಇಲ್ಲಿ ಬಂದು ಪ್ರಚಾರ ಮಾಡ್ತಿರೋದು ಕೇವಲ ಅವ್ರ ಸಮಾಜದ ವ್ಯಕ್ತಿ ಇಲ್ಲಿ ಸ್ಪರ್ಧೆ ಮಾಡಿದ್ದಾರೆ ಎಂಬ ಕಾರಣಕ್ಕೆ

■ ಪ್ರಧಾನಿ ಮೋದಿ ಅವ್ರಿಗೆ ಭರವಸೆ ಕೊಡ್ತೇನೆ, ನಿಮ್ಮ ಕಾರ್ಯಕರ್ತರ ಉತ್ಸಾಹದಿಂದ ದಾವಣಗೆರೆ ಹಾಗೂ ಬಾಗಲಕೋಟೆ ಎರಡೂ ಕಡೆ ನಮ್ಮ ಅಭ್ಯರ್ಥಿಗಳು ಗೆಲ್ತೇವೆ

■ ಚುನಾವಣೆ ಆಯೋಗದ ನಿರ್ದೇಶನ

■ ಮೇರೆಗೆ ಅಧಿಕಾರಿಗಳನ್ನು ವರ್ಗಾಯಿಸಿ ಡಿಜಿಪಿ ಡಾ.ಎಂ. ಎಂ.ಸಲೀಂ ಆದೇಶ ಹೊರಡಿಸಿದ್ದಾರೆ.



**ಮಾಜಿ ಹಾಲಿಗೆ ಟೀಕಾಸ್ತ್ರ**

### ಕ್ಷಮಿಸಿ ಪ್ರಚಾರಕ್ಕೆ ಬಂದ ಜಮೀರ್

ದಾವಣಗೆರೆ ದಕ್ಷಿಣದಲ್ಲಿ ಉಪ ಚುನಾವಣೆ ಪ್ರಚಾರದ ಕಾವು ಜೋರಾಗುತ್ತಿದೆ. ಈ ನಡುವೆ ಸಮರ್ಥ್ ಪರವಾಗಿ ಜನಾಭಿಪ್ರಾಯ ರೂಪಿಸುವ ನಿಟ್ಟಿನಲ್ಲಿ ಮುಸ್ಲಿಂ ಸಮುದಾಯದ ಕಾಂಗ್ರೆಸ್ ನಾಯಕರ ಮೇಲೆ ಒತ್ತಡವೂ ಹೆಚ್ಚಾಗುತ್ತಿದೆ. ಟಿಕೆಟ್ ಸಂಬಂಧ ಸಚಿವ ಜಮೀರ್ ಅಹಮ್ಮದ್ ಖಾನ್ ಹಾಗೂ ಎಸ್‌ಎಸ್ ಮಲ್ಲಿಕಾರ್ಜುನ ನಡುವೆ ಮುಸುಕಿನ ಗುದ್ದಾಟ ನಡೆದಿತ್ತು. ಕ್ಷೇತ್ರಕ್ಕೆ ಬರುವುದೇ ಬೇಡ ಎಂದು ಸ್ವತಃ ಮಲ್ಲಿಕಾರ್ಜುನ, ಜಮೀರ್ ವಿರುದ್ಧ ಏಕವಚನದಲ್ಲೇ ವಾಗ್ದಾಳಿ ನಡೆಸಿದ್ದರು. ಇದು ಮುಸ್ಲಿಂ ಸಮುದಾಯದ ಅಸಮಾಧಾನಕ್ಕೆ ಕಾರಣವಾಗಿದ್ದು, ಎಸ್‌ಎಸ್‌ಮಲ್ಲಿಕಾರ್ಜುನ ಜಮೀರ್ ಅಹಮ್ಮದ್ ಖಾನ್ ಅವರ ಬಳಿ ಕ್ಷಮೆಯಾಚಿಸಬೇಕೆಂದು ಆಗ್ರಹಿಸಿದ್ದರು. ಇನ್ನೊಂದೆಡೆ ತಮ್ಮ ಸಮುದಾಯಕ್ಕೆ ಟಿಕೆಟ್ ಕೈತಪ್ಪಿದ್ದಿ, ಹಾಗೇ ಮಲ್ಲಿಕಾರ್ಜುನ ಅವರ ಮಾತಿನಿಂದ ಅಸಮಾಧಾನಗೊಂಡಿದ್ದ ಜಮೀರ್, ದಾವಣಗೆರೆ ಉಪಚುನಾವಣೆ ಪ್ರಚಾರದಿಂದ ಅಂತರ ಕಾಯ್ದುಕೊಂಡಿದ್ದರು. ಜಮೀರ್ ಅನುಪಸ್ಥಿತಿಯಲ್ಲಿ ಕ್ಷೇತ್ರದಲ್ಲಿ ಶಾಸಕರಾದ ಸಲೀಂ ಅಹ್ಮದ್, ರಿಜ್ವಾನ್ ಅರ್ಷದ್, ಎನ್ ಎ ಹ್ಯಾರಿಸ್, ಯಾಸೀನ್ ಖಾನ್ ಪಠಾಣ್ ಬೀಡುಬಿಟ್ಟಿದ್ದರು ಆದರೂ ಸಹ ಕಾಂಗ್ರೆಸ್ ನಾಯಕರು ಹೋದಲೆಲ್ಲ ಮುಸ್ಲಿಂ ಸಮುದಾಯದ ಜನರು, ಜಮೀರ್ ಅವರನ್ನ ಕರೆಯಿಸಿ ಎಂದು ಘೋಷಣೆ ಕೂಗಿದ ಪ್ರಸಂಗಗಳ ಸಹ ನಡೆದಿವೆ.

### ಕಾರ್ಯಕರ್ತರ ನಡುವೆ ವಾಗ್ವಾದ

ನಗರದ ಎಸ್. ನಿಜಲಿಂಗಪ್ಪ ವೈದ್ಯಕೀಯ ಕಾಲೇಜಿಗೆ ’ಸ್ಟುಡೆಂಟ್ಸ್ ಬಿ ಕೇರ್ ಫುಲ್’ ಕರಪತ್ರ ಹಂಚಲು ಹೋಗಿದ್ದ ಭಾರತ ರಾಷ್ಟ್ರೀಯ ವಿದ್ಯಾರ್ಥಿ ಒಕ್ಕೂಟ ಹಾಗೂ ಬಿಜೆಪಿ ಕಾರ್ಯಕರ್ತರ ನಡುವೆ ಮಾತಿನ ಚಕಮಕಿ ನಡೆದಿದೆ. ಎನ್ ಎಸ್‌ಯುಐ ಮುಖಂಡರು ಕೇಸರಿ ಶಾಲು ಧರಿಸಿ, ಕಾಲೇಜಿನ ವಿದ್ಯಾರ್ಥಿಗಳಿಗೆ ವೀರಣ್ಣ ಚರಂತಿಮಠ ಅವರಿಗೆ ಹಾಕಿದರೆ ಜೈಲು ಶಿಕ್ಷೆ ಅನುಭವಿಸಬೇಕಾಗುತ್ತದೆ, ಪ್ರಜಾಪ್ರಭುತ್ವ ಉಳಿಸಿ ಎಂಬುದು ಸೇರಿದಂತೆ ಹಲವು ಅಂಶಗಳನ್ನು ಒಳಗೊಂಡ ಕರಪತ್ರ ಹಂಚುತ್ತಿದ್ದರು. ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಕಾಲೇಜಿನ ಸಿಬ್ಬಂದಿ, ನೀವು ಯಾರು? ಯಾಕೆ ಇಲ್ಲಿ ಬಂದಿರುವಿರಿ ಎಂದು ಪ್ರಶ್ನಿಸಿದರು. ವಿಷಯ ಗೊತ್ತಾಗಿ ಕೆಲವು ಬಿಜೆಪಿ ಕಾರ್ಯಕರ್ತರು ಬಂದಾಗ ಮಾತಿನ ಚಕಮಕಿ ನಡೆಯಿತು.

### ಕಾಂಗ್ರೆಸ್ ಪ್ರತಿಭಟನೆ

ದಾವಣಗೆರೆ ದಕ್ಷಿಣ ಕ್ಷೇತ್ರದ ಉಪಚುನಾವಣೆ ಹಿನ್ನೆಲೆ ಪ್ರಚಾರದ ವೇಳೆ ಮುಸ್ಲಿಮರು ‘ಗೋ ಬ್ಯಾಕ್ ಕಾಂಗ್ರೆಸ್’ ಪ್ರತಿಭಟನೆ ನಡೆಸಿದ್ದಾರೆ. ಕಾಂಗ್ರೆಸ್ ಅಭ್ಯರ್ಥಿ ಸಮರ್ಥ್ ಶಾಮನೂರು ಪ್ರಚಾರದ ವೇಳೆ ಮುಸ್ಲಿಮರು ‘ಗೋ ಬ್ಯಾಕ್’ ಎಂದು ಘೋಷಣೆ ಕೂಗಿದ್ದಾರೆ. ದಾವಣಗೆರೆಯ ಬಾಷಾ ನಗರ ಮುಸ್ಲಿಂ ರಸ್ತೆಯಲ್ಲಿ ಪ್ರಚಾರದ ಸಂದರ್ಭದಲ್ಲಿ ಘಟನೆ ನಡೆದಿದ್ದು, ಸಾವಿರಾರು ಮುಸ್ಲಿಮರು ‘ಗೋ ಬ್ಯಾಕ್, ಗೋ ಬ್ಯಾಕ್ ಕಾಂಗ್ರೆಸ್’ಎಂದು ಘೋಷಣೆ ಕೂಗಿದ್ದಾರೆ. ಈ ಬಾರಿ ಕಾಂಗ್ರೆಸ್‌ನಿಂದ ಅಲ್ಪಸಂಖ್ಯಾತರಿಗೆ ಟಿಕೆಟ್ ನೀಡುವಂತೆ ಪ್ರಬಲ ಒತ್ತಾಯ ಕೇಳಿ ಬಂದಿತ್ತು.

## ಏ.6 ರಿಂದ 4 ದಿನಗಳು ಮಳೆ; ಬೆಂಗಳೂರು ಸೇರಿ 16 ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್

### ಮಕ್ಕಳು ಬಸ್‌ಗಳಿಂದ ಬಿದ್ದು ಗಾಯಗೊಂಡ ಹಲವಾರು ಪ್ರಕರಣಗಳು ವರದಿ

• ಉದಯವಾಹಿನಿ, ಬೆಂಗಳೂರು

ಕರ್ನಾಟಕದಲ್ಲಿ ಪೂರ್ವ ಮುಂಗಾರು ಏಪ್ರಿಲ್ 2 ನೇ ವಾರದಿಂದ ಚುರುಕಾಗುತ್ತಿದ್ದು, ಏ. 6 ರಿಂದ ನಾಲ್ಕು ದಿನಗಳು ರಾಜ್ಯದಲ್ಲಿ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ. ಬೆಂಗಳೂರು ಸೇರಿದಂತೆ 16 ಜಿಲ್ಲೆಗಳಿಗೆ ವಿವಿಧ ದಿನಗಳಂದು ಯೆಲ್ಲೋ ಅಲರ್ಟ್ ನೀಡಲಾಗಿದೆ. ಬೇಸಿಗೆ ಬಿಸಿಲು ಜೋರಿದ್ದು, ಅಂತೆಯೇ ಪೂರ್ವ ಮುಂಗಾರು ಚುರುಕಾಗುತ್ತಿದೆ. ಏಪ್ರಿಲ್ 6 ರಿಂದ 8ವರೆಗೂ ರಾಜ್ಯದಾದ್ಯಂತ ಒಣ ಹವೆ ಹಾಗೂ ಬಿಸಿಲಿನ ವಾತಾವರಣ ಮುಂದುವರಿಯುವ ಸಾಧ್ಯತೆದೆ.

ದಕ್ಷಿಣ ಒಳನಾಡು, ಮಲೆನಾಡು ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಏಪ್ರಿಲ್ 8ರ ತನಕ ಅಲ್ಲಲ್ಲಿ ಗುಡುಗು, ಸಿಡಿಲು ಸಹಿತ ಜೋರಾದ ಗಾಳಿಯೊಂದಿಗೆ ಸಾಧಾರಣ ಮಳೆಯಾಗಲಿದೆ ಎಂದು ಕರ್ನಾಟಕ ಹವಾಮಾನ ಇಲಾಖೆ ತಿಳಿಸಿದೆ.

ಒಟ್ಟು 16 ಜಿಲ್ಲೆಗಳಿಗೆ ಅಲರ್ಟ್ - ಯಾವೆಲ್ಲಾ? ಏಪ್ರಿಲ್ 6 - ಕಲಬುರಗಿ, ರಾಯಚೂರು, ಬೆಳಗಾವಿ, ಧಾರವಾಡ, ಗದಗ, ಶಿವಮೊಗ್ಗ, ಉಡುಪಿ, ಚಿಕ್ಕಮಗಳೂರು, ದಕ್ಷಿಣ ಕನ್ನಡ, ಹಾಸನ, ಕೊಡಗು, ಮೈಸೂರು, ಮಂಡ್ಯ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ಕೋಲಾರ. ಏಪ್ರಿಲ್ 7 - ಕಲಬುರಗಿ,ರಾಯಚೂರು, ಬೆಳಗಾವಿ, ಧಾರವಾಡ, ಗದಗ, ಉತ್ತರ ಕನ್ನಡ, ಶಿವಮೊಗ್ಗ, ಉಡುಪಿ, ಚಿಕ್ಕಮಗಳೂರು, ದಕ್ಷಿಣ ಕನ್ನಡ, ಹಾಸನ, ಕೊಡಗು, ಮೈಸೂರು, ಮಂಡ್ಯ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ಕೋಲಾರ. ಏಪ್ರಿಲ್ 8 - ಬೀದರ್, ಕಲಬುರಗಿ, ರಾಯಚೂರು, ಯಾದಗಿರಿ, ಶಿವಮೊಗ್ಗ, ಉಡುಪಿ, ದಕ್ಷಿಣ ಕನ್ನಡ, ಚಿಕ್ಕಮಗಳೂರು, ಹಾಸನ, ಕೊಡಗು, ಕೋಲಾರ, ಬೆಂಗಳೂರು, ಬೆಂಗಳೂರು ಗ್ರಾಮಾಂತರ ಏಪ್ರಿಲ್ 6,7 ರಂದು **ದಕ್ಷಿಣ ಒಳನಾಡು:** ಮೈಸೂರು, ಮಂಡ್ಯ, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಮತ್ತು ಕೋಲಾರ ಜಿಲ್ಲೆಗಳಲ್ಲಿ ಹಗುರ ಮಳೆಯಾಗುವ ಸಾಧ್ಯತೆಯಿದೆ. ಏಪ್ರಿಲ್ 8ರಿಂದ ಏಪ್ರಿಲ್ 9 ರಂದು ಎಲ್ಲಿ ಜೋರು ಮಳೆ ಮಳೆಯ ತೀವ್ರತೆಯು ಉತ್ತರ ಕರ್ನಾಟಕದ ಜಿಲ್ಲೆಗಳಾದ ಬೀದರ್, ಕಲಬುರಗಿ, ಯಾದಗಿರಿ ಮತ್ತು ರಾಯಚೂರು ಭಾಗಗಳಲ್ಲಿ ಕಂಡುಬರಲಿದೆ. ಮಲೆನಾಡು ಮತ್ತು ಕರಾವಳಿ ಜಿಲ್ಲೆಗಳಾದ ಶಿವಮೊಗ್ಗ, ಚಿಕ್ಕಮಗಳೂರು, ಹಾಸನ, ಕೊಡಗು, ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಮಳೆ ಮುಂದುವರಿಯಲಿದೆ. ಬೆಂಗಳೂರು ಮತ್ತು ಸುತ್ತಮುತ್ತಲಿನ ಜಿಲ್ಲೆಗಳಲ್ಲೂ ಮಳೆಯ ಮುನ್ಸೂಚನೆ ಇದೆ.



**ವಿವಿಧೆಡೆ ಮಳೆ**

**ಕರಾವಳಿ ಮತ್ತು ಮಲೆನಾಡು**

ಉತ್ತರ ಕನ್ನಡ, ಉಡುಪಿ, ದಕ್ಷಿಣ ಕನ್ನಡ, ಶಿವಮೊಗ್ಗ, ಚಿಕ್ಕಮಗಳೂರು, ಹಾಸನ ಮತ್ತು ಕೊಡಗು ಜಿಲ್ಲೆಗಳಲ್ಲಿ ಗುಡುಗು ಸಹಿತ ಮಳೆಯಾಗುವ ಸಂಭವವಿದೆ. ಉತ್ತರ ಒಳನಾಡು ಬೆಳಗಾವಿ, ಧಾರವಾಡ, ಗದಗ, ಕಲಬುರಗಿ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಮಳೆ ಮತ್ತು ಬಿರುಗಾಳಿಯ ಮುನ್ಸೂಚನೆ ಇದೆ.

## ಕೇರಳ ಚುನಾವಣೆಯಲ್ಲಿ ಕಾಂಗ್ರೆಸ್-ಬಿಜೆಪಿ ನಡುವೆ ಒಳ ಒಪ್ಪಂದ ಆಗಿಲ್ಲ: ಡಿಕೆಶಿ

### ಅಭಿವೃದ್ಧಿಯನ್ನು ಮರೆಮಾಚಿ ಜನರನ್ನು ದಿಕ್ಕು ತಪ್ಪಿಸುವ ಪ್ರಯತ್ನ ; ನಿರುದ್ಯೋಗದ ಸಮಸ್ಯೆ ತೀವ್ರ

• ಉದಯವಾಹಿನಿ, ಬೆಂಗಳೂರು

ಕೇರಳ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ನಡುವೆ ಯಾವುದೇ ಒಳಒಪ್ಪಂದ ಆಗಿಲ್ಲ ಎಂದು ಕರ್ನಾಟಕದ ಉಪಮುಖ್ಯಮಂತ್ರಿ ಹಾಗೂ ಪಕ್ಷದ ರಾಜ್ಯಾಧ್ಯಕ್ಷ ಡಿ.ಕೆ.ಶಿವಕುಮಾರ್ ಸ್ಪಷ್ಟಪಡಿಸಿದ್ದಾರೆ.

ಕೇರಳ ಪ್ರವಾಸದಲ್ಲಿರುವ ಅವರು, ಸುದ್ದಿಗಾರರೊಂದಿಗೆ ಮಾತನಾಡಿದರು. ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ಕಾಂಗ್ರೆಸ್ ಮತ್ತು ಬಿಜೆಪಿಯ ನಡುವೆ ಒಳ ಒಪ್ಪಂದವಾಗಿದೆ ಎಂದು ಹೇಳುತ್ತಿದ್ದಾರೆ, ಆದರೆ ಆ ರೀತಿ ಆಗಲು ಸಾಧ್ಯವಿಲ್ಲ. ಈ ಹಿಂದೆ ಕೇರಳದ ಜನ, ರಾಹುಲ್ ಗಾಂಧಿ ಅವರನ್ನು ಭರ್ಜರಿ ಬಹುಮತದಿಂದ ಸಂಸತ್‌ಗೆ ಆಯ್ಕೆ ಮಾಡಿದ್ದರು. ಆದರೆ ಬಿಜೆಪಿಯವರು ದುರುದ್ದೇಶ ಪೂರ್ವಕವಾಗಿ ರಾಹುಲ್‌ಗಾಂಧಿ ಅವರ ವಿರುದ್ಧ ದ್ವೇಷ ರಾಜಕಾರಣ ಮಾಡಿ, ಸಂಸತ್ ಸದಸ್ಯ ಸ್ಥಾನದಿಂದ ಅನರ್ಹಗೊಳಿಸಿದ್ದರು. ಪರಿಸ್ಥಿತಿ ಹೀಗಿರುವಾಗ ಕಾಂಗ್ರೆಸ್, ಬಿಜೆಪಿ ನಡುವೆ ಹೊಂದಾಣಿಕೆ ಇದೆ ಎಂದು ಹೇಳಲು ಹೇಗೆ ಸಾಧ್ಯ ಎಂದು ಪ್ರಶ್ನಿಸಿದರು. ಪಿಣರಾಯ್ ವಿಜಯನ್ ಅವರು ಕಳೆದ 10 ವರ್ಷಗಳಿಂದಲೂ ಕೇರಳದಲ್ಲಿ ಯಾವುದೇ ಅಭಿವೃದ್ಧಿ ಮಾಡಿಲ್ಲ. ತಮ ಲೋಪವನ್ನು ಮರೆಮಾಚಿಕೊಳ್ಳಲು ಈ ರೀತಿಯ ಅನಗತ್ಯ ವದಂತಿಗಳನ್ನು ಹರಡುತ್ತಿದ್ದಾರೆ ಎಂದು ದೂರಿದರು. ಕೇರಳ ರಾಜ್ಯದ ಮೂಲ ಭೂತ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡುತ್ತಿಲ್ಲ. ಶಬರಿಮಲೆಯಲ್ಲಿನ ಚಿನ್ನದ ಕಳ್ಳತನ ಗಂಭೀರ ಸಮಸ್ಯೆ. ಆದರೆ ಅದನ್ನು ಕೇಂದ್ರದ ಬಿಜೆಪಿಯೂ ತನಿಖೆ ಮಾಡಲಿಲ್ಲ, ಕೇರಳದ ಪೊಲೀಸರೂ ಸರಿಯಾದ ತನಿಖೆ ನಡೆಸಲಿಲ್ಲ. ಕೇಂದ್ರ ಸರ್ಕಾರ ಸಿಬಿಐ, ಜಾರಿ ನಿರ್ದೇಶನಾಲಯಗಳನ್ನು ತಮ ರಾಜಕೀಯ ವಿರೋಧಿಗಳನ್ನು ಹತ್ತಿಕ್ಕಲು ಮಾತ್ರ ಬಳಕೆ ಮಾಡುತ್ತಿದೆ. ಚಿನ್ನ ಕಳ್ಳತನದಂತಹ ಗಂಭೀರ ಪ್ರಕರಣಗಳನ್ನು ತನಿಖೆ ಮಾಡಲು ಬಳಸಲಿಲ್ಲ ಎಂದು ದೂರಿದರು.

ಅಭಿವೃದ್ಧಿಯನ್ನು ಮರೆಮಾಚಿ ಜನರನ್ನು ದಿಕ್ಕು ತಪ್ಪಿಸುವ ಪ್ರಯತ್ನ ಮಾಡಲಾಗುತ್ತಿದೆ ಎಂದು ಆರೋಪಿಸಿದರು. ಕೇರಳದಲ್ಲಿ ನಿರುದ್ಯೋಗದ ಸಮಸ್ಯೆ ತೀವ್ರವಾಗಿದೆ. ಮಧ್ಯಪ್ರಾಚ್ಯ ರಾಷ್ಟ್ರಗಳ ಯುದ್ಧದ ಪರಿಣಾಮದಿಂದ 25 ಲಕ್ಷ ಜನ ಭಾರತಕ್ಕೆ ಮರಳುತ್ತಿದ್ದಾರೆ. ಅವರಿಗೆ ಉದ್ಯೋಗ ಕಲ್ಪಿಸುವುದು ದೊಡ್ಡ ಸವಾಲು. ಸ್ಥಳೀಯ ಸರ್ಕಾರ ಆ ಬಗ್ಗೆ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಹೇಳಿದರು.

ಎಲ್‌ಡಿಎಫ್ ಸರ್ಕಾರ 10 ವರ್ಷಗಳಿಂದ ಲೂಟಿ ಮಾಡುವುದನ್ನು ಬಿಟ್ಟು ಬೇರೇನೂ ಮಾಡಿಲ್ಲ, ಇದಕ್ಕಾಗಿ ಜನ ಬದಲಾವಣೆ ಬಯಸಿದ್ದಾರೆ. ಮೂರನೇ ಎರಡರಷ್ಟು ಬಹುಮತದೊಂದಿಗೆ ಕಾಂಗ್ರೆಸ್ ನೇತೃತ್ವದ ಯುಡಿಎಫ್ ಸರ್ಕಾರವನ್ನು ಮರಳಿ ಅಧಿಕಾರಕ್ಕೆ ತರಳಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಕರ್ನಾಟಕ, ತೆಲಂಗಾಣ, ಹಿಮಾಚಲ ಪ್ರದೇಶದಲ್ಲಿ ಕಾಂಗ್ರೆಸ್ ಪಕ್ಷ ಕೊಟ್ಟ ಮಾತಿನಂತೆ ನಡೆದುಕೊಂಡಿದೆ. ಕೇರಳದಲ್ಲೂ ಮುಂದಿನ ದಿನಗಳಲ್ಲಿ ಕಾಂಗ್ರೆಸ್ ನೇತೃತ್ವದ ಸರ್ಕಾರ ರಚನೆಯಾಗಲಿದೆ, ಜನರಿಗೆ ಅನುಕೂಲವಾಗಲಿದೆ ಎಂದರು.



**ಕೇಂದ್ರ ಬಿಜೆಪಿಯಲ್ಲೂ ತನಿಖೆ ಮಾಡಲಿ**

### ಬಿಜೆಪಿಗರು ಜನರ ಕ್ಷಮೆ ಕೇಳಲಿ: ಡಿಕೆಶಿ

ರಾಜ್ಯದಲ್ಲಿ ಅಡುಗೆ ಅನಿಲ, ಆಟೋ ಗ್ಯಾಸ್ ಅಭಾವದ ಸಮಸ್ಯೆ ಹೆಚ್ಚಾಗುತ್ತಿದೆ. ಆಟೋ ಚಾಲಕರಿಗೆ ಇದರಿಂದ ಬಹಳ ತೊಂದರೆಯಾಗುತ್ತಿದ್ದು, ಸಂಚಾರ ವ್ಯವಸ್ಥೆ ಮೇಲೆ ಪರಿಣಾಮ ಬೀರುತ್ತಿದೆ. ಜತೆಗೆ ಹೋಟೆಲ್ ಕ್ಷೇತ್ರವು ಸಮಸ್ಯೆ ಎದುರಿಸುತ್ತಿದೆ. ಕೇಂದ್ರ ಸರ್ಕಾರ ಈ ಬಗ್ಗೆ ಗಮನಹರಿಸಬೇಕು ಎಂದು ಡಿ.ಕೆ.ಶಿವಕುಮಾರ್ ಆಗ್ರಹಿಸಿದರು. ಅನಿಲ ಪೂರೈಕೆ ಅಧಿಕಾರ ರಾಜ್ಯ ಸರ್ಕಾರದ ಕೈಯಲ್ಲಿಲ್ಲ. ಕೇಂದ್ರ ಸರ್ಕಾರದ ವ್ಯಾಪ್ತಿಗೆ ಬರುತ್ತದೆ. ಕೇಂದ್ರ ಸರ್ಕಾರ ಮುಂಜಾಗ್ರತಾ ನೀತಿ ರೂಪಿಸಬೇಕಿತ್ತು. ಈ ವಿಚಾರದಲ್ಲಿ ವಿಫಲವಾಗಿದೆ. ಬಿಜೆಪಿಯವರು ಈವರೆಗೂ ಏಕೆ ಮಾತನಾಡುತ್ತಿಲ್ಲ. ನಮ್ಮಿಂದ ತೊಂದರೆಯಾಗಿದೆ. ಎಂದು ಒಪ್ಪಿಕೊಂಡು ಜನರ ಬಳಿ ಕ್ಷಮೆ ಕೋರಬೇಕು ಎಂದು ತಿಳಿಸಿದರು.



### ಕಾಂಗ್ರೆಸ್‌ಗೆ ಹೆಚ್ಚು ಮತ

ದಾವಣಗೆರೆ ದಕ್ಷಿಣ ಹಾಗೂ ಬಾಗಲಕೋಟೆ ವಿಧಾನಸಭಾ ಕ್ಷೇತ್ರಗಳಲ್ಲಿ ಕಳೆದ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ದೊರೆತ ಮತಕ್ಕಿಂತ ಈ ಬಾರಿಯ ಉಪಚುನಾವಣೆಯಲ್ಲಿ ಹೆಚ್ಚು ಮತ ಬೀಳಲಿದ್ದು, ನಮ್ಮ ಅಭ್ಯರ್ಥಿಗಳು ಹೆಚ್ಚು ಮತಗಳ ಅಂತರದಲ್ಲಿ ಗೆಲ್ಲಲಿದ್ದಾರೆ ಡಿಸಿಎಂ ಡಿ.ಕೆ.ಶಿವಕುಮಾರ್ ವಿಶ್ವಾಸ ವ್ಯಕ್ತಪಡಿಸಿದರು.

ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ದಾವಣಗೆರೆ ಹಾಗೂ ಬಾಗಲಕೋಟೆಯ ಉಪಚುನಾವಣೆ ಪ್ರಚಾರ ಮಾಡಿ ಬಂದಿದ್ದೇನೆ. ನಮ್ಮ ಕಾರ್ಯಕರ್ತರು ಬಹಳ ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. ಪ್ರತಿ ಮನೆ ಮನೆಗೆ ಹೋಗಿ ಗ್ಯಾರಂಟಿ ಯೋಜನೆಗಳ ಬಗ್ಗೆ ಮನವರಿಕೆ ಮಾಡುತ್ತಿದ್ದಾರೆ.

ಗ್ಯಾರಂಟಿ ಫಲಾನುಭವಿಗಳಲ್ಲಿ ಕಳೆದ ಬಾರಿ ಬಿಜೆಪಿಗೆ ಮತ ಹಾಕಿರುವವರೂ ಈ ಬಾರಿ ಕಾಂಗ್ರೆಸ್‌ಗೆ ಮತ ಹಾಕುವುದಾಗಿ ತಿಳಿಸಿದ್ದಾರೆ. ಬೆಲೆ ಏರಿಕೆಯಾಗುತ್ತಿರುವ ಪರಿಸ್ಥಿತಿಯಲ್ಲಿ ಗ್ಯಾರಂಟಿ ಯೋಜನೆ ಎಷ್ಟು ನೆರವಾಗುತ್ತಿವೆ ಎಂದು ಸ್ಮರಿಸುತ್ತಿದ್ದಾರೆ. ಇವುಗಳನ್ನು ಉಳಿಸಿಕೊಳ್ಳಲು ಜನ ತೀರ್ಮಾನಿಸಿದ್ದಾರೆ ಎಂದು ತಿಳಿಸಿದರು.

**ಈ ದಿನದ ದರ** ಪೆಟ್ರೋಲ್: 103.33 ₹/L ಡೀಸೆಲ್ : 91.23₹/L ಬಂಗಾರ: ₹15,093/Gram24ct ₹13,835/Gram22ct ಬೆಳ್ಳಿ: ₹250.00/Gram

## ಭಜನ-ಪ್ರವಚನ-ಸಂಕೀರ್ತನ

• ಉದಯವಾಹಿನಿ, ಬೆಂಗಳೂರು


ಉದಯವಾಹಿನಿ ಚಿತ್ರ

ತಿರುಮಲ ತಿರುಪತಿ ದೇವಸ್ಥಾನಗಳು ಹಿಂದೂಧರ್ಮ ಪ್ರಚಾರ ಪರಿಷತ್ ವತಿಯಿಂದ ಸುಬ್ರಹ್ಮಣ್ಯನಗರದ ಸೋಸಲೆ ಶ್ರೀ ವ್ಯಾಸರಾಜ ಮಠದಲ್ಲಿ ಏಪ್ರಿಲ್ 7 ರಿಂದ 10ರ ವರೆಗೆ ಧಾರ್ಮಿಕ/ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು ಅವುಗಳ ವಿವರಗಳು ಈ ರೀತಿ ಇವೆ ಭಜನಾ ಕಾರ್ಯಕ್ರಮ (ಪ್ರತಿದಿನ ಸಂಜೆ 6 ರಿಂದ 7) ಏಪ್ರಿಲ್ 7-ಜಾನ್ಹವಿ ಭಜನಾ ಮಂಡಳಿ, ಏಪ್ರಿಲ್ 8-ಸುರಭಿ ಗಾನ ಭಜನಾ ಮಂಡಳಿ, ಏಪ್ರಿಲ್ 9-ಪವಿತ್ರ ಗಾನ ವೃಂದ ಭಜನಾ ಮಂಡಳಿ. ಪ್ರವಚನ ಕಾರ್ಯಕ್ರಮ (ಪ್ರತಿದಿನ ಸಂಜೆ 7 ರಿಂದ 8) ಪ್ರವಚನಕಾರರು ಶ್ರೀ ರಾಮವಿಠಲಾಚಾರ್, ವಿಷಯ ಭಾವಿಸಮೀರ ಶ್ರೀ ವಾದಿರಾಜರ ವಿರಚಿತ ಹರಿಸರ್ವೋತ್ತಮ ಸಾರ.

ಗಾಯನ ಕಾರ್ಯಕ್ರಮ ಏಪ್ರಿಲ್ 10, ಶುಕ್ರವಾರ ಸಂಜೆ 6-30 ರಿಂದ 8-00ರ ವರೆಗೆ ಯುವ ಗಾಯಕ ಶ್ರೀ ಕೆ.ಪಿ. ಶಿಶಿರ್ ಅವರು ಹರಿನಾಮ ಸಂಕೀರ್ತನೆ ನಡೆಸಿಕೊಡಲಿದ್ದು, ಇವರ ಗಾಯನಕ್ಕೆ ಪಿಟೀಲು ವಾದನದಲ್ಲಿ ವಿ. ಶ್ರೀ ಎಂ.ಎಸ್. ಗೋವಿಂದಸ್ವಾಮಿ ಮತ್ತು ತಬಲಾ ವಾದನದಲ್ಲಿ ಶ್ರೀ ಧ್ರುವ ಆಚಾರ್ಯ ಸಾಥ್ ನೀಡಲಿದ್ದಾರೆ ಎಂದು ಟಿಟಿಡಿ ಹೆಚ್.ಡಿ.ಪಿ.ಪಿ ಸಂಚಾಲಕರಾದ ಡಾ. ಪಿ. ಭುಜಂಗರಾವ್ ತಿಳಿಸಿದ್ದಾರೆ. ಕಾರ್ಯಕ್ರಮ ನಡೆಯುವ ಸ್ಥಳ ಶ್ರೀ ವ್ಯಾಸರಾಜ ಮಠ (ಸೋಸಲೆ), 5ನೇ ಮುಖ್ಯರಸ್ತೆ, 'ಎ' ಬ್ಲಾಕ್, ರಾಜಾಜಿನಗರ 2ನೇ ಹಂತ ಸುಬ್ರಹ್ಮಣ್ಯನಗರ, ಬೆಂಗಳೂರು 560010

## ಮದ್ಯ ಸೇವಿಸಿ ಪೊಲೀಸರಿಗೆ ಸಿಕ್ಕಿಬಿದ್ದ ಲಾರಿ ಚಾಲಕ ಆತ್ಮಹತ್ಯೆ

• ಉದಯವಾಹಿನಿ, ಬೆಂಗಳೂರು

ಲಾರಿ ಚಾಲಕನೊಬ್ಬ ನೇಣು ಬಿಗಿದುಕೊಂಡು ಆತಹತ್ಯೆ ಮಾಡಿಕೊಂಡಿರುವ ಘಟನೆ ಜೆ ಪಿ ನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ. ತಮಿಳುನಾಡು ಮೂಲದ ಷಣುಗ (26) ಆತಹತ್ಯೆಗೆ ಶರಣಾದ ಲಾರಿ ಚಾಲಕ.

ತಮಿಳುನಾಡಿನಿಂದ ಲಾರಿಯಲ್ಲಿ ಲೋಡ್ ಮಾಡಿಕೊಂಡು ಚಾಲಕ ಬೆಂಗಳೂರಿಗೆ ಬಂದು ಜೆಪಿನಗರ 22ನೇ ಮುಖ್ಯರಸ್ತೆಯಲ್ಲಿ ಹೋಗುತ್ತಿದ್ದರು.ಆ ಸಂದರ್ಭದಲ್ಲಿ ಜೆಪಿನಗರ ಸಂಚಾರಿ ಠಾಣೆ ಪೊಲೀಸರು ಡ್ರಂಕ್ ಅಂಡ್ ಡ್ರೈವ್ ಪರಿಶೀಲನೆ ಮಾಡಲು ವಾಹನಗಳನ್ನು ತಪಾಸಣೆ ಮಾಡುತ್ತಿದ್ದರು. ಇದೇ ಮಾರ್ಗದಲ್ಲಿ ಬಂದ ಈ ಲಾರಿಯನ್ನು ತಡೆದು ಚಾಲಕನನ್ನು ಪರೀಕ್ಷಿಸಿದಾಗ ಮದ್ಯ ಸೇವಿಸಿರುವುದು ಕಂಡು ಬಂದಿದೆ. ಹಾಗಾಗಿ ಆತನಿಗೆ ನೋಟೀಸ್ ಕೊಟ್ಟು ಕಳುಹಿಸಿದ್ದಾರೆ. ಇದರಿಂದ ಬೇಸರಗೊಂಡು ಲಾರಿ ಚಾಲಕ ಮಾಲೀಕರಿಗೆ ಗೊತ್ತಾದರೆ ನನಗೆ ಬೈಯುತ್ತಾರೆಂದು ಹೆದರಿ 32ನೇ ಮುಖ್ಯ ರಸ್ತೆಗೆ ಹೋಗಿ ಲಾರಿ ಸ್ಟ್ಯಾಂಡ್‌ನಲ್ಲಿ ನಿಲ್ಲಿಸಿದ್ದ ಲಾರಿಯ ಟಾಪ್‌ನ ಹುಕ್ಕಿಗೆ ಹಗ್ಗದಿಂದ ನೇಣು ಬಿಗಿದುಕೊಂಡು ಆತಹತ್ಯೆ ಮಾಡಿಕೊಂಡಿದ್ದಾನೆ. ಈ ವಿಷಯ ತಿಳಿದು ಪೊಲೀಸರು ಸ್ಥಳಕ್ಕೆ ಹೋಗಿ ಪರಿಶೀಲಿಸಿ ಪ್ರಕರಣ ದಾಖಲಿಸಿಕೊಂಡು, ಮೃತನ ಕುಟುಂಬಕ್ಕೆ ಮಾಹಿತಿ ನೀಡಿ ಮುಂದಿನ ಕ್ರಮ ಕೈಗೊಂಡಿದ್ದಾರೆ.

## ಮಹಿಳಾ ಕಸ್ಟಮ್ಸ್ ಅಧಿಕಾರಿ ಮೇಲೆ ಲೈಂಗಿಕ ದೌರ್ಜನ್ಯ : ಉದ್ಯಮಿ ಬಂಧನ

• ಉದಯವಾಹಿನಿ, ಬೆಂಗಳೂರು

ಮಹಿಳಾ ಕಸ್ಟಮ್ಸ್ ಅಧಿಕಾರಿಯೊಬ್ಬರಿಗೆ ಪ್ರೀತಿಯ ನಾಟಕವಾಡಿ ಸಲುಗೆ ಬೆಳೆಸಿಕೊಂಡು ಬ್ಲಾಕ್‌ಮೇಲ್ ಮಾಡಿ ಲೈಂಗಿಕ ದೌರ್ಜನ್ಯವೆಸಗಿದ್ದ ಉದ್ಯಮಿಯನ್ನು ಇಂದಿರಾನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ. ಒಂಬತ್ತು ವರ್ಷದ ಹಿಂದೆ ಮಹಿಳಾ ಕಸ್ಟಮ್ಸ್ ಅಧಿಕಾರಿಯೊಬ್ಬರ ಹಿಂದೆ ಬಿದ್ದು ಉದ್ಯಮಿ ಕೃಪಲಾನಿ ಎಂಬಾತ ಪರಿಚಯ ಮಾಡಿಕೊಂಡು ಸ್ನೇಹ ಬೆಳೆಸಿದ್ದಾನೆ. ಆರೋಪಿ ಕೃಪಲಾನಿ ಎಲೆಕ್ಟ್ರಾನಿಕ್ ಬ್ಯುಸಿನೆಸ್ ನಡೆಸುತ್ತಿದ್ದು, ಈ ಕಸ್ಟಮ್ಸ್ ಮಹಿಳಾ ಅಧಿಕಾರಿ ಜೊತೆ ಪ್ರೀತಿಯ ನಾಟಕವಾಡಿ ಮದುವೆ ಮಾಡಿಕೊಳ್ಳುವುದಾಗಿ ಆಮಿಷವೊಡ್ಡಿ ಲೈಂಗಿಕ ದೌರ್ಜನ್ಯ ವೆಸಗಿದ್ದಾನೆ. ನಾನು ಹೇಳಿದಂತೆ ಕೇಳದಿದ್ದರೆ ನಿಮ ಖಾಸಗಿ ಫೋಟೋ , ವಿಡಿಯೋ ವೈರಲ್ ಮಾಡುವುದಾಗಿ ಸಹ ಆರೋಪಿ ಬೆದರಿಸಿದ್ದಾನೆ. ದಿನ ಕಳೆದಂತೆ ಉದ್ಯಮಿಯ ವರ್ತನೆಯಿಂದ ಬೇಸತ್ತು ಈ ಅಧಿಕಾರಿ ಯಲಹಂಕ ಪೊಲೀಸ್ ಠಾಣೆಗೆ ದೂರು ನೀಡಿದ್ದು, ಅತ್ಯಾಚಾರ ಪ್ರಕರಣ ದಾಖಲಾಗಿದೆ. ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ಇಂದಿರಾನಗರ ಪೊಲೀಸ್ ಠಾಣೆಗೆ ವರ್ಗಾಯಿಸಿ ತನಿಖೆಗಾಗಿ ಪುಲಕೇಶಿನಗರ ಉಪವಿಭಾಗದ ಎಸಿಪಿ, ಇನ್‌ಸ್ಪೆಕ್ಟರ್‌ಗೆ ಸೂಚಿಸಲಾಗಿತ್ತು. ತನಿಖೆ ಕೈಗೊಂಡ ಪೊಲೀಸರು ಆರೋಪಿ ಉದ್ಯಮಿಯನ್ನು ಬಂಧಿಸಿ ವಿಚಾರಣೆಗೆ ಒಳಪಡಿಸಿದ್ದಾರೆ. ಈ ಮಹಿಳಾ ಅಧಿಕಾರಿಯ ಕಣ್ತಪ್ಪಿಸಿ ಆರೋಪಿ ಅವ್ಯವಹಾರ ನಡೆಸಿದ್ದಾನೆ. ಅಷ್ಟೇ ಅಲ್ಲದೆ ಕೆಲಸದ ಕೆಲ ಲೂಪ್‌ಗಳನ್ನು ತಿಳಿದುಕೊಂಡು ಈ ಅಧಿಕಾರಿಯನ್ನು ಬಳಸಿಕೊಂಡು ಕೆಲ ಕಸ್ಟಮ್ಸ್ ಅಧಿಕಾರಿಗಳ ಮೇಲೆ ಸುಳ್ಳು ಪ್ರಕರಣ ದಾಖಲಿಸಿ ಹಣ ಕೂಡ ಪಡೆದಿದ್ದಾನೆ ಎಂಬ ಆರೋಪ ಸಹ ಕೇಳಿ ಬಂದಿದೆ. ಈ ಎಲ್ಲಾ ಆರೋಪಗಳ ಬಗ್ಗೆ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

## ಶಾಲೆ ಬಳಿ ತಂಬಾಕು ಉತ್ಪನ್ನ ಮಾರಾಟ: ದಂಡ, ನೋಟಿಸ್

• ಉದಯವಾಹಿನಿ, ದೊಡ್ಡಬಳ್ಳಾಪುರ

ಶಾಲಾ ಆವರಣದ ಸುತ್ತಮುತ್ತ ನಿಯಮ ಉಲ್ಲಂಘಿಸಿ ತಂಬಾಕು ಉತ್ಪನ್ನ ಮಾರಾಟ ಮಾಡುತ್ತಿದ್ದ ಐದು ಅಂಗಡಿಗಳ ಮೇಲೆ ದಾಳಿ ನಡೆಸಿದ ಅಧಿಕಾರಿಗಳು ಅಂಗಡಿ ಮಾಲೀಕರಿಗೆ ನೋಟಿಸ್ ನೀಡಿ, ದಂಡ ವಿಧಿಸಿದರು. ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷರ ಉಪಸ್ಥಿತಿಯಲ್ಲಿ ನಡೆದ ಮಕ್ಕಳ ಹಕ್ಕುಗಳ ನಗರಸಭೆ ಕಾರ್ಯಕ್ರಮದಲ್ಲಿ ಶಾಲಾ ಮಕ್ಕಳು ತಮ್ಮ ಶಾಲೆಯ ಆವರಣದಲ್ಲಿ ತಂಬಾಕು ಮಾರಾಟ ಮಾಡುತ್ತಿರುವ ಬಗ್ಗೆ ಮತ್ತು ಮಾದಕ ವಸ್ತುಗಳ ಬಳಕೆಯ ಬಗ್ಗೆ ದೂರು ನೀಡಿದ್ದರು.

ಸಿಗರೇಟು, ಗುಟ್ಕಾ ಪ್ಯಾಕೆಟ್‌ಗಳು ಮತ್ತು ನಿರ್ಬಂಧಿತ ಏಕಬಳಕೆ ಪ್ಲಾಸ್ಟಿಕ್ ವಶಪಡಿಸಿಕೊಂಡ ಅಧಿಕಾರಿಗಳು ಶಾಲಾ ಆವರಣದ ಸುತ್ತಮುತ್ತ ಇಂತಹ ಪದಾರ್ಥಗಳ ಮಾರಾಟ ಸಹಿಸುವುದಿಲ್ಲ ಎಂದು ಅಂಗಡಿ ಮಾಲೀಕರಿಗೆ ಎಚ್ಚರಿಕೆ ನೀಡಿದರು.

## ಯುದ್ಧ ಬೇಡ ಶಾಂತಿ ಬೇಕು ಬೆಂಗಳೂರಲ್ಲಿ ಪ್ರತಿಭಟನೆ

• ಉದಯವಾಹಿನಿ, ಬೆಂಗಳೂರು

ಪಶ್ಚಿಮ ಏಷ್ಯಾದಲ್ಲಿನ ಯುದ್ಧ ಮುಗ್ಧ ಜನರ ಮಾರಣ ಹೋಮ ನಡೆಯುತ್ತಿರುವುದನ್ನು ಪ್ರತಿಭಟಿಸಿ, 'ಯುದ್ಧ ಬೇಡ ಶಾಂತಿ ಬೇಕು' ಎಂಬ ಘೋಷ ವಾಕ್ಯದೊಂದಿಗೆ ಆಳಂದ ಕಾಂಗ್ರೆಸ್ ಶಾಸಕ ಬಿ.ಆರ್. ಪಾಟೀಲ ಅವರ ನೇತೃತ್ವದಲ್ಲಿ ಗಾಂಧಿಭವನದಲ್ಲಿ ಸತ್ಯಾಗ್ರಹ ನಡೆಯಿತು. ಯುದ್ಧ ಕನಸುಗಳನ್ನು ಕೊಲ್ಲುತ್ತದೆ', 'ಯುದ್ಧ ಬೇಡ, ಮಾನವೀಯತೆ ಆಯ್ಕೆ ಮಾಡಿ', 'ಶಕ್ತಿಗಾಗಿ ಅಲ್ಲ ಶಾಂತಿಗಾಗಿ ಹೋರಾಡಿ', 'ನಾನು ಯುದ್ಧ ವಿರೋಧಿ, ಶಾಂತಿ ಬೇಕು' ಮುಂತಾದ ಘೋಷಣೆಗಳಿರುವ ಭಿತ್ತಿ ಫಲಕಗಳನ್ನು ಸತ್ಯಾಗ್ರಹದಲ್ಲಿ ಭಾಗವಹಿಸಿದವರು ಪ್ರದರ್ಶಿಸಿ ಶಾಂತಿ ಪರವಾದ ತಮ್ಮ ನಿಲುವು ವ್ಯಕ್ತಪಡಿಸಿದರು.

ಅಲ್ಲದೆ, 'ರಘುಪತಿ ರಾಘುವ ರಾಜಾರಾಂ...' ಹಾಡುವ ಮೂಲಕ ಬುದ್ಧ ಹಾಗೂ ಗಾಂಧಿಯ ಸತ್ಯ, ಅಹಿಂಸೆಯ, ಶಾಂತಿಪ್ರಿಯ ದೇಶ ಎಂದೆಲ್ಲಾ ಕರೆಯಿಸಿಕೊಳ್ಳುವ ನಾವು ಜಗತ್ತಿನಲ್ಲಿ ಯುದ್ಧೋನ್ಮಾದದಲ್ಲಿ ಮಗ್ನರಾಗಿರುವ ದೇಶಗಳ ಮುಗ್ಧ ಜನರ ಮಾರಣ ಹೋಮವನ್ನು ಖಂಡಿಸದೆ ಸುಮ್ಮನಿರುವುದು ಅಪರಾಧ. ಮನುಷ್ಯತ್ವಕ್ಕೇ ಅಪಮಾನ. ಹೀಗಾಗಿ. ಮಾನವೀಯ ಮೌಲ್ಯಗಳಿಗೆ ಬೆಲೆ ಕೊಡಬೇಕಿದೆ ಎಂದು ಪ್ರತಿಪಾದಿಸಿದರು.

## ಶ್ರೀ ಕೃಷ್ಣ ಪಿಯು ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಕಾರ್ಯಗಾರ

• ಉದಯವಾಹಿನಿ, ಬೆಂಗಳೂರು


ಉದಯವಾಹಿನಿ ಚಿತ್ರ

ಬನಶಂಕರಿ 3ನೇ ಹಂತದ ಐಟಿಐ ಲೇಔಟ್‌ನಲ್ಲಿರುವ ಶ್ರೀಕೃಷ್ಣ ಪಿಯು ಕಾಲೇಜಿನಲ್ಲಿ ಶ್ರೀ ಕೃಷ್ಣ ಸಂಸ್ಥೆ ಹಾಗೂ ಆಕಾಶ್ ಎಜುಕೇಶನ್ ಸರ್ವಿಸಸ್ ಇವರ ಸಹಯೋಗದಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯನ್ನು ಪೂರೈಸಿದ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಕಾರ್ಯಗಾರವನ್ನು ಕಾಲೇಜಿನ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಯಿತು.

ಈ ಕಾರ್ಯಕ್ರಮದಲ್ಲಿ ಆಕಾಶ್ ಎಜುಕೇಶನ್ ಸರ್ವಿಸಸ್ ನಿರ್ದೇಶಕರಾದ ಶ್ರೀ ಹರೀಶ್, ಜಯನಗರ ಕೇಂದ್ರದ ಮುಖ್ಯಸ್ಥರಾದ ಶ್ರೀ ಗಿರೀಶ್, ರಾಜ್ಯ ನಿರ್ದೇಶಕರಾದ ಶ್ರೀ ರಾಜೇಶ್ ಮುಖ್ಯ ಅತಿಥಿಗಳಾಗಿ ಭಾಗವಹಿಸಿದರು. ಜೊತೆಗೆ ಶ್ರೀ ಕೃಷ್ಣ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರಾದ ಡಾ. ಎಂ. ರುಕ್ಮಾಂಗದ ನಾಯ್ಡು, ಶೈಕ್ಷಣಿಕ ನಿರ್ದೇಶಕರಾದ ಪ್ರೊ. ಎಸ್.ಪಿ. ಮನೋಹರ್, ಶಾಲಾ ನಿರ್ದೇಶಕರಾದ ಶ್ರೀಮತಿ ಶಾಂತಲಾ ರವಿಶಂಕರ್, ಐಸಿಐಸಿಇ ಶಾಲೆಯ ಪ್ರಾಂಶುಪಾಲರಾದ ಶ್ರೀಮತಿ ಪದ್ಮನವನೀತ್, ರಾಜ್ಯ ಪಠ್ಯ ಶಾಲೆಯ ಮುಖ್ಯ ಶಿಕ್ಷಕರಾದ ಶ್ರೀಮತಿ ವನಿತಾ, ಶಿಕ್ಷಕರು, ವಿದ್ಯಾರ್ಥಿಗಳು ಹಾಗೂ ಪೋಷಕರು ಉಪಸ್ಥಿತರಿದ್ದರು.

ಮುಖ್ಯ ಅತಿಥಿಯಾದ ಶ್ರೀ ರಾಜೇಶ್ ಅವರು ಮಾತನಾಡುತ್ತಾ, ಎಸ್‌ಎಸ್‌ಎಲ್‌ಸಿ ನಂತರ ವಿದ್ಯಾರ್ಥಿಗಳು ಪಿಯುಸಿಯಲ್ಲಿ ಆಯ್ಕೆ ಮಾಡಿಕೊಳ್ಳಬಹುದಾದ ವಿವಿಧ ಕೋರ್ಸ್‌ಗಳ ಬಗ್ಗೆ ವಿವರಿಸಿದರು. ಇಂಜಿನಿಯರಿಂಗ್, ಮೆಡಿಕಲ್, ಕಂಪ್ಯೂಟರ್ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಲಭ್ಯವಿರುವ ಅವಕಾಶಗಳು ಮತ್ತು ಭವಿಷ್ಯದಲ್ಲಿ ಲಾಭದಾಯಕವಾಗುವ ಮಾರ್ಗಗಳ ಬಗ್ಗೆ ವಿದ್ಯಾರ್ಥಿಗಳು ಹಾಗೂ ಪೋಷಕರಿಗೆ ಸಮಗ್ರ ಮಾಹಿತಿ ನೀಡಿದರು. ಮುಂದಿನ ಶೈಕ್ಷಣಿಕ ವರ್ಷದಿಂದ ಶ್ರೀ ಕೃಷ್ಣ ಸಂಸ್ಥೆಯ ಸಹಯೋಗದಲ್ಲಿ ವಿಜ್ಞಾನ ವಿಭಾಗವನ್ನು ಪ್ರಾರಂಭಿಸುವುದಾಗಿ ತಿಳಿಸಿದರು.

ಸಂಸ್ಥಾಪಕ ಅಧ್ಯಕ್ಷರಾದ ಡಾ. ಎಂ. ರುಕ್ಮಾಂಗದ ನಾಯ್ಡು ಅವರು ಮಾತನಾಡುತ್ತಾ, ಸಂಸ್ಥೆಯಲ್ಲಿ ಪ್ರತಿವರ್ಷ ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯುಸಿ ಪರೀಕ್ಷೆಗಳಲ್ಲಿ ಶೇಕಡಾ 100ರಷ್ಟು ಫಲಿತಾಂಶ ಸಾಧನೆಯಾಗುತ್ತಿದೆ ಎಂದು ಹೇಳಿದರು. ಉತ್ತಮ ಶಿಕ್ಷಕ ವೃಂದದ ಮಾರ್ಗದರ್ಶನದಿಂದ ವಿದ್ಯಾರ್ಥಿಗಳು ರಾಜ್ಯಮಟ್ಟದಲ್ಲಿ ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಪೋಷಕರು ತಮ್ಮ ಮಕ್ಕಳನ್ನು ಸಂಸ್ಥೆಗೆ ಸೇರಿಸುವಂತೆ ಮನವಿ ಮಾಡಿದರು. ಜೊತೆಗೆ ಆಕಾಶ್ ಎಜುಕೇಶನ್ ಸರ್ವಿಸಸ್ ಸಹಯೋಗದಲ್ಲಿ ಮುಂದಿನ ವರ್ಷ ವಿಜ್ಞಾನ ವಿಭಾಗ ಪ್ರಾರಂಭವಾಗಲಿದೆ ಎಂದು ತಿಳಿಸಿದರು.

# ಎಐ ಬಿಸಿ ಎದುರಿಸಲು ಸಜ್ಜು

### ಕರ್ನಾಟಕದಲ್ಲಿ ಉದ್ಯೋಗ ನಷ್ಟ ತಡೆಗೆ ಹಲವು ಯೋಜನೆ, ಕೌಶಲ ತರಬೇತಿಗೆ ಒತ್ತು

• ಉದಯವಾಹಿನಿ, ಬೆಂಗಳೂರು

ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನದಿಂದ ಐ.ಟಿ, ಬಿ.ಟಿ ಸೇರಿದಂತೆ ನಾನಾ ವಲಯಗಳಲ್ಲಿ ಉದ್ಯೋಗಗಳ ಮೇಲೆ ಉಂಟಾಗಬಹುದಾದ ಪರಿಣಾಮವನ್ನು ಗಂಭೀರವಾಗಿ ಪರಿಗಣಿಸಿರುವ ಸರಕಾರ, 'ಎಐ'ನಿಂದಾಗಿ ಯುವಜನತೆ ನಿರುದ್ಯೋಗಿಗಳಾಗುವುದನ್ನು ತಡೆಯಲು ಹಲವು ಕ್ರಮಗಳನ್ನು ಕೈಗೊಂಡಿದೆ.

ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆಯು ಉದ್ಯೋಗ ಕ್ಷೇತ್ರದ ಮೇಲೆ 'ಎಐ' ಬೀರಬಹುದಾದ ಪರಿಣಾಮಗಳ ಕುರಿತು 'ಎಐ ರೆಡಿನೆಸ್ ಆ್ಯಂಡ್ ಇಂಪ್ಯಾಕ್ಟ್' ಹೆಸರಿನಲ್ಲಿ ಅನೌಪಚಾರಿಕ ಅಧ್ಯಯನ ನಡೆಸಿದೆ. 'ಎಐ'ನಿಂದ ಉಂಟಾಗುವ ಉದ್ಯೋಗ ನಷ್ಟದ ಪರಿಣಾಮ ತಗ್ಗಿಸಲು ಹಲವು ವಿಶೇಷ ನೀತಿ, ಕಾರ್ಯಯೋಜನೆ ರೂಪಿಸಿ ಜಾರಿಗೊಳಿಸಲು ಮುಂದಾಗಿದೆ.

ವೇಗವಾಗಿ ಬೆಳೆಯುತ್ತಿರುವ 'ಎಐ' ತಂತ್ರಜ್ಞಾನ ಅಳವಡಿಕೆಯ ಪರಿಣಾಮಗಳು ಕ್ಷೇತ್ರದಿಂದ ಕ್ಷೇತ್ರಕ್ಕೆ ವಿಭಿನ್ನವಾಗಿವೆ. ಜತೆಗೆ ಉದ್ಯೋಗಗಳ ಸ್ವರೂಪ, ಕೌಶಲ್ಯ ಅಗತ್ಯಗಳಲ್ಲಿ ಮಹತ್ತರ ಬದಲಾವಣೆಗಳೂ ಕಂಡುಬರುತ್ತಿರುವುದನ್ನು ಐಟಿಬಿಟಿ ಇಲಾಖೆ ಗಮನಿಸಿದೆ. ಈ ಹಿನ್ನೆಲೆಯಲ್ಲಿ ನಾನಾ ಕ್ಷೇತ್ರಗಳಿಗೆ ಸಂಬಂಧಪಟ್ಟಂತೆ ಅವಕಾಶಗಳು, ಅಪಾಯಗಳು, ಉದ್ಯೋಗ ಕ್ಷೇತ್ರದ ಮೇಲಿನ ಪರಿಣಾಮಗಳು ಹಾಗೂ ಡೇಟಾ ಸಿದ್ಧತೆಯಲ್ಲಿನ ಕೊರತೆಗಳನ್ನು ಅರ್ಥ ಮಾಡಿಕೊಳ್ಳಲು ಇಲಾಖೆಯು ಕ್ರಮ ಕೈಗೊಂಡಿದೆ. ಇದಕ್ಕಾಗಿ 'ಐಟಿ ವಿಷನ್ ಗ್ರೂಪ್' ಸದಸ್ಯರಾದ ಪ್ರಮುಖ ಸಂಸ್ಥೆಗಳ ಸಿಇಒಗಳು ಸೇರಿದಂತೆ ಉನ್ನತ ಅಧಿಕಾರಿಗಳ ಜತೆ ಇಲಾಖೆ ನಿರಂತರ ಸಂಪರ್ಕದಲ್ಲಿದೆ. 'ರೆಸ್ಪಾನ್ಸಿಬಲ್ ಎಐ ಕಮಿಟಿ' ಹೆಸರಿನಲ್ಲಿ ಉನ್ನತ ಮಟ್ಟದ ಸಮಿತಿ ರಚಿಸಲಾಗಿದ್ದು, ಅದರ ಮೂಲಕ 'ಎಐ' ಬಳಕೆಗೆ ಸಂಬಂಧಪಟ್ಟಂತೆ ಮಾರ್ಗಸೂಚಿಗಳನ್ನು ರೂಪಿಸಲಾಗುತ್ತಿದೆ. ಉದ್ಯೋಗಗಳ ಮೇಲೆ ಉಂಟಾಗುವ ಪರಿಣಾಮಗಳನ್ನು ಸಮರ್ಪಕವಾಗಿ ನಿರ್ವಹಿಸಲು ಕ್ರಮ ಕೈಗೊಂಡಿದೆ. ಸಾಮರ್ಥ್ಯ ವೃದ್ಧಿಗೆ ಒತ್ತು ನೀಡುವ ಉಪ ಸಮಿತಿಯನ್ನೂ ರಚಿಸಲಾಗಿದ್ದು, ಇದು ವಿಸ್ತೃತವಾಗಿ ಜಾರಿಗೊಳಿಸಬಹುದಾದ ತರಬೇತಿ ಕಾರ್ಯಕ್ರಮಗಳ ವಿನ್ಯಾಸಕ್ಕೆ ಮಾರ್ಗದರ್ಶನ ನೀಡುತ್ತಿರುವುದು ಮುಂದೆ ಉತ್ತಮ ಫಲಿತಾಂಶದ ನಿರೀಕ್ಷೆ ಮೂಡಿಸಿದೆ.




- ಕೃತಕ ಬುದ್ಧಿಮತ್ತೆ ಪರಿಣಾಮ ಕುರಿತು ಅಧ್ಯಯನ
- 'ರೆಸ್ಪಾನ್ಸಿಬಲ್ ಎಐ ಕಮಿಟಿ' ಹೆಸರಿನಲ್ಲಿ ಉನ್ನತ ಮಟ್ಟದ ಸಮಿತಿ ರಚಿಸಲಾಗಿದ್ದು, ಅದರ ಮೂಲಕ 'ಎಐ' ಬಳಕೆಗೆ ಸಂಬಂಧಪಟ್ಟಂತೆ ಮಾರ್ಗಸೂಚಿಗಳನ್ನು ರೂಪಿಸಲಾಗುತ್ತಿದೆ
- ಪದವಿ, ಸ್ನಾತಕೋತ್ತರ, ಕೈಗಾರಿಕಾ ವೃತ್ತಿಪರರಿಗೆ ಕ್ವಾಂಟಮ್-ಎಐ ಶಾಲೆಗಳು ಮತ್ತು ಕಾರ್ಯಾಗಾರಗಳನ್ನು ಸ್ಥಾಪಿಸುವ ಮೂಲಕ ಬಲವಾದ ಪ್ರತಿಭಾ ಸರಪಳಿಯನ್ನು ರೂಪಿಸಲು ಒತ್ತು ನೀಡಲಿದೆ.



**ಕೌಶಲ ವೃದ್ಧಿಗೆ ಮೂರು ಯೋಜನೆ:** ಎಐ ತಂತ್ರಜ್ಞಾನದಿಂದ ಉದ್ಯೋಗ ಕಳೆದುಕೊಳ್ಳುವ ಸಂಭಾವ್ಯ ಯುವಕರಿಗೆ ಮರುಕೌಶಲ (ರೀಸ್ಕಿಲ್ಲಿಂಗ್), ಕೌಶಲ ವೃದ್ಧಿ (ಅಪ್‌ಸ್ಕಿಲ್ಲಿಂಗ್) ಹಾಗೂ ಹೊಸ ಉದ್ಯೋಗ ಅವಕಾಶ ಕಲ್ಪಿಸಲು ಮೂರು ಯೋಜನೆಗಳನ್ನು ರೂಪಿಸಿದೆ.

### ಕೃತಕ ಬುದ್ಧಿಮತ್ತೆ ಅತ್ಯುನ್ನತ ಕೇಂದ್ರ

**ಐಐಟಿ ಅಲ್ಯೂಮ್ನಿ ಸೆಂಟರ್ ಬೆಂಗಳೂರು ಸಹಭಾಗಿತ್ವದಲ್ಲಿ 5 ವರ್ಷಕ್ಕೆ 'ಎಐ ಸೆಂಟರ್ ಆಫ್ ಎಕ್ಸಲೆನ್ಸ್' ಸ್ಥಾಪಿಸಿದೆ. ಇದು ಕೈಗಾರಿಕಾ ಅಗತ್ಯಗಳಿಗೆ ಹೊಂದಿಕೊಂಡ ಸಮಗ್ರ ರೀಸ್ಕಿಲ್ಲಿಂಗ್ ಹಾಗೂ ಸರ್ಟಿಫಿಕೇಟ್ ಕಾರ್ಯಕ್ರಮಗಳನ್ನು ಒದಗಿಸಲಿದೆ. ಹೊಸ ಪದವೀಧರರು, ಉದ್ಯೋಗದಲ್ಲಿರುವ ವೃತ್ತಿಪರರಿಗೆ ಅಗತ್ಯವಾದ ತಾಂತ್ರಿಕ, ಪ್ರಾಯೋಗಿಕ ಜ್ಞಾನವನ್ನು ಒದಗಿಸುವತ್ತದೆ. ಸ್ಟಾರ್ಟ್‌ಅಪ್‌ಗಳು, ವೃತ್ತಿಪರರಿಗೆ ಹೊಸ ಎಐ ತಂತ್ರಜ್ಞಾನಗಳು, ಸಾಧನಗಳನ್ನು ಅರ್ಥ ಮಾಡಿಕೊಳ್ಳಲು ಪೂರಕವಾದ ತರಬೇತಿ, ಮಾರ್ಗದರ್ಶನ, ನೈಜ ಪ್ರಾಜೆಕ್ಟ್‌ಗಳ ಅನುಭವ ನೀಡುತ್ತದೆ.**

**ನಿಪುಣ ಕರ್ನಾಟಕ:** ಯುವಕರ ಉದ್ಯೋಗಾರ್ಹತೆ ಹೆಚ್ಚಿಸಲು ಕೌಶಲ ತರಬೇತಿ ನೀಡುವುದು ಈ ಕಾರ್ಯಕ್ರಮದ ಉದ್ದೇಶ. ಶಿಕ್ಷಣ ಮತ್ತು ಕೈಗಾರಿಕಾ ಅಗತ್ಯಗಳ ನಡುವಿನ ಅಂತರ ನಿವಾರಣೆಗೆ ಒತ್ತು ನೀಡುವುದರ ಜತೆಗೆ ಮಷಿನ್ ಲರ್ನಿಂಗ್, ಡೇಟಾ ಸೈನ್ಸ್, ಸೈಬರ್ ಸುರಕ್ಷತೆ ಹಾಗೂ ಕ್ಲೌಡ್ ಕಂಪ್ಯೂಟಿಂಗ್‌ನಂತಹ ಹೊಸ ತಂತ್ರಜ್ಞಾನಗಳಲ್ಲಿ ತರಬೇತಿ ನೀಡಲಿದೆ. ಕೈಗಾರಿಕಾ ಸಹಭಾಗಿತ್ವದಲ್ಲಿ ರೂಪುಗೊಂಡ ಕಾರ್ಯಕ್ರಮದಲ್ಲಿ ಪ್ರಸ್ತುತ ಉದ್ಯೋಗ ಮಾರುಕಟ್ಟೆಯ ಅಗತ್ಯಕ್ಕೆ ಹೊಂದಿಕೊಳ್ಳುವಂತೆ ವಿನ್ಯಾಸಗೊಳಿಸಿರುವುದು ವಿಶೇಷ.

**ಕ್ವಾಂಟಮ್ ಎಐ ಮತ್ತು ಕಂಪ್ಯೂಟಿಂಗ್ ಕೇಂದ್ರ:** ಉದಯೋನ್ಮುಖ ತಂತ್ರಜ್ಞಾನಗಳಾದ ಕ್ವಾಂಟಮ್ ಕಂಪ್ಯೂಟಿಂಗ್, ಎಐ ಕ್ಷೇತ್ರದಲ್ಲಿ ಕೌಶಲ್ಯಾಭಿವೃದ್ಧಿ ಹಾಗೂ ಉದ್ಯೋಗ ಸೃಷ್ಟಿಗೆ ಉತ್ತೇಜಿಸಲು ಧಾರವಾಡ ರಿಸರ್ಚ್ ಪಾರ್ಕ್ ಫೌಂಡೇಷನ್ ಸಹಭಾಗಿತ್ವದಲ್ಲಿ 5 ವರ್ಷದ ಅವಧಿಗೆ ಕ್ವಾಂಟಮ್ ಎಐ ಮತ್ತು ಕಂಪ್ಯೂಟಿಂಗ್ ಕ್ಷೇತ್ರದಲ್ಲಿ ಅತ್ಯುನ್ನತ ಕೇಂದ್ರ ಸ್ಥಾಪಿಸಿದೆ. ಅದರಂತೆ ಪದವಿ, ಸ್ನಾತಕೋತ್ತರ, ಕೈಗಾರಿಕಾ ವೃತ್ತಿಪರರಿಗೆ ಕ್ವಾಂಟಮ್-ಎಐ ಶಾಲೆಗಳು ಮತ್ತು ಕಾರ್ಯಾಗಾರಗಳನ್ನು ಸ್ಥಾಪಿಸುವ ಮೂಲಕ ಬಲವಾದ ಪ್ರತಿಭಾ ಸರಪಳಿಯನ್ನು ರೂಪಿಸಲು ಒತ್ತು ನೀಡಲಿದೆ.

## ವೈಭವದ ಐತಿಹಾಸಿಕ ಕೆಂಗೇರಿ ಯಲ್ಲಮ್ಮ ದೇವಿಯ 50ನೇ ವರ್ಷದ ಕರಗ ಶಕ್ತ್ಯೋತ್ಸವ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ವೈಭವದ ಐತಿಹಾಸಿಕ ಕೆಂಗೇರಿ ಯಲ್ಲಮ್ಮ ದೇವಿಯ 50ನೇ ವರ್ಷದ ಕರಗ ಶಕ್ತ್ಯೋತ್ಸವವು ಶನಿವಾರ ತಡರಾತ್ರಿ ಸಾವಿರಾರು ಭಕ್ತರ ಸಮ್ಮುಖದಲ್ಲಿ ಅದ್ದೂರಿಯಾಗಿ ಜರುಗಿತು. ಸಂಪ್ರದಾಯದಂತೆ ಮಧ್ಯರಾತ್ರಿ 1.45ಕ್ಕೆ ಕರಗವನ್ನು ಹೊತ್ತ ಕರಗಧಾರಿ ಮುನಿಆಂಜೀನಪ್ಪ ಅವರು ದೇವಿಯ ಗರ್ಭಗುಡಿಯಿಂದ ಹೊರಬಂದು ದೇವಾಲಯಕ್ಕೆ ಮೂರು ಪ್ರದಕ್ಷಿಣೆ ಸಲ್ಲಿಸಿ ನಗರ ಪ್ರದಕ್ಷಿಣೆಗೆ ಹೊರಟ ಸಂದರ್ಭದಲ್ಲಿ ಈ ಕ್ಷಣಕ್ಕಾಗಿ ಕಾಯುತ್ತಿದ್ದ ಸಹಸ್ರಾರು ಭಕ್ತರು ಗೋವಿಂದನ ನಾಮಸ್ಮರಣೆ ಮಾಡುತ್ತಾ, ಕರಗಕ್ಕೆ ಮಲ್ಲಿಗೆ ಹೂವಿನ ಪುಷ್ಪಾರ್ಚನೆ ಮಾಡಿದರು. ಕೆಂಗೇರಿಯ ರಾಜಬೀದಿಗಳಲ್ಲಿ ಸಾಗಿದ ಕರಗ ರಾಮದೇವರು, ಆಂಜನೇಯ ಸ್ವಾಮಿ, ಮುಸ್ಲಿಮರ ದರ್ಗಾ, ಮಾರಮ್ಮ, ಕೋಟೆ ಸೋಮೇಶ್ವರ, ಅಂಬಾ ಭವಾನಿ, ಕಸ್ತೂರಮ್ಮನ ದೇವಾಲಯ ಸೇರಿದಂತೆ ಪ್ರಮುಖ ದೇವಾಲಯಗಳಿಗೆ ತೆರಳಿ ಹಾಗೂ ದಾರಿಯುದ್ದಕ್ಕೂ ಭಕ್ತರ ಪೂಜೆ ಸ್ವೀಕರಿಸಿ ಭಾನುವಾರ ಬೆಳಿಗ್ಗೆ 11.40ರ ವೇಳೆಗೆ ದೇವಾಲಯ ಪ್ರವೇಶಿಸಿತು. ಕರಗದ ಪ್ರಯುಕ್ತ ದೇವಸ್ಥಾನದಲ್ಲಿ ಮುಂಜಾನೆಯಿಂದಲೇ ವಿಶೇಷ ಪೂಜಾ ಕಾರ್ಯಕ್ರಮಗಳು ನೆರವೇರಿದವು. ಯಲ್ಲಮ್ಮ ದೇವಸ್ಥಾನವನ್ನು ವಿವಿಧ ಹೂವು ಮತ್ತು ವಿದ್ಯುತ್ ದೀಪಗಳಿಂದ ಅಲಂಕರಿಸಲಾಗಿತ್ತು. ಕರಗ ಸಾಗುವ ದಾರಿಯುದ್ದಕ್ಕೂ ವಿದ್ಯುತ್ ದೀಪ, ಹೂಗಳಿಂದ ಅಲಂಕಾರ ಮಾಡಲಾಗಿತ್ತು.

ಕರಗ ಮಹೋತ್ಸವದ ಅಂಗವಾಗಿ ಯಕ್ಷಗಾನ, ಸಾವಿರಾರು ಮಾತೆಯರಿಂದ ಲಲಿತಾ ಸಹಸ್ರನಾಮ ಪಠಣ, ಕೀಲು ಕುದುರೆ, ಪಟದ ಕುಣಿತ, ವೀರಗಾಸೆ, ಪೂಜಾ ಕುಣಿತ, ಚಂಡೆ ವಾದ್ಯ, ಡೊಳ್ಳು, ನಾದಸ್ವರ, ತಮಟೆ ವಾದ್ಯ ಕಲಾವಿದರ ಪ್ರದರ್ಶನ, ಮಂಗಳವಾದ್ಯ, ವಾದ್ಯ ಗೋಷ್ಠಿ ಸೇರಿದಂತೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಕೆಂಗೇರಿ ರಾಜಬೀದಿಯಲ್ಲಿ ಸುತ್ತಮುತ್ತಲಿನ ದೇವಾಲಯದ ಪಲ್ಲಕ್ಕಿ ಉತ್ಸವ ಸಾಗಿ ಬಂದವು.

ಗಣೇಶ ಆಟದ ಮೈದಾನದಲ್ಲಿ ಕೆಂಗೇರಿ ಯುವ ಸಮೂಹದ ವತಿಯಿಂದ ಪ್ರಪ್ರಥಮ ಬಾರಿಗೆ ಕುಸ್ತಿ ಪಂದ್ಯಾವಳಿ ಏರ್ಪಡಿಸಲಾಗಿತ್ತು. ಸ್ಥಳೀಯ ಶಾಸಕ ಎಸ್.ಟಿ. ಸೋಮಶೇಖರ್ ಅಧ್ಯಕ್ಷತೆಯಲ್ಲಿ ಪೊಲೀಸ್, ಬೆಸ್ಕಾಂ, ಜಿಬಿಎ ಅಧಿಕಾರಿಗಳು ಸಮಗ್ರ ಕಾರ್ಯ ನಿರ್ವಹಿಸಿ ಶಾಂತಿಯುತ ವೈಭವದ ಕರಗಕ್ಕೆ ಸಾಕ್ಷಿಯಾದರು.ದೇವಸ್ಥಾನದ ಉತ್ಸವ ಸಮಿತಿ ಅಧ್ಯಕ್ಷರು, ಪದಾಧಿಕಾರಿಗಳು ಹಾಗೂ ಅಪಾರ ಸಂಖ್ಯೆಯಲ್ಲಿ ಭಕ್ತಾದಿಗಳು ಪಾಲ್ಗೊಂಡು ಧನ್ಯತಾ ಭಾವ ಮೆರೆದರು.

## ಕರ್ನಾಟಕದ 3 ವಿಶೇಷ ರೈಲುಗಳು ಖಾಯಂ

• ಉದಯವಾಹಿನಿ, ಬೆಂಗಳೂರು




**ಟಿಕೆಟ್ ದರವೂ ಇಳಿಕೆ**

ಉತ್ತರ ಕರ್ನಾಟಕದ ರೈಲ್ವೆ ಪ್ರಯಾಣಿಕರಿಗೆ ಗುಡ್‌ನ್ಯೂಸ್. ಮೂರು ವಿಶೇಷ ರೈಲುಗಳನ್ನು ರೈಲ್ವೆ ಇಲಾಖೆಯು ಖಾಯಂ ಮಾಡಿ ಆದೇಶ ಹೊರಡಿಸಿದೆ. ಈ ಮೂಲಕ ರಾಜ್ಯದ 8 ಜಿಲ್ಲೆಗಳ ಪ್ರಯಾಣಿಕರಿಗೆ ಅನುಕೂಲವಾಗಲಿದೆ.

ಕರ್ನಾಟಕದ ಬೆಳಗಾವಿಯಿಂದ ತೆಲಂಗಾಣದ ಹೈದರಾಬಾದ್, ಸಿಕಂದರಾಬಾದ್ ಮತ್ತು ಚರ್ಲಪಲ್ಲಿ ನಡುವೆ 3 ವಿಶೇಷ ರೈಲುಗಳು ಹಬ್ಬಗಳು, ವಿಶೇಷ ಸಂದರ್ಭ, ಹೆಚ್ಚುವರಿ ದಟ್ಟಣೆ ಸಂದರ್ಭದಲ್ಲಿ ವಾರಕ್ಕೊಮ್ಮೆ ಸಂಚಾರ ನಡೆಸುತ್ತಿದ್ದವು. ಸದ್ಯ ಖಾಯಂ ಆಗಿವೆ. ಇದರೊಂದಿಗೆ ರಾಜ್ಯದ 8 ಜಿಲ್ಲೆಯ ಜನತೆಗೆ ಈಗ ತೆಲಂಗಾಣದ ರಾಜಧಾನಿ ಹೈದರಾಬಾದ್‌ಗೆ ನೇರ ರೈಲುಗಳ ಸಂಪರ್ಕ ಲಭ್ಯವಾದಂತಾಗಿದೆ.

**ಈ ರೈಲುಗಳು ಮಾರ್ಗಮಧ್ಯೆ ಯಾವೆಲ್ಲಾ ನಿಲ್ದಾಣದಲ್ಲಿ ನಿಲುಗಡೆ:** ಈ ಮೂರು ರೈಲು ಕರ್ನಾಟಕದ 8 ಜಿಲ್ಲೆಗಳಲ್ಲಿ ಸಂಚಾರ ನಡೆಸಲಿವೆ. ಬೇಗಂಪೇಟೆ, ಲಿಂಗಂಪಲ್ಲಿ, ವಿಕಾರಾಬಾದ್, ತಾಂಡೂರು, ಯಾದಗಿರಿ, ಕೃಷ್ಣಾ, ರಾಯಚೂರು, ಮಂತ್ರಾಲಯಂ ರೋಡ್, ಆದೋನಿ, ಗುಂತಕಲ್, ಬಳ್ಳಾರಿ, ದುರೋಜಿ, ತೋರಣಗಲ್ಲು, ಹೊಸಪೇಟೆ, ಕೊಪ್ಪಳ, ಗದಗ, ಹುಬ್ಬಳ್ಳಿ, ಧಾರವಾಡ, ಲೋಂಡಾ, ಖಾನಾಪುರ, ಬೆಳಗಾವಿಯಲ್ಲಿ ನಿಲುಗಡೆಯಾಗಲಿವೆ. ರೈಲ್ವೆ ಪ್ರಯಾಣಿಕರ ದಶಕಗಳ ಬೇಡಿಕೆಗೆ ಕೊನೆಗೂ ಮನ್ನಣೆ ಸಿಕ್ಕಿದೆ. ಈವರೆಗೆ ವಿಶೇಷ ರೈಲುಗಳಾಗಿ ಸಂಚರಿಸುತ್ತಿದ್ದ ಹೈದರಾಬಾದ್ ಹಾಗೂ ಬೆಳಗಾವಿ ನಡುವಿನ ಪ್ರಮುಖ ರೈಲುಗಳನ್ನು ನೈರುತ್ಯ ರೈಲ್ವೆಯು ಇನ್ನುಮುಂದೆ ಖಾಯಂ ರೈಲುಗಳನ್ನಾಗಿ ಪರಿವರ್ತಿಸಿ ಆದೇಶ ಹೊರಡಿಸಿದೆ.

**ಖಾಯಂ ಸಂಚಾರ:** ವಿಶೇಷ ರೈಲುಗಳಿದ್ದಾಗ ಟಿಕೆಟ್ ದರ ಹೆಚ್ಚಿರುತ್ತಿತ್ತು ಮತ್ತು ಸಂಚಾರದ ಖಚಿತತೆ ಇರುತ್ತಿರಲಿಲ್ಲ. ಈಗ ಇವು ಖಾಯಂ ಆಗಿರುವುದರಿಂದ ಸಾಮಾನ್ಯ ದರದಲ್ಲಿ ನಿರಂತರ ಸೇವೆ ಲಭ್ಯವಾಗಲಿದೆ.

ಉದ್ಯೋಗ ಹಾಗೂ ಉನ್ನತ ಶಿಕ್ಷಣಕ್ಕಾಗಿ ಹೈದರಾಬಾದ್‌ಗೆ ತೆರಳುವ ಜಿಲ್ಲೆಯ ವಿದ್ಯಾರ್ಥಿಗಳಿಗೆ ಮತ್ತು ವ್ಯಾಪಾರಿಗಳಿಗೆ ಈ ಮುಂಜಾನೆಯ ರೈಲುಗಳು ವರದಾನವಾಗಲಿವೆ.

ರೈಲುಗಳು ಖಾಯಂ ಆಗುವುದರಿಂದ ವಿಶೇಷ ದರ ತೆಗೆಯಲಾಗುತ್ತದೆ. ಸ್ಲೀಪರ್, ಎಸಿ ಬೋಗಿಗಳ ಟಿಕೆಟ್ ದರವು ಶೇಕಡಾ 25 ರಿಂದ 30 ರಷ್ಟು ಇಳಿಕೆಯಾಗಲಿದೆ.

## 800 ಎಕರೆ ಸರ್ಕಾರಿ ಜಮೀನು ಕಬಳಿಕೆ: ಕೆಆರ್‌ಎಸ್ ಆರೋಪ

• ಉದಯವಾಹಿನಿ, ದೇವನಹಳ್ಳಿ


ಉದಯವಾಹಿನಿ ಚಿತ್ರ

ವಿಮಾನ ನಿಲ್ದಾಣಕ್ಕೆ ಹೊಂದಿಕೊಂಡಿರುವ ಅಕ್ಷೇನಹಳ್ಳಿ-ಮಲ್ಲೇನಹಳ್ಳಿ ಜೋಡಿಗ್ರಾಮಗಳಲ್ಲಿ ಸರ್ಕಾರಿ ಗೋಮಾಳ ಹಾಗೂ ಗ್ರಾಮಠಾಣಾ ಪ್ರದೇಶಗಳ ಒತ್ತುವರಿ ರಾಜ್ಯದ ಇತಿಹಾಸದಲ್ಲೇ ಅತಿದೊಡ್ಡ ಭೂ ಹಗರಣವಾಗಿದೆ ಎಂದು ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ಗೌರವಾಧ್ಯಕ್ಷ ರವಿಕೃಷ್ಣ ರೆಡ್ಡಿ ಆರೋಪಿಸಿದರು. ತಾಲ್ಲೂಕಿನ ಯರ್ತಿಗಾನಹಳ್ಳಿ ಮೂಲಕ ಅಲ್ಲೇನಹಳ್ಳಿ-ಮಲ್ಲೇನಹಳ್ಳಿ ಗ್ರಾಮಗಳಿಗೆ ಸಂಪರ್ಕ ಕಲ್ಪಿಸುವ ಪ್ರದೇಶದಲ್ಲಿ ಕೆಆರ್‌ಎಸ್ ಪಕ್ಷ, ವಿವಿಧ ದಲಿತ ಸಂಘಟನೆಗಳು, ಪ್ರಗತಿಪರ ಹೋರಾಟಗಾರರು ಹಮ್ಮಿಕೊಂಡಿದ್ದ 'ಒತ್ತುವರಿ ತೆರವು ಜಾಥಾ'ದಲ್ಲಿ ಮಾತನಾಡಿದರು.

ಬಡವರು, ದೀನ ದಲಿತರಿಗೆ ಸೇರಬೇಕಾದ ಅಂದಾಜು 800 ಎಕರೆ ಸರ್ಕಾರಿ ಭೂಮಿಯನ್ನು ಪ್ರಭಾವಿ ರಾಜಕೀಯ ಕುಟುಂಬಗಳು ಹಾಗೂ ಶ್ರೀಮಂತರು ಕಬಳಿಸಿರುವ ಗಂಭೀರ ಆರೋಪವಿದೆ. ಕೆರೆ, ಕಾಲುವೆ, ರಾಜಕಾಲುವೆ, ಗೋಮಾಳ ಮತ್ತು ಗ್ರಾಮಠಾಣಾ ಪ್ರದೇಶಗಳನ್ನು ಅತಿಕ್ರಮಿಸಿ ಮಣ್ಣು ತುಂಬಲಾಗಿದೆ ಎಂದು ದೂರಿದರು. ಇನಾಂ ರದ್ದು ಕಾಯ್ದೆ ರಾಜ್ಯದ ಇತರ ಭಾಗಗಳಲ್ಲಿ ಜಾರಿಯಾಗಿದ್ದರೂ, ಈ ಗ್ರಾಮಗಳಿಗೆ ಮಾತ್ರ ಅನ್ವಯವಾಗದೇ ಇರುವುದರಿಂದ ಸಂಶಯಗಳು ಹೆಚ್ಚುತ್ತಿವೆ. ರೈತರ ಹೆಸರಿನಲ್ಲಿದ್ದ ದಾಖಲೆಗಳು ಕಚೇರಿಗಳಲ್ಲಿ ಕಾಣೆಯಾಗಿದ್ದು, ಖರಾಬು ಜಾಗಗಳಲ್ಲಿ ಗ್ರಾಮವನ್ನು ವ್ಯವಸ್ಥಿತವಾಗಿ ಸ್ಥಳಾಂತರ ಮಾಡಲಾಗಿದೆ ಎಂದು ಅಪಾದಿಸಿದರು. ಜಾಥಾದಲ್ಲಿ ಭಾಗವಹಿಸಿದ ಹೋರಾಟಗಾರರು ಮತ್ತು ಸಾರ್ವಜನಿಕರು ಭಾರೀ ಸಂಖ್ಯೆಯಲ್ಲಿ ಸ್ಥಳಕ್ಕೆ ತೆರಳಿ, ಭೂಮಿಯ ಅಳತೆ ಪರಿಶೀಲನೆ ನಡೆಸಿ ಒತ್ತುವರಿ ತೆರವುಗೊಳಿಸುವ ಕಾರ್ಯವನ್ನು ಸಂಕೇತಿಕವಾಗಿ ನಡೆಸಿದರು.

ನಂತರ ಅಕ್ಷೇನಹಳ್ಳಿ-ಮಲ್ಲೇನಹಳಿ ಗ್ರಾಮದ ಸರ್ಕಾರಿ ಶಾಲಾ ಆವರಣದಲ್ಲಿ ಸಭೆ ನಡೆಸಿ, ಭೂ ಹಗರಣದಿಂದ ಉಂಟಾದ ಸಮಸ್ಯೆಗಳು ಹಾಗೂ ಇತ್ತೀಚೆಗೆ ರಾಜ್ಯ ಸಚಿವ ಸಂಪುಟದಲ್ಲಿ ಈ ವಿಷಯವಾಗಿ ಕೈಗೊಂಡ ಚರ್ಚೆಗಳ ಕುರಿತು ಗ್ರಾಮಸ್ಥರಿಗೆ ವಿವರ ನೀಡಲಾಯಿತು. ಕೆಆರ್‌ಎಸ್ ಪಕ್ಷದ ರಾಜ್ಯ ಯುವ ಘಟಕದ ಪ್ರಧಾನ ಕಾರ್ಯದರ್ಶಿ ನಿಖಿಲ್ ಸೇರಿದಂತೆ ಹಲವು ಮುಖಂಡರು ಸಭೆಯಲ್ಲಿ ಭಾಗವಹಿಸಿ ಜನರಲ್ಲಿ ಜಾಗೃತಿ ಮೂಡಿಸಿದರು.

**ಸರ್ವೆ ಪೂರ್ಣ, ಹಸ್ತಾಂತರ ಬಾಕಿ:** ಸ್ಥಳಕ್ಕೆ ಆಗಮಿಸಿದ್ದ ಕಂದಾಯ ಇಲಾಖೆಯ ಅಧಿಕಾರಿಗಳು ಕೆಆರ್‌ಎಸ್ ಪಕ್ಷದ ಮುಖಂಡರೊಂದಿಗೆ ಮಾತುಕತೆ ನಡೆಸಿದ ಕೆರೆ ಕೋಡಿ ರಾಜಕಾಲುವೆ ಗುಂಡು ತೋಪು ಸೇರಿದಂತೆ ಸರ್ಕಾರಿ ಜಮೀನುಗಳನ್ನು ಈಗಾಗಲೇ ಗುರುತಿಸಲಾಗಿದೆ ಎಂದು ತಿಳಿಸಿದರು. ಅವುಗಳನ್ನು ಗ್ರಾಮ ಪಂಚಾಯಿತಿಗೆ ಹಸ್ತಾಂತರಿಸುವುದಷ್ಟೇ ಬಾಕಿಯಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಹಿಂದಿನ ದಿನಗಳಲ್ಲಿ ಒತ್ತುವರಿ ತೆರವುಗೊಳಿಸಿ ಹಾಕಿದ್ದ ನಾಮಫಲಕವನ್ನು ಯಾರು ತೆಗೆದುಹಾಕಿದ್ದಾರೆ ಎಂಬ ಪ್ರಶ್ನೆ ಉದ್ಭವಿಸಿತು. ಕಂದಾಯ ಇಲಾಖೆ ಸ್ಥಳವನ್ನು ಗುರುತಿಸಿ ಅಣೇಶ್ವರ ಗ್ರಾಮ ಪಂಚಾಯಿತಿಗೆ ಹಸ್ತಾಂತರಿಸಿದರೆ ಅದರ ನಿರ್ವಹಣೆ ಕೈಗೊಳ್ಳುವುದಾಗಿ ಪಿಡಿಒ ಗಂಗರಾಜು ತಿಳಿಸಿದರು.

# ರಾಜ್ಯದ 324 ಗ್ರಾಮಗಳಲ್ಲಿ ಕುಡಿಯೋ ನೀರಿಗೆ ಅಭಾವ

### ತುರ್ತು ಕಾಮಗಾರಿಗಳನ್ನು ನಿರ್ವಹಿಸಲು ಈಗಾಗಲೇ 60 ಕೋಟಿ ರೂ.ಗಳನ್ನು ಜಿಲ್ಲೆಗಳಿಗೆ ಹಂಚಿಕೆ ಮಾಡಲಾಗಿದೆ

• ಉದಯವಾಹಿನಿ, ಬೆಂಗಳೂರು

ರಾಜ್ಯದ 20 ಜಿಲ್ಲೆಗಳ 60 ತಾಲ್ಲೂಕುಗಳಲ್ಲಿನ 324 ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಉಂಟಾಗಿದ್ದು, ಇವುಗಳ ಪೈಕಿ 76 ಗ್ರಾಮಗಳಿಗೆ 76 ಟ್ಯಾಂಕರ್‌ಗಳ ಮುಖಾಂತರ ಹಾಗೂ 248 ಗ್ರಾಮಗಳಿಗೆ 280 ಖಾಸಗಿ ಕೊಳವೆ ಬಾವಿಗಳನ್ನು ಬಾಡಿಗೆ ಆಧಾರದ ಮೇಲೆ ಪಡೆದು ಕುಡಿಯುವ ನೀರನ್ನು ಒದಗಿಸಲಾಗುತ್ತಿದೆ ಎಂದು ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಹಾಗೂ ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ. ತುರ್ತು ಕಾಮಗಾರಿಗಳನ್ನು ನಿರ್ವಹಿಸಲು ಈಗಾಗಲೇ 60 ಕೋಟಿ ರೂ.ಗಳನ್ನು ಜಿಲ್ಲೆಗಳಿಗೆ ಹಂಚಿಕೆ ಮಾಡಲಾಗಿದೆ ಎಂಬ ಮಾಹಿತಿಯನ್ನು ಸಚಿವರು ನೀಡಿದ್ದು, ಮಾರ್ಚ್ 2026ರಲ್ಲಿ ಟಾಸ್ಕ್ ಫೋರ್ಸ್‌ನ್ಡಿ ಮುಂದುವರೆದ ಕಾಮಗಾರಿಗಳ ಬಾಕಿ ಬಿಲ್ ಪಾವತಿಗೆ ಹೆಚ್ಚುವರಿಯಾಗಿ 48 ಕೋಟಿ ರೂ.ಗಳನ್ನು ಜಿಲ್ಲೆಗಳಿಗೆ ಬಿಡುಗಡೆ ಮಾಡಲಾಗಿದೆ ಹಾಗೂ ಶುದ್ಧ ಕುಡಿಯುವ ನೀರಿನ ಘಟಕಗಳ ದುರಸ್ತಿಗಾಗಿ 14.50 ಕೋಟಿ ರೂ.ಗಳನ್ನು ಜಿಲ್ಲೆಗಳಿಗೆ ಹಂಚಿಕೆ ಮಾಡಲಾಗಿದೆ ಎಂದು ಹೇಳಿದ್ದಾರೆ. ಈ ಬೇಸಿಗೆ ಅವಧಿಯಲ್ಲಿ ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರು ಸರಬರಾಜು ನಿರಾತಂಕವಾಗಿರಬೇಕೆಂಬ ನಿಟ್ಟಿನಲ್ಲಿ ಮುಂಜಾಗರೂಕತ ಕ್ರಮಗಳನ್ನು ಕೈಗೊಳ್ಳಲಾಗಿದ್ದು, ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಸೇರಿದಂತೆ ತಾಲ್ಲೂಕು ಹಾಗೂ ಗ್ರಾಮ ಪಂಚಾಯತಿ ಮಟ್ಟದಲ್ಲಿ ಅಧಿಕಾರಿಗಳು ನಿರಂತರವಾಗಿ ನಿಗಾ ಇರಿಸಿದ್ದು ಪರಿಶೀಲನ ಸಭೆಗಳನ್ನು ನಡೆಸುತ್ತಿದ್ದಾರೆ ಎಂದು ತಿಳಿಸಿರುವ ಸಚಿವ ಪ್ರಿಯಾಂಕ್ ಖರ್ಗೆ ಆದ್ಯತಾ ಕ್ರಮಗಳನ್ನು ಕೈಗೊಳ್ಳುವ ಮೂಲಕ ಗ್ರಾಮೀಣ ಕುಡಿಯುವ ನೀರಿಗೆ ತೊಂದರೆಯಾಗದಂತೆ ಎಚ್ಚರಿಕೆ ವಹಿಸಲಾಗಿದೆ ಎಂದು ತಿಳಿಸಿದ್ದಾರೆ. ನೀರಿನ ಮಾದರಿಯು ಅನುಮತಿಸಬಹುದಾದ ಮಿತಿಗಿಂತ ಹೆಚ್ಚಾಗಿರುವುದು ಕಂಡುಬಂದ ಪ್ರಕರಣಗಳಲ್ಲಿ ನೀರಿನ ಮಾದರಿಗಳನ್ನು ಹತ್ತಿರದ ಪ್ರಯೋಗಾಲಯಗಳಲ್ಲಿ ಮರು ಪರೀಕ್ಷೆಗೆ ಒಳಪಡಿಸಿ ಗುಣಮಟ್ಟವನ್ನು ಖಚಿತಪಡಿಸಿಕೊಂಡು ಕಲುಷಿತ ನೀರಿಗೆ ಪರ್ಯಾಯವಾಗಿ ಇತರೆ ಮೂಲಗಳಿಂದ ಕುಡಿಯುವ ನೀರನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂಬ ಮಾಹಿತಿಯನ್ನು ಸಚಿವರು ನೀಡಿದ್ದಾರೆ. ಗ್ರಾಮೀಣ ಪ್ರದೇಶದ ಜನರಿಗೆ ಬೇಸಿಗೆಯಲ್ಲಿ ಕುಡಿಯುವ ನೀರಿನ ವ್ಯವಸ್ಥೆಯನ್ನು ಕಲ್ಪಿಸುವ ನಿಟ್ಟಿನಲ್ಲಿ ಮುಂದಿನ ಪ್ರತಿ 2ನೇ, 4ನೇ ಸೋಮವಾರದಂದು ಪಂಚಾಯತ್ ಅಭಿವೃದ್ಧಿ ಅಧಿಕಾರಗಳ ಜೊತೆಯಲ್ಲಿ ಜಿ.ಪಂ ಸಿಇಒಗಳು ಸಭೆ ನಡೆಸುತ್ತಿದ್ದಾರೆ, ಕುಡಿಯುವ ನೀರಿನ ಅಭಾವ ಪರಿಸ್ಥಿತಿಯನ್ನು ಸಮರ್ಪಕವಾಗಿ ನಿರ್ವಹಿಸಲು ಎಲ್ಲಾ ಜಿಲ್ಲಾ ಪಂಚಾಯಿತಿಗಳಲ್ಲಿ 24/7 ಕಂಟ್ರೋಲ್ ರೂಮ್ ತೆರೆಯಲಾಗಿದೆ, ತಾಲ್ಲೂಕು ಮಟ್ಟದಲ್ಲಿ ಕಾರ್ಯನಿರ್ವಾಹಕ ಅಧಿಕಾರಿಗಳ ಮುಖಾಂತರ ಕ್ಷಿಪ್ರ ಕಾರ್ಯಪಡೆಯನ್ನು ರಚಿಸಿ ಪರಿಸ್ಥಿತಿಯನ್ನು ಸಮರ್ಪಕವಾಗಿ ನಿರ್ವಹಿಸಲಾಗುತ್ತಿದೆ ಎಂದು ಸಚಿವರು ಮಾಹಿತಿ ನೀಡಿದ್ದಾರೆ.


ಉದಯವಾಹಿನಿ ಚಿತ್ರ



### ಸಂಭಾವ್ಯ ಗುಣಮಟ್ಟದ ಪರೀಕ್ಷೆ

**ಶುದ್ಧ ಕುಡಿಯುವ ನೀರು ಸರಬರಾಜು ಜೊತೆಗೆ ಬೇಸಿಗೆ ಕಾಲವನ್ನು ಗಮನದಲ್ಲಿಟುಕೊಂಡು ಗ್ರಾಮಗಳು ಹಾಗೂ ಜನವಸತಿ ಪ್ರದೇಶಗಳಲ್ಲಿನ ಎಲ್ಲಾ ಕುಡಿಯುವ ನೀರಿನ ಮೂಲಗಳ ಸಂಭಾವ್ಯ ಗುಣಮಟ್ಟದ ಪರೀಕ್ಷೆಗಳನ್ನು ಕ್ಷೇತ್ರ ಪ್ರಯೋಗ ಉಪಕರಣಗಳ ಮೂಲಕ ನಡೆಸಲಾಗುತ್ತಿದೆ.**

**ರಾಜ್ಯದ 31 ಜಿಲ್ಲೆಗಳಲ್ಲಿ 26,676 ಗ್ರಾಮಗಳಿದ್ದು, 57,883 ಜನವಸತಿ ಪ್ರದೇಶಗಳಲ್ಲಿ 1,01,30,798 ಮನೆಗಳು ಇರುತ್ತವೆ, ಬೇಸಿಗೆಯಲ್ಲಿ ಗ್ರಾಮೀಣ ಪ್ರದೇಶಗಳಲ್ಲಿನ ಹಲವು ಜಲಮೂಲಗಳು ಬತ್ತಿಹೋಗುವುದರಿಂದ ಹಾಗೂ ಕೊಳವೆ ಬಾವಿಗಳ ಇಳುವರಿ ಕಡಿಮೆಯಾಗುತ್ತಿರುವುದರಿಂದ ಕೆಲವೊಂದು ಜನವಸತಿ ಪ್ರದೇಶಗಳಲ್ಲಿ ಸಾರ್ವಜನಿಕರಿಗೆ ಕುಡಿಯುವ ನೀರಿನ ಸಮಸ್ಯೆ ಕಂಡು ಬಂದಿರುತ್ತದೆ. ಈ ಸಮಸ್ಯೆಯನ್ನು ದೈನಂದಿನ ಆಧಾರದ ಮೇಲೆ ಮೇಲ್ವಿಚಾರಣೆ ಮಾಡಲು ಕ್ರಮವಹಿಸಿದ್ದು, ಗ್ರಾಮೀಣ ಪ್ರದೇಶದ ಜನರಿಗೆ ಬರ ಪರಿಸ್ಥಿತಿಯಲ್ಲಿ ಕುಡಿಯುವ ನೀರಿನ ವ್ಯವಸ್ಥೆಯನ್ನು ಕಲ್ಪಿಸುವ ನಿಟ್ಟಿನಲ್ಲಿ ತುರ್ತಾಗಿ ಕುಡಿಯುವ ನೀರಿನ ಕಾಮಗಾರಿಗಳನ್ನು ಕೈಗೊಂಡು ಕುಡಿಯುವ ನೀರನ್ನು ಒದಗಿಸಲು ಕ್ರಮವಹಿಸಲಾಗುತ್ತಿದೆ.**

**-ಪ್ರಿಯಾಂಕ್ ಖರ್ಗೆ, ಸಚಿವ**

**ಬೇಸಿಗೆ ಎದುರಿಸಲು ಸಿದ್ಧತೆ ಏನು?**

## ಆಟೋ ಚಾಲಕರಿಗೆ ಸರ್ಕಾರ ನೆರವಾಗಲಿ


ಉದಯವಾಹಿನಿ ಚಿತ್ರ

• ಉದಯವಾಹಿನಿ ರಾಮನಗರ

ಇಸ್ರೇಲ್-ಅಮೆರಿಕ ಹಾಗೂ ಇರಾನ್ ನಡುವಣ ಯುದ್ಧದಿಂದಾಗಿ ಆಟೋ ಎಲ್‌ಪಿಜಿ ಮತ್ತು ಸಿಎನ್‌ಜಿ ಕೊರತೆಯಿಂದಾಗಿ ಆಟೋ ಚಾಲಕರು ಬೀದಿಗೆ ಬಂದಿದ್ದಾರೆ. ಇಂಧನವಿಲ್ಲದೆ ಮನೆ ಮುಂದೆ ಆಟೋ ನಿಲ್ಲಿಸಿಕೊಂಡಿದ್ದಾರೆ. ಸರ್ಕಾರ ಕೂಡಲೇ ಚಾಲಕರ ನೆರವಿಗೆ ಧಾವಿಸಬೇಕು. ಚಾಲಕರಿಗೆ ತಲಾ 10 ಸಾವಿರ ಪರಿಹಾರ ನೀಡಬೇಕು ಎಂದು ಕನ್ನಡ ಚಳವಳಿ ವಾಟಾಳ್ ಪಕ್ಷದ ಅಧ್ಯಕ್ಷ ವಾಟಾಳ್ ನಾಗರಾಜ್ ಆಗ್ರಹಿಸಿದರು.

ಎಲ್‌ಪಿಜಿ ಕೊರತೆ, ಯುದ್ಧ ಖಂಡಿಸಿ ನಗರದ ಐಜೂರು ವೃತ್ತದಲ್ಲಿ ತಮ್ಮ ಪಕ್ಷ ಹಾಗೂ ಕರುನಾಡ ಸೇನೆ ವತಿಯಿಂದ ಹಮ್ಮಿಕೊಂಡಿದ್ದ ಯುದ್ಧ ಬೇಡ. ಸಿಲಿಂಡರ್ ಬೇಕು ತಮಟೆ ಚಳವಳಿಯಲ್ಲಿ ಮಾತನಾಡಿದ ಅವರು, ಅಡುಗೆ ಸಿಲಿಂಡರ್, ಆಟೋ ಎಲ್‌ಪಿಜಿ ಮತ್ತು ಸಿಎನ್‌ಜಿ ಕೊರತೆಯಿಂದ ಜನ ಅನುಭವಿಸುತ್ತಿರುವ ಸಂಕಷ್ಟಗಳ ಬಗ್ಗೆ ಕೇಂದ್ರ ಮತ್ತು ರಾಜ್ಯ ಸರ್ಕಾರ ಮೌನವಾಗಿವೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

**ಯುದ್ಧ ಬೇಡ ಸಿಲಿಂಡರ್ ಬೇಕು**

ಜನರ ಸಂಕಷ್ಟಕ್ಕೆ ದನಿಯಾಗದ ವಿರೋಧ ಪಕ್ಷಗಳು ಉಸಿರು ಕಳೆದುಕೊಂಡಿವೆ. ಕೇಂದ್ರ ಸರ್ಕಾರದ ವಿರುದ್ಧ ಮಾತನಾಡದೆ ಮೌನ ತಾಳಿವೆ. ಆಡಳಿತ ಮತ್ತು ವಿರೋಧ ಪಕ್ಷದವರು ಉಪ ಚುನಾವಣೆಗಳಲ್ಲಿ ಮುಳುಗಿದ್ದಾರೆ.

ಇದೇ ಪರಿಸ್ಥಿತಿ ಮುಂದುವರಿದರೆ ಮುಂದಿನ ದಿನಗಳಲ್ಲಿ ಜನರು ಮತ್ತಷ್ಟು ಸಂಕಷ್ಟಕ್ಕೆ ಸಿಲುಕಲಿದ್ದಾರೆ. ಆಗ ಜನ ಸರ್ಕಾರಗಳ ವಿರುದ್ಧ ಸಿಡಿದೆಳುತ್ತಾರೆ. ಅದಕ್ಕೂ ಮುಂಚೆ ಎಚ್ಚೆತ್ತುಕೊಳ್ಳಬೇಕು ಎಂದು ಎಚ್ಚರಿಕೆ ನೀಡಿದರು. ಜಗತ್ತಿಗೆ ಇಂದು ಯುದ್ಧದ ಬದಲು ಬುದ್ಧ, ಹಿಂಸೆ ಬದಲು ಮಹಾತ್ಮ ಗಾಂಧೀಜಿ ಅವರ ಅಹಿಂಸೆ ಬೇಕಾಗಿದೆ. ಬಲಾಢ್ಯ ದೇಶಗಳು ವೈಯಕ್ತಿಕ ಹಿತಾಸಕ್ತಿಗಾಗಿ ಮತ್ತೊಂದು ದೇಶದ ಮೇಲೆ ಅತಿಕ್ರಮಣ ಮಾಡುವುದರಿಂದ ಜಗತ್ತು ಮೂರನೇ ಮಹಾಯುದ್ಧಕ್ಕೆ ಸಾಕ್ಷಿಯಾಗುವ ದಿನಗಳು ದೂರವಿಲ್ಲ. ಕೂಡಲೇ ಮಧ್ಯಪ್ರಾಚ್ಯ ಯುದ್ಧವು ಕೊನೆಯಾಗಿ, ವಿಶ್ವದಲ್ಲಿ ಶಾಂತಿ ನೆಲೆಸಬೇಕು ಎಂದರು.

# ರಾಜ್ಯದಲ್ಲಿ 'ಮಕ್ಕಳ ಸ್ನೇಹಿ' ಸಾರಿಗೆ


## ಪಿಯುವರೆಗಿನ ಗಂಡು ಮಕ್ಕಳಿಗೂ ಉಚಿತ ಪ್ರಯಾಣಕ್ಕೆ ಶಿಫಾರಸು

• ಉದಯವಾಹಿನಿ, ತುಮಕೂರು

ಮಕ್ಕಳ ಸುರಕ್ಷತೆ ಮತ್ತು ಶಾಲಾ ಪ್ರಯಾಣ ಸುಗಮಗೊಳಿಸುವ ಉದ್ದೇಶದಿಂದ ರಾಜ್ಯ ಸರಕಾರ ವಿದ್ಯಾರ್ಥಿ ಸ್ನೇಹಿ ಸಾರಿಗೆ ವ್ಯವಸ್ಥೆ ಜಾರಿಗೆ ತರಲು ಮುಂದಾಗಿದೆ. ಮಕ್ಕಳಿಗೆ ಸುರಕ್ಷತೆ ಹಾಗೂ ವಿಶ್ವಾಸಾರ್ಹ ಸಾರಿಗೆ ಸೌಲಭ್ಯ ಒದಗಿಸಲು ಮಕ್ಕಳ ಸ್ನೇಹಿ ಸಾರಿಗೆ ವ್ಯವಸ್ಥೆ ಅನುಷ್ಠಾನಕ್ಕೆ ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಶಿಫಾರಸು ಮಾಡಿತ್ತು. ಈ ಶಿಫಾರಸು ಪರಿಶೀಲಿಸಿ ಕ್ರಮವಹಿಸುವಂತೆ ರಾಜ್ಯ ರಸ್ತೆ ಸಾರಿಗೆ ನಿಗಮದ ಅಧೀನ ಕಾರ್ಯದರ್ಶಿ (ಸಾರಿಗೆ ಇಲಾಖೆ), ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ವಾಯುವ್ಯ ಕರ್ನಾಟಕ ಸಾರಿಗೆ ಸಂಸ್ಥೆ, ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮಗಳ ವ್ಯವಸ್ಥಾಪಕರಿಗೆ ನಿರ್ದೇಶಿಸಿದ್ದಾರೆ.

### ವಿದ್ಯಾರ್ಥಿ ಸ್ನೇಹಿ ಸಾರಿಗೆ ವ್ಯವಸ್ಥೆ

ಮಕ್ಕಳ ಸುರಕ್ಷಿತ ಮತ್ತು ಸುಗಮ ಶಾಲಾ ಪ್ರಯಾಣಕ್ಕಾಗಿ ರಾಜ್ಯ ಸರ್ಕಾರವು 'ವಿದ್ಯಾರ್ಥಿ ಸ್ನೇಹಿ ಸಾರಿಗೆ ವ್ಯವಸ್ಥೆ'ಯನ್ನು ಜಾರಿಗೆ ತರಲು ಸಿದ್ಧತೆ ನಡೆಸಿದೆ. ಈ ಕುರಿತು ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ನೀಡಿದ್ದ ಶಿಫಾರಸುಗಳನ್ನು ಪರಿಶೀಲಿಸಿ ಕ್ರಮ ಕೈಗೊಳ್ಳುವಂತೆ ಸಾರಿಗೆ ಇಲಾಖೆಯ ಅಧೀನ ಕಾರ್ಯದರ್ಶಿಯವರು ರಾಜ್ಯದ ಎಲ್ಲಾ ಸಾರಿಗೆ ನಿಗಮಗಳ ವ್ಯವಸ್ಥಾಪಕರಿಗೆ ಈಗಾಗಲೇ ಅಗತ್ಯ ಸೂಚನೆಗಳನ್ನು ನೀಡಿದ್ದಾರೆ.





ಉದಯವಾಹಿನಿ ಚಿತ್ರ

> ರಾಜ್ಯದಲ್ಲಿ ಮಕ್ಕಳ ಸ್ನೇಹಿ ಸಾರಿಗೆ ವ್ಯವಸ್ಥೆ ಜಾರಿಗೆ ತರಲಾಗುತ್ತಿದೆ. ಮೊದಲ ಹಂತದಲ್ಲಿ ಬೆಂಗಳೂರು ಸುತ್ತಮುತ್ತಲಿನ ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಿ, ಹಂತ ಹಂತವಾಗಿ ವಿಸ್ತರಿಸಲು ಉದ್ದೇಶಿಸಲಾಗಿದೆ. ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಬಸ್‌ಗಳ ಖರೀದಿಗೆ ಒತ್ತು ನೀಡಲಾಗುತ್ತಿದೆ.
>
> – ರಾಮಲಿಂಗ ರೆಡ್ಡಿ, ಸಾರಿಗೆ ಸಚಿವ

**ಆಯೋಗದ ಶಿಫಾರಸು:** ರಾಜ್ಯದಲ್ಲಿ ಗ್ರಾಮೀಣ, ಹಿಂದುಳಿದ ವರ್ಗಗಳ ಮಕ್ಕಳು ಹೆಚ್ಚಾಗಿ ಕೆಎಸ್ಸಾರ್ಟಿಸಿ, ಬಿಎಂಟಿಸಿ ಸೇರಿದಂತೆ ಸಾರ್ವಜನಿಕ ಸಾರಿಗೆ ಅವಲಂಬಿಸಿದ್ದಾರೆ. ಮಕ್ಕಳು ಸಾಕಷ್ಟು ಸಮಸ್ಯೆ ಎದುರಿಸುತ್ತಿದ್ದಾರೆ. ಬಸ್‌ಗಳಿಂದ ಬಿದ್ದು ಗಾಯಗೊಂಡಿರುವ ಪ್ರಕರಣಗಳೂ ಇವೆ. ಇದನ್ನು ತಪ್ಪಿಸಲು ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ವಿದ್ಯಾರ್ಥಿ ಸ್ನೇಹಿ ಸಾರಿಗೆಗೆ ಶಿಫಾರಸು ಮಾಡಿತ್ತು.


**ಉಚಿತ ಪ್ರಯಾಣ, ಟ್ರಿಪ್ ವಿಸ್ತರಣೆ:** ರಾಜ್ಯದಲ್ಲಿ ಈಗಾಗಲೇ ಹೆಣ್ಣು ಮಕ್ಕಳ ಉಚಿತ ಪ್ರಯಾಣಕ್ಕೆ ಅವಕಾಶವಿದೆ. ಉಚಿತ ಪ್ರಯಾಣ ಅವಕಾಶವನ್ನು 12 ನೇ ತರಗತಿವರೆಗೆ ಗಂಡು ಮಕ್ಕಳಿಗೂ ವಿಸ್ತರಿಸಬೇಕು. ಪ್ರತಿ, ಶಾಲೆ-ಕಾಲೇಜು ಮಾರ್ಗದಲ್ಲಿ ಓದುತ್ತಿರುವ ಮಕ್ಕಳ ನಿಖರ ದತ್ತಾಂಶ ಸಂಗ್ರಹಿಸಿ ರೂಟ್ ಪ್ಲಾನಿಂಗ್ ಮಾಡಬೇಕು. ಸಾರಿಗೆ ವ್ಯವಸ್ಥೆ ಶಿಕ್ಷಣಕ್ಕೆ ಅಡ್ಡಿಯಾಗಬಾರದು ಎಂದು ಆಯೋಗ ಶಿಫಾರಸ್ಸಿನಲ್ಲಿ ತಿಳಿಸಿತ್ತು. ಅಂತೆಯೇ ಹೆಚ್ಚು ವಿದ್ಯಾರ್ಥಿಗಳಿರುವ ಗ್ರಾಮೀಣ ಮಾರ್ಗಗಳಲ್ಲಿ ವಿಶೇಷ ಸ್ಕೂಲ್, ಕಾಲೇಜು ಬಸ್‌ಗಳನ್ನು ಆರಂಭಿಸುವುದು, ತರಗತಿ ಸಮಯಕ್ಕೆ ತಕ್ಕಂತೆ ಬೆಳಗ್ಗೆ ಮತ್ತು ಸಂಜೆ ಹೆಚ್ಚುವರಿ ಟ್ರಿಪ್‌ಗಳು 'ಮಕ್ಕಳ ಸ್ನೇಹಿ ಸಾರಿಗೆ' ವ್ಯವಸ್ಥೆಯಲ್ಲಿರಲಿದೆ.

### ಮಕ್ಕಳ ಸ್ನೇಹಿ ಸಾರಿಗೆ ರೂಪು-ರೇಷೆ

- ಶಾಲಾ-ಕಾಲೇಜು ಸಮಯಕ್ಕೆ ಅಗತ್ಯ ಹೆಚ್ಚುವರಿ ವಿಶೇಷ ಬಸ್ ಸೌಲಭ್ಯ.
- ಎಲ್ಲಾ ಬಸ್‌ಗಳಲ್ಲಿ ಸಿಸಿಟಿವಿ ಕಡ್ಡಾಯ, ಜಿಪಿಎಸ್ ನಿಗಾ, ತುರ್ತು ಪ್ಯಾನಿಕ್ ಬಟನ್ ಅಳವಡಿಕೆ.
- ಮಕ್ಕಳ ಸಹಾಯವಾಣಿ 1098 ಪ್ರದರ್ಶಿಸುವುದು ಕಡ್ಡಾಯ.
- ಬಸ್ ಸೇವೆಯಲ್ಲಿ ಮಾರ್ಗ ಮತ್ತು ಸಮಯ ಪಾಲನೆ ಕಟ್ಟುನಿಟ್ಟಾಗಿ ಜಾರಿಗೊಳಿಸುವುದು.
- ಬಸ್ ಚಾಲಕರು, ಸಿಬ್ಬಂದಿಗೆ ಮಕ್ಕಳ ಹಕ್ಕು ತರಬೇತಿ, ಪ್ರತಿವರ್ಷ ರಿಫ್ರೆಶರ್ ಕೋರ್ಸ್ ಕಡ್ಡಾಯ. ಪೋಕ್ಸೊ, ಜೆಜೆ ಆ್ಯಕ್ಟ್ ಬಗ್ಗೆ ತರಬೇತಿ.
- ಹೆಚ್ಚಿನ ವಿದ್ಯಾರ್ಥಿನಿಯರು ಇರುವ ರೂಟ್‌ಗಳಲ್ಲಿ ಮಹಿಳಾ ಕಂಡಕ್ಟರ್ ಕಡ್ಡಾಯ.

## ಡಾ.ಬಾಬು ಜಗಜೀವನ ರಾಂ ಆದರ್ಶಗಳನ್ನ ಮೈಗೂಡಿಸಿಕೊಳ್ಳಿ : ಶಾಸಕ

• ಉದಯವಾಹಿನಿ, ಗುಂಡ್ಲುಪೇಟೆ


ಉದಯವಾಹಿನಿ ಚಿತ್ರ

ಹಸಿರು ಕ್ರಾಂತಿ ಹರಿಕಾರ ಡಾ.ಬಾಬು ಜಗಜೀವನರಾಂ ಅವರ ಆದರ್ಶಗಳನ್ನ ಮೈಗೂಡಿಸಿಕೊಳ್ಳಿ ಎಂದು ಶಾಸಕ ಎಚ್.ಎಂ.ಗಣೇಶ್ ಪ್ರಸಾದ್ ಯುವಪೀಳಿಗೆಗೆ ಕಿವಿಮಾತು ಹೇಳಿದರು.

ರಾಷ್ಟ್ರೀಯ ಹಬ್ಬಗಳ ಆಚರಣ ಸಮಿತಿ, ತಾಲ್ಲೂಕು ಆಡಳಿತ ವತಿಯಿಂದ ಆಯೋಜಿಸಿದ್ದ 119 ನೇ ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು. ದೇಶದಲ್ಲಿನ ಕಾನೂನು ಸುವ್ಯವಸ್ಥೆಗೆ, ಆರ್ಥಿಕ ಸುಧಾರಣೆಗೆ ತಮ್ಮದೇ ಆದ ಕೊಡುಗೆ ನೀಡಿದ ಬಾಬು ಜಗಜೀವನರಾಂ ಅವರನ್ನ ನಿತ್ಯವೂ ಸ್ಮರಣೆಸಿದರೂ ಸಾಲದು, ದೇಶಕ್ಕಾಗಿ ತ್ಯಾಗಗೈದವರಲ್ಲಿ ಬಾಬುಜಿ ಅವರು ಅಗ್ರಪಂಕ್ತಿಯಲ್ಲಿರುವುದು ಅವರ ಸೇವಾಮನೋಭಾವನೆಯನ್ನ ತೋರುತ್ತದೆ ಎಂದರು. ಅವರ ಆಶಯದಂತೆ ಬಸವಣ್ಣನವರ ಆದರ್ಶಗಳನ್ನ ಅನುಸರಿಸುತ್ತ ಬಂದಲ್ಲಿ ಎಲ್ಲರ ನಡುವೆ ಸಾಮರಸ್ಯ ಕಾಣಬಹುದಾಗಿದೆ ಅಲ್ಲದೆ ಜಯಂತಿಯನ್ನ ವಿಜೃಂಭಣೆಯಿಂದ ಆಚರಣೆ ಮಾಡುವುದರ ಜೊತೆಗೆ ಅವರು ಹಾಕಿ ಕೊಟ್ಟ ಮಾರ್ಗದಲ್ಲಿ ನಡೆದರೆ ಜಯಂತಿಗೆ ಅರ್ಥ ಸಿಗುತ್ತದೆ ಎಂದು ಅಭಿಪ್ರಾಯಪಟ್ಟರು.

ಪಟ್ಟಣದ ಊಟಿ ರಸ್ತೆಯಲ್ಲಿರುವ ಬಾಬು ಜಗಜೀವನರಾಂ ಭವನವನ್ನ ಶೀಘ್ರದಲ್ಲೇ ಉದ್ಘಾಟನೆ ಮಾಡಲಾಗುವುದು ಹಾಗೆಯೇ ಸಮುದಾಯದ ಅಭಿವೃದ್ಧಿಗೆ ಶ್ರಮಿಸುತ್ತೇನೆ ಎಂಬ ಭರವಸೆ ನೀಡಿದರು. ನಿಗಮ ಮಂಡಳಿಗೆ ಬರುವ ಸರ್ಕಾರಿ ಸವಲತ್ತುಗಳ ಹಂಚಿಕೆಯಲ್ಲಿ ನಿಬಂಧನೆಗಳು ಒಳಪಟ್ಟಿರುವುದರಿಂದ ಅರ್ಜಿ ಸಲ್ಲಿಸಿದ ಎಲ್ಲಾ ಫಲಾನುಭವಿಗಳಿಗೂ ಸವಲತ್ತು ಸಿಗಲು ಸಾಧ್ಯವಿಲ್ಲ ಹಾಗಾಗಿ ಸಮುದಾಯದ ಯಾರು ಬೇಸರ ಮಾಡಿಕೊಳ್ಳಬೇಕಿಲ್ಲ ಮುಂದಿನ ದಿನಗಳಲ್ಲಿ ಸಮುದಾಯಕ್ಕೆ ಬೇಕಾದ ಎಲ್ಲಾ ಸವಲತ್ತುಗಳನ್ನು ಒದಗಿಸುವ ಜವಾಬ್ದಾರಿ ನನ್ನದು ಎಂದರು. ಕಾರ್ಯಕ್ರಮಕ್ಕೆ ಮುಖ್ಯ ಭಾಷಣಕಾರರಾಗಿ ಆಗಮಿಸಿದ್ದ ಎಡತೊರೆ ಎಂ ನಿಂಗರಾಜು ಅವರು ಡಾ.ಬಾಬು ಜಗಜೀವನರಾಂ ಅವರ ಜೀವನ ಚರಿತ್ರೆ, ದೇಶಕ್ಕಾಗಿ ಸಲ್ಲಿಸದ ಸೇವೆ, ಸಮುದಾಯದ ಏಳ್ಗೆಗೆ ನೀಡಿದ ಕೊಡುಗೆಗಳ ಕುರಿತು ಮಾಹಿತಿ ನೀಡಿದರು. ಈ ನಡುವೆ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಅತಿಹೆಚ್ಚು ಅಂಕಪಡೆದ ವಿದ್ಯಾರ್ಥಿಗಳನ್ನ ಸನ್ಮಾನಿಸಲಾಯಿತು.

## ಬೀದಿನಾಯಿಗಳಿಗೆ ಫೀಡಿಂಗ್ ಪಾಯಿಂಟ್

• ಉದಯವಾಹಿನಿ, ಬಂಗಾರಪೇಟೆ



ಉದಯವಾಹಿನಿ ಚಿತ್ರ


ಪಟ್ಟಣದ ಎಲ್ಲಾ 27 ವಾರ್ಡ್‌ಗಳಲ್ಲಿ ಅಧಿಕೃತವಾಗಿ ಬೀದಿ ನಾಯಿಗಳಿಗಾಗಿ ಫೀಡಿಂಗ್ ಪಾಯಿಂಟ್ (ಆಹಾರ ನೀಡುವ ಸ್ಥಳ) ಗಳನ್ನು ಗುರುತಿಸಲಾಗಿದೆ. ಪಾದಚಾರಿಗಳು ಮತ್ತು ವಾಹನ ಸವಾರರಿಗೆ ತಲೆನೋವಾಗಿದ್ದ ಬೀದಿನಾಯಿಗಳ ಹಾವಳಿ ನಿಯಂತ್ರಣಕ್ಕೆ ನಗರಸಭೆ ಈ ಕ್ರಮ ಕೈಗೊಂಡಿದೆ.

ಆಹಾರಕ್ಕಾಗಿ ಹಿಂಡುಹಿಂಡಾಗಿ ಬೀದಿಗಿಳಿಯುತ್ತಿದ್ದ ನಾಯಿಗಳು ಪಾದಚಾರಿಗಳ ಮೇಲೆ ದಾಳಿ ಮಾಡುತ್ತಿದ್ದವು. ಇದನ್ನು ತಪ್ಪಿಸಲು ನಗರಸಭೆಯು ಪ್ರತಿ ವಾರ್ಡ್‌ನಲ್ಲಿ ಜನವಸತಿ ಮತ್ತು ವಾಹನ ಸಂಚಾರ ವಿರಳವಿರುವ ಪ್ರತಿ ವಾರ್ಡ್‌ನಲ್ಲಿ ಫೀಡಿಂಗ್ ಪಾಯಿಂಟ್‌ಗಳನ್ನು ನಿರ್ಮಿಸಿದೆ.

ಫೀಡಿಂಗ್ ಪಾಯಿಂಟ್‌ಗಳಿಗೆ ಬರುವ ನಾಯಿಗಳನ್ನು ಗುರುತಿಸಿ ಅವುಗಳಿಗೆ ಸುಲಭವಾಗಿ ಸಂತಾನಹರಣ ಶಸ್ತ್ರ ಚಿಕಿತ್ಸೆ ಮತ್ತು ರೇಬಿಸ್ ಲಸಿಕೆ ನೀಡಲು ನಗರಸಭೆಗೆ ಅನುಕೂಲವಾಗಲಿದೆ. ಹೋಟೆಲ್ ಮತ್ತು ಮಾಂಸದ ಅಂಗಡಿಗಳ ತ್ಯಾಜ್ಯವನ್ನು ಎಲ್ಲೆಂದರಲ್ಲಿ ಎಸೆಯುವುದಕ್ಕೆ ಈ ಯೋಜನೆಯಿಂದ ಕಡಿವಾಣ ಬೀಳಲಿದೆ. ಪಟ್ಟಣದ ಸ್ವಚ್ಛತೆ ಕಾಪಾಡಬಹುದು ಎನ್ನುತ್ತಾರೆ ಸ್ಥಳೀಯರು.

ಬೀದಿ ನಾಯಿಗಳನ್ನು ಕೊಲ್ಲುವುದು, ಸ್ಥಳಾಂತರಿಸುವುದು ಕಾನೂನುಬಾಹಿರ. ಹೀಗಾಗಿ, ಸುಪ್ರೀಂ ಕೋರ್ಟ್ ಮಾರ್ಗಸೂಚಿಯಂತೆ ಅವುಗಳ ಸಂಖ್ಯೆ ನಿಯಂತ್ರಿಸಲು ಈ ಕ್ರಮ ಅನಿವಾರ್ಯವಾಗಿತ್ತು. ಬೀದಿ ನಾಯಿಗಳ ಹಾವಳಿ ತಡೆಗೆ ಸಾರ್ವಜನಿಕರ ಸಹಕಾರ ಅಗತ್ಯ. ಪ್ರತಿ ವಾರ್ಡ್‌ನಲ್ಲಿ ಫೀಡಿಂಗ್ ಪಾಯಿಂಟ್ ಮಾಡುವುದರಿಂದ ನಾಯಿಗಳು ಆಹಾರಕ್ಕಾಗಿ ಅಲೆದಾಡುವುದು ತಪ್ಪಲಿದೆ. ಹಿರಿಯ ನಾಗರಿಕರು, ಮಹಿಳೆಯರು ಮತ್ತು ಪಾದಚಾರಿಗಳು ರಸ್ತೆಯಲ್ಲಿ ಭಯವಿಲ್ಲದೆ ಓಡಾಡಬಹುದು ಎಂದು ನಗರಸಭೆ ಆಯುಕ್ತ ಸತ್ಯನಾರಾಯಣ ತಿಳಿಸಿದರು.

## ಅಹವಾಲು ಆಲಿಸಿದ ತಹಶೀಲ್ದಾರ್


ಉದಯವಾಹಿನಿ ಚಿತ್ರ

• ಉದಯವಾಹಿನಿ, ಪಾಂಡವಪುರ

ಹಾರೋಹಳ್ಳಿ ಗ್ರಾಮದಲ್ಲಿ ಸಾರ್ವಜನಿಕ ಗ್ರಂಥಾಲಯ ಹಾಗೂ ಕ್ರೀಡಾ ಚಟುವಟಿಕೆಗಳಿಗೆ ಸ್ಥಳ ನೀಡುವ ವಿಷಯಕ್ಕೆ ಸಂಬಂಧಪಟ್ಟಂತೆ ತಹಶೀಲ್ದಾರ್ ಬಸವರಡ್ಡೆಪ್ಪ ರೋಣದ ಈಚೆಗೆ ಸ್ಥಳ ಪರಿಶೀಲನೆ ನಡೆಸಿದರು. ಗ್ರಾಮದ ಜಮಾಬಂದಿಗೆ ಸೇರಿದ ಸರ್ವೇ ನಂ.4ರಲ್ಲಿ 39 ಗುಂಟೆ ವಿಸ್ತೀರ್ಣ (ಸರ್ಕಾರಿ ತೋಪು) ಮತ್ತು 21 /1ಎ ಸರ್ವೇ ನಂ.39 ಗುಂಟೆ ವಿಸ್ತೀರ್ಣ (ಸರ್ಕಾರಿ ಬೀಳು) ಸ್ಥಳದಲ್ಲಿ ಊರಿನ ತ್ಯಾಜ್ಯ, ನೀರು ಸಂಗ್ರಹವಾಗಿ ಶುಚಿತ್ವಕ್ಕೆ ಧಕ್ಕೆ ಉಂಟಾಗಿದೆ ಎಂದು ತಿಳಿಸಿದರು. ಇಲ್ಲಿರುವ ಪುರಾತನ ಮಂಟಪವನ್ನು ಪುನಶ್ಚೇತನಗೊಳಿಸಿ, ಗಿಡಗಂಟಿ ಸ್ವಚ್ಛಗೊಳಿಸಿ ಹಾರೋಹಳ್ಳಿ ಜನರಿಗೆ ಗ್ರಂಥಾಲಯ ಹಾಗೂ ಕ್ರೀಡಾಚಟುವಟಿಕೆಗಳ ಸ್ಥಳ ಮತ್ತು ಹಿರಿಯ ನಾಗರಿಕರು ವಾಯುವಿಹಾರ, ವಿಶ್ರಾಂತಿಗಾಗಿ ಉದ್ಯಾನ ನಿರ್ಮಿಸಬೇಕು ಎಂದು ಗ್ರಾಮದ ಯಜಮಾನರು, ಗ್ರಾಮಸ್ಥರು ಹಾಗೂ ಯುವಕರು ತಾಲ್ಲೂಕು ಆಡಳಿತವನ್ನು ಒತ್ತಾಯಿಸಿ ಶಿರಸ್ತೇದಾರ್ ಮೋಹನ್ ಅವರಿಗೆ ಗ್ರಾಮದ ಜನರು ಮನವಿ ಸಲ್ಲಿಸಿದರು.

## ಶಾಂತಿಧಾಮ ಗುರುಕುಲದಲ್ಲಿ ಭಾರತೀಯ ಜ್ಞಾನ ಪರಂಪರೆ ಪ್ರದರ್ಶನ ಅನಾವರಣ

• ಉದಯವಾಹಿನಿ, ರಾಮನಗರ


ಉದಯವಾಹಿನಿ ಚಿತ್ರ

ಭಾರತೀಯ ಜ್ಞಾನ ಪರಂಪರೆ ಕುರಿತಾಗಿ ಚೈತನ್ಯಭರಿತ, ಜ್ಞಾನವರ್ಧಕ ಪ್ರದರ್ಶನವನ್ನು ಜಿಲ್ಲೆಯ ಕನಕಪುರ ತಾಲ್ಲೂಕಿನ ಸಂಗಮ ಸಮೀಪ ಅಲ್ಲಿರುವ ಓಂ ಶಾಂತಿಧಾಮ ಗುರುಕುಲದಲ್ಲಿ ಆಯೋಜಿಸಲಾಗಿತ್ತು ಗುರುಕುಲದ ಮಕ್ಕಳಿಂದ ಭಾರತದ ಪ್ರಾಚೀನ ಜ್ಞಾನ ಪರಂಪರೆಯನ್ನು ಪರಿಚಯಿಸುವ ನಿಟ್ಟಿನಲ್ಲಿ ಸನಾತನ ಪಾರಂಪರಿಕ ಶಿಕ್ಷಣ ಮಹತ್ವ ಅರ್ಥಪೂರ್ಣವಾಗಿ ಅನಾವರಣಗೊಂಡಿತು. ಕೇರಳದ ಕಲರಿ ವಿದ್ಯೆ, ವೇದಗಳ ಅನಾವರಣ, ಸಂಸ್ಕೃತ ಭಾಷೆಯ ಕಲಿಕೆ, ವಿಜ್ಞಾನ ಮತ್ತು ವೇದಗಳಿಗೆ ಇರುವ ಸಂಬಂಧ ಸೇರಿದಂತೆ ಮಕ್ಕಳು ಹಲವು ವಿಚಾರಗಳನ್ನು ಪೋಷಕರ ಮುಂದೆ ಮಂಡನೆ ಮಾಡುವ ಮೂಲಕ ಗಮನ ಸೆಳೆದರು.

ಶ್ರೀ ಆರ್ಯಮುನಿ ಸಂಸ್ಥೆಯ ಅಧ್ಯಕ್ಷರಾದ ಪ್ರಮೋದ್ ಜೀ ಅವರು ಕಲೆಗಳ ಪ್ರದರ್ಶನ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿ, ಭಾರತೀಯ ಜ್ಞಾನ ಪರಂಪರೆಯು ಇಂದು ಹೆಚ್ಚು ಪ್ರಸ್ತುತವಾಗಿದೆ. ಪ್ರಾಚೀನ ಶಾಸ್ತ್ರಗಳು, ವೇದಗಳು ಮತ್ತು ಸಂಸ್ಕೃತಿಯ ಆಚರಣೆಗಳು ಇಂದಿನ ಜೀವನಕ್ಕೂ ಮಾರ್ಗದರ್ಶನ ನೀಡುತ್ತಿವೆ ಎಂಬುದನ್ನು ವಿವರಿಸಿದರು. ವಿದ್ಯಾರ್ಥಿಗಳು ತಮ್ಮ ಪರಂಪರೆಯ ಬಗ್ಗೆ ಹೆಚ್ಚು ಶ್ರೇಷ್ಠ ಭಾವನೆ ಬೆಳೆಸಿಕೊಂಡು ಅದರ ಮೌಲ್ಯಗಳನ್ನು ದೈನಂದಿನ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ವಿದ್ಯಾರ್ಥಿಗಳು ಭಾರತೀಯ ಜ್ಞಾನ ಪರಂಪರೆಯ ವಿವಿಧ ಅಂಶಗಳ ಕುರಿತು ರೇಖಾ ಚಿತ್ರಗಳ ಮೂಲಕ ತಮ್ಮ ಕೌಶಲ್ಯವನ್ನು ತೋರಿಸಿದರು. ಅವರ ಆತ್ಮವಿಶ್ವಾಸ ಮತ್ತು ಸ್ಪಷ್ಟತೆ, ಅವರ ಆಳವಾದ ತಿಳುವಳಿಕೆ ಮತ್ತು ಸಮರ್ಪಿತ ತಯಾರಿಯನ್ನು ಪ್ರತಿಬಿಂಬಿಸಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಭಾರತದ ಬೌದ್ಧಿಕ ಮತ್ತು ಸಾಂಸ್ಕೃತಿಕ ಪರಂಪರೆಯ ಬಗ್ಗೆ ಜಾಗೃತಿ ಮೂಡಿಸುವಲ್ಲಿ ಈ ಕಾರ್ಯಕ್ರಮ ಮಹತ್ವದ ಪಾತ್ರವಹಿಸಿದೆ. ವಿದ್ಯಾರ್ಥಿಗಳ ಪ್ರದರ್ಶನವು ಅನುಭವಾತ್ಮಕ ಅಧ್ಯಯನಕ್ಕೆ ವೇದಿಕೆ ಒದಗಿಸುವುದಷ್ಟೇ ಅಲ್ಲದೆ, ಯುವ ವಿದ್ಯಾರ್ಥಿಗಳಲ್ಲಿ ಹೆಮ್ಮೆ ಮತ್ತು ಹೊಣೆಗಾರಿಕೆಯ ಭಾವನೆಯನ್ನು ಉಂಟುಮಾಡಿದೆ ಎಂದರು.

ಗುರು ಆಚಾರ್ಯ ಲಂಬೋಧರಭಟ್ ಮಾತನಾಡಿ, ಮನುಷ್ಯನ ಆಚರಣೆ ಶುದ್ಧವಾಗಿದ್ದರೆ ಬದುಕು ಪರಿಶುದ್ಧವಾಗಿರುತ್ತದೆ. ಇದನ್ನು ಅರಿತುಕೊಂಡು ಮಕ್ಕಳು ನಿತ್ಯ ಎರಡು ಗಂಟೆಯಾದರೂ ಓದಬೇಕು. ಮಕ್ಕಳನ್ನು ಎಷ್ಟೇ ಪ್ರೀತಿ ಮಾಡಿದರೂ ಅವರ ಜೀವನಶೈಲಿ ಬಗ್ಗೆ ಪೋಷಕರು ಗಮನಹರಿಸಬೇಕು ಎಂದರು.

ಸಾತ್ವಿಕ ಆಹಾರ ಮಕ್ಕಳ ಮನಸ್ಸಿನ ಮೇಲೆ ಪರಿಣಾಮ ಬೀರುವುದರಿಂದ ಹೊರಗಿನ ತಿಂಡಿ ತಿನಿಸುಗಳನ್ನು ನೀಡಬಾರದು. ಗುರುಕುಲ ಪದ್ಧತಿಯು ದೇಶದ ಸಮಗ್ರ ಅಭಿವೃದ್ಧಿ ದೃಷ್ಟಿಯಿಂದ ಉತ್ತಮ ಕಲಿಕಾ ಶಿಕ್ಷಣವನ್ನು ನೀಡುತ್ತಿದ್ದು ಇದನ್ನು ಮಕ್ಕಳು ತಮ್ಮ ಬದುಕಿನಲ್ಲಿ ಪರಿಪೂರ್ಣವಾಗಿ ಅಳವಡಿಸಿಕೊಳ್ಳುವಲ್ಲಿ ಪೋಷಕರ ಪಾತ್ರ ಮಹತ್ವದ್ದಾಗಿದೆ ಎಂದರು.

## ಹೊಸ ಬಡಾವಣೆ; 20 ಸಾವಿರ ಸೈಟ್ ಅಭಿವೃದ್ಧಿ ಪ್ರಾಧಿಕಾರದಿಂದ ಡ್ರೋನ್ ಸಮೀಕ್ಷೆ ಆರಂಭ

• ಉದಯವಾಹಿನಿ, ಮೈಸೂರು



ಉದಯವಾಹಿನಿ ಚಿತ್ರ

ಮೈಸೂರಿನ ನಿವೇಶನಾಕಾಂಕ್ಷಿಗಳಿಗೊಂದು ಸಿಹಿ ಸುದ್ದಿ. ಮೈಸೂರು ನಗರದ ಹೊರ ವಲಯದಲ್ಲಿ ಬೃಹತ್ ಬಡಾವಣೆ ನಿರ್ಮಿಸಲು ಮುಂದಾಗಿರುವ ಮೈಸೂರು ಅಭಿವೃದ್ಧಿ ಪ್ರಾಧಿಕಾರವು, ಡ್ರೋನ್ ಸರ್ವೆ ಕಾರ್ಯ ಆರಂಭಿಸಿದೆ.

ತಾಲ್ಲೂಕಿನ ಇಲವಾಲ ಹೋಬಳಿಯ ದೊಡ್ಡ ಮಾರಗೌಡನಹಳ್ಳಿ, ಕಮರವಳ್ಳಿ, ಬೊಮ್ಮೇನಹಳ್ಳಿ, ನಾಗವಾಲ ಗ್ರಾಮಗಳಲ್ಲಿ 50:50ರ ಅನುಪಾತದಡಿ 2113 ಎಕರೆ ಪ್ರದೇಶದಲ್ಲಿ ಹೊಸ ಬಡಾವಣೆ ನಿರ್ಮಾಣ ಮಾಡಲಾಗುತ್ತಿದ್ದು, ಜಿಲ್ಲಾಧಿಕಾರಿ ಜಿ ಲಕ್ಷ್ಮೀ ಕಾಂತ ರೆಡ್ಡಿ, ಮೈಸೂರು ಅಭಿವೃದ್ಧಿ ಪ್ರಾಧಿಕಾರ ಆಯುಕ್ತ ಕೆ ಆರ್ ರಕ್ಷಿತ್ ಡ್ರೋನ್ ಸರ್ವೇಗೆ ಚಾಲನೆ ನೀಡಿದರು. ಈ ಯೋಜನೆಯಡಿ ರೈತರಿಗೆ ಯಾವುದೇ ಖರ್ಚು ಇಲ್ಲದೆ ಬಡಾವಣೆ ರಚಿಸಿ ಶೇ.50ರಷ್ಟು ಅಭಿವೃದ್ಧಿಪಡಿಸಿದ ನಿವೇಶನಗಳನ್ನು ಬಿಟ್ಟುಕೊಡಲು ಎಂಡಿಎ ನಿರ್ಧರಿಸಿದೆ. ರೈತರಿಂದಲೂ ಇದಕ್ಕೆ ಪೂರಕ ಸ್ಪಂದನೆ ದೊರೆತ ಹಿನ್ನೆಲೆಯಲ್ಲಿ ಡ್ರೋನ್ ಸರ್ವೇ ಪ್ರಾರಂಭಗೊಂಡಿದೆ.

**ಜಮೀನು ಒಪ್ಪಂದಕ್ಕೆ ಮನವೊಲಿಕೆ:** 2 ಸಾವಿರ ಎಕರೆ ಪ್ರದೇಶದಲ್ಲಿ 20 ಸಾವಿರ ನಿವೇಶನಗಳನ್ನು ಒಳಗೊಂಡ ಬೃಹತ್ ಬಡಾವಣೆ ನಿರ್ಮಿಸಲು ಯೋಜನೆ ರೂಪಿಸಲಾಗಿದೆ. 50:50 ಅನುಪಾತದಲ್ಲಿ ಬಡಾವಣೆ ನಿರ್ಮಿಸಲು ನಿರ್ಧರಿಸಿದ ನಂತರ ಎಂ ಡಿ ಎ ಆಯುಕ್ತ ಕೆ ಆರ್ ರಕ್ಷಿತ್ ಸ್ವತಃ ರೈತರೊಂದಿಗೆ ನೇರ ಮಾತುಕತೆ ನಡೆಸಿ ಜಮೀನು ಒಪ್ಪಂದಕ್ಕೆ ಮನವೊಲಿಸುವಲ್ಲಿ ಯಶಸ್ವಿಯಾದರು.

**ರೈತರಿಗೆ ಮನವರಿಕೆ ಮಾಡಿಕೊಟ್ಟ ಆಯುಕ್ತರು:** ಹೊಸ ಬಡಾವಣೆ ನಿರ್ಮಾಣ ಸಂಬಂಧ ಮೈಸೂರು ತಾಲ್ಲೂಕಿನ ಇಲವಾಲ ಹೋಬಳಿಯ ನಾಗವಾಲ, ಬೊಮ್ಮೇನಹಳ್ಳಿ, ಕಮರಹಳ್ಳಿ, ದೊಡ್ಡ ಮಾರಗೌಡನಹಳ್ಳಿ ಗ್ರಾಮಗಳ ಜಮೀನುಗಳ ಭೂ ಮಾಲೀಕರನ್ನು ನೇರವಾಗಿ ಭೇಟಿ ಮಾಡಿ ಬಡಾವಣೆ ರಚನೆಗೆ ಭೂಮಿ ಕೊಟ್ಟರೆ ಆಗುವ ಪ್ರಯೋಜನ, ಯಾವುದೇ ಹಣ ಹೂಡಿಕೆ ಇಲ್ಲದೇ ಶೇ 50 ಅಭಿವೃದ್ಧಿಪಡಿಸಿದ ನಿವೇಶನಗಳನ್ನು ನೀಡಲು ಬಯಸಿರುವ ವಿಚಾರವನ್ನು ಮನವರಿಕೆ ಮಾಡಿಕೊಟ್ಟರು.

**20 ಸಾವಿರ ನಿವೇಶನಗಳ ರಚನೆ:** ಮೈಸೂರು ತಾಲ್ಲೂಕಿನ ಇಲವಾಲ ಹೋಬಳಿ ಬೊಮ್ಮೇನಹಳ್ಳಿ, ನಾಗವಾಲ, ಕಮ್ಮರಹಳ್ಳಿ, ದೊಡ್ಡಮಾರಗೌಡನಹಳ್ಳಿ ಗ್ರಾಮಗಳ ವ್ಯಾಪ್ತಿಯಲ್ಲಿವಿವಿಧ ಸರ್ವೇ ನಂಬರ್‌ಗಳನ್ನು ಗುರುತಿಸಿದ್ದು, ನಾಗವಾಲ 429.13, ಬೊಮ್ಮೇನಹಳ್ಳಿ- 766.33, ದೊಡ್ಡಮಾರಗೌಡನಹಳ್ಳಿ - 326.38, ಕಮ್ಮರಹಳ್ಳಿ - 336.20 ಎಕರೆ ಸೇರಿದಂತೆ 2113.24 ಎಕರೆಯನ್ನು ಗುರುತಿಸಲಾಗಿದೆ. ಈ ಗ್ರಾಮಗಳ ಒಟ್ಟು ಜಮೀನನ್ನು ಒಟ್ಟುಗೂಡಿಸಿ 20 ಸಾವಿರ ನಿವೇಶನ ರಚನೆಯಾಗಲಿದೆ.

# ಹಿತ್ತಲಹಳ್ಳಿ ತ್ಯಾಜ್ಯ ಘಟಕದ ಸಮಸ್ಯೆ: ಪ್ರತಿಭಟನೆ


## ನಗರದಿಂದ ಕಸ ತುಂಬಿಕೊಂಡು ಬಂದ ನಗರಸಭೆಯ ಕಸ ವಿಲೇವಾರಿ ವಾಹನಗಳನ್ನು ರಸ್ತೆಯಲ್ಲೇ ತಡೆದು ಪ್ರತಿಭಟನೆ

• ಉದಯವಾಹಿನಿ, ಶಿಡ್ಲಘಟ್ಟ

ನಗರದ ಹೊರವಲಯದಲ್ಲಿನ ಹಿತ್ತಲಹಳ್ಳಿ ಬಳಿ ಇರುವ ನಗರ ತ್ಯಾಜ್ಯ ಘಟಕದಿಂದ ಹತ್ತಾರು ಸಮಸ್ಯೆಗಳು ಎದುರಾಗುತ್ತಿವೆ. ದಶಕದಿಂದಲೂ ಹೇಳಿಕೊಂಡು ಬಂದರೂ ಸಮಸ್ಯೆಗಳು ಮಾತ್ರ ನಿವಾರಣೆಯಾಗಿಲ್ಲ. ಹಾಗಾಗಿ ತ್ಯಾಜ್ಯ ಘಟಕವನ್ನು ಇಲ್ಲಿಂದ ಸ್ಥಳಾಂತರಿಸಿ ಎಂದು ಹಿತ್ತಲಹಳ್ಳಿ, ಸುತ್ತಮುತ್ತಲ ಗ್ರಾಮಸ್ಥರು ಶನಿವಾರ ಪ್ರತಿಭಟನೆ ನಡೆಸಿದರು.

ನಗರದಿಂದ ಕಸ ತುಂಬಿಕೊಂಡು ಬಂದ ನಗರಸಭೆಯ ಕಸ ವಿಲೇವಾರಿ ವಾಹನಗಳನ್ನು ರಸ್ತೆಯಲ್ಲೇ ತಡೆದು, ತ್ಯಾಜ್ಯ ಘಟಕಕ್ಕೆ ಬೀಗ ಜಡಿದು ನೂರಾರು ಮಂದಿ ಪ್ರತಿಭಟನೆ ನಡೆಸಿದರು. ಕೇವಲ ಭರವಸೆಯ ಮಾತುಗಳನ್ನು ಕೇಳಿ ಕೇಳಿ ಸಾಕಾಗಿದೆ. ಸಮಸ್ಯೆಗೆ ಪರಿಹಾರ ಸಿಗುವವರೆಗೂ ಪ್ರತಿಭಟನೆ ಕೈ ಬಿಡುವ ಪ್ರಶ್ನೆಯಿಲ್ಲ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

ಕಳೆದ ಏಳೆಂಟು ವರ್ಷಗಳಿಂದಲೂ ಪ್ರತಿವರ್ಷ ಬೇಸಿಗೆಯಲ್ಲಿ ಕಸದ ರಾಶಿಗೆ ಬೆಂಕಿ ಬೀಳುತ್ತದೆ. ವಾರ, ತಿಂಗಳುಗಟ್ಟಲೆ ಬೆಂಕಿ ಉರಿದರೂ ಅದನ್ನು ನಂದಿಸುವ ಕೆಲಸ ಸಂಪೂರ್ಣವಾಗಿ ಆಗುತ್ತಿಲ್ಲ. ಅಗ್ನಿಶಾಮಕ ವಾಹನ, ಸಿಬ್ಬಂದಿ ಕೊರತೆ, ನೀರಿನ ಕೊರತೆ ಇನ್ನಿತರೆ ಕಾರಣಗಳಿಂದ ಒಂದೆರಡು ದಿನಗಳ ಕಾಲ ಬಂಕಿ ನಂದಿಸಿ ಸುಮ್ಮನಾಗಿ ಬಿಡುತ್ತಾರೆ. ಕಸದ ರಾಶಿಯ ಮೇಲೆ ಮಾತ್ರ ಬೆಂಕಿಯನ್ನು ನಂದಿಸುತ್ತಾರೆ. ಆದರೆ ಕಸದ ರಾಶಿಯ ಒಳಗಿನ ಬೆಂಕಿ ಮಾತ್ರ ತಿಂಗಳುಗಟ್ಟಲೆ ಉರಿಯುವ ಕಾರಣ ದಟ್ಟವಾದ ಹೊಗೆ, ದೂಳು ಸುತ್ತಮುತ್ತಲಿನ ಹೊಲ ಗದ್ದೆ ತೋಟ ಹಳ್ಳಿಗಳನ್ನು ಆವರಿಸುತ್ತಿದೆ. ಇದರಿಂದ ಮುಖ್ಯವಾಗಿ ರೇಷ್ಮೆ ಹುಳು ಸಾಕಣೆ ಮೇಲೆ ನೇರವಾದ ಪರಿಣಾಮ ಬೀರುತ್ತಿದೆ. ಜತೆಗೆ ಮಕ್ಕಳು, ಬಾಣಂತಿ, ಗರ್ಭಿಣಿಯರಲ್ಲಿ ಉಸಿರಾಟದ ನಾನಾ ತೊಂದರೆಗಳು ಕಾಣಿಸಿಕೊಳ್ಳುತ್ತಿವೆ. ಜತೆಗೆ ಕಸದಲ್ಲಿನ ಕೋಳಿ ಮಾಂಸದ ತ್ಯಾಜ್ಯ ತಿನ್ನಲು ನೂರಾರು ನಾಯಿಗಳು ದಿನವೂ ಇಲ್ಲಿಗೆ ಬರುತ್ತಿವೆ.


ಉದಯವಾಹಿನಿ ಚಿತ್ರ

ತ್ಯಾಜ್ಯ ಘಟಕಕ್ಕೆ ಬೀಗ ಹಾಕದ ಕಾರಣ ನಾಯಿಗಳು ಒಳಗೆ ಹೋಗಿ ಕೋಳಿ ಮಾಂಸದ ತ್ಯಾಜ್ಯ ತಿಂದು ಕೊಬ್ಬಿ ಸುತ್ತಮುತ್ತಲ ಹೊಲ ಗದ್ದೆ ತೋಟ ಹಾಗೂ ಮನೆಗಳ ಬಳಿ ಬೀಡುಬಿಟ್ಟು ಮಲಗುತ್ತವೆ. ಮಕ್ಕಳು, ವೃದ್ಧರ ಮೇಲೆ ದಾಳಿ ಮಾಡಿದ ಸಾಕಷ್ಟು ಘಟನೆಗಳು ನಡೆದಿವೆ. ತ್ಯಾಜ್ಯ ಘಟಕದ ಮುಂಭಾಗ ನಾಯಿಗಳ ಗುಂಪು ಪರಸ್ಪರ ಕಚ್ಚಾಡಿಕೊಂಡು ಏಕಾಏಕಿ ರಸ್ತೆಗೆ ನುಗ್ಗುವ ಕಾರಣ ಶಿಡ್ಲಘಟ್ಟ ಮಾರ್ಗದಲ್ಲಿ ಸಂಚರಿಸುವ ಬಹುತೇಕ ಬೈಕ್ ಸವಾರರು ನಾಯಿ ಅಡ್ಡ ಬಂದ ಕಾರಣ ರಸ್ತೆ ಬಿದ್ದು ಕೈ ಕಾಲು ಮುರಿದುಕೊಂಡು ಬಹಳಷ್ಟು ಘಟನೆಗಳು ದಾಖಲಾಗಿವೆ. ಈ ಎಲ್ಲಾ ಸಮಸ್ಯೆಗಳನ್ನು ನಿವಾರಿಸುವಂತೆ, ಇಲ್ಲವೇ ತ್ಯಾಜ್ಯ ಘಟಕವನ್ನಾದರೂ ಸ್ಥಳಾಂತರ ಮಾಡಿ, ಆಗದಿದ್ದರೆ ನಮ್ಮೂರನ್ನೇ ಸ್ಥಳಾಂತರ ಮಾಡಿ ಎಂದು ಜಿಲ್ಲಾಧಿಕಾರಿಯಿಂದ ಹಿಡಿದು ಎಲ್ಲಾ ಅಧಿಕಾರಿಗಳಿಗೂ ಸಾಕಷ್ಟು ಬಾರಿ ಮನವಿ ಮಾಡಿದ್ದೇವೆ. ಆದರೆ ನಮಗೆ ಸಿಕ್ಕಿದ್ದು ಭರವಸೆ ಮಾತ್ರವೇ ಹೊರತು ಸಮಸ್ಯೆಗೆ ಪರಿಹಾರ ಸಿಕ್ಕಿಲ್ಲ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

ಸಮಸ್ಯೆಗಳನ್ನು ಆಲಿಸಿದ ಶಾಸಕ ಬಿ.ಎನ್.ರವಿಕುಮಾರ್, ಅಧಿಕಾರಿಗಳೊಂದಿಗೆ ಚರ್ಚಿಸಿ ಕೂಡಲೆ ಶಿಡ್ಲಘಟ್ಟ ಮಾತ್ರವಲ್ಲ ಜಿಲ್ಲೆಯ ಬೇರೆ ಬೇರೆ ಕಡೆಯಿಂದಲೂ ಅಗ್ನಿಶಾಮಕ ದಳದ ವಾಹನ. ಸಿಬ್ಬಂದಿ ತರಿಸಿಕೊಳ್ಳಿ, ಅದಕ್ಕೆ ತಗಲುವ ವೆಚ್ಚವನ್ನು ನಗರಸಭೆಯಿಂದ ಭರಿಸಿ. ಎರಡು ದಿನಗಳಲ್ಲಿ ಬೆಂಕಿ ನಂದಿಸುವ ಕೆಲಸ ಆಗಬೇಕು. ನಾಲ್ಕು ಯಂತ್ರ ತರಿಸಿ ಕಸದ ರಾಶಿಯನ್ನು ಕದಲಿಸಿ ಬೆಂಕಿನ ನಂದಿಸಬೇಕೆಂದು ಸೂಚಿಸಿದರು.


> ಈ ಹಿಂದೆ ಪುರಸಭೆ ಅಧ್ಯಕ್ಷರಾಗಿದ್ದ ಸದಾಶಿವ ಅವಧಿಯಲ್ಲಿ ಮೂರರಿಂದ ನಾಲ್ಕು ಎಕರೆ ಜಮೀನಿನಲ್ಲಿ ವೃದ್ಧರಿಗೆ ಒಂದು ಸುಂದರವಾದ ಪಾರ್ಕ್ ನಿರ್ಮಿಸಲು ಹೇಳಿದ್ದರು. ಉಳಿದ ಮೂರು ಎಕರೆ ಜಮೀನು ಸ್ಮಶಾನಕ್ಕೆ ಮೀಸಲಿಡಲಾಗಿತ್ತು. ಉಳಿದ ಅರ್ಧ ಎಕರೆ ಇಲ್ಲಿ ಗೋಕುಂಟೆಗೆ ಮೀಸಲಿಡಲಾಗಿತ್ತು. ಆದರೆ ಈಗ ಎಲ್ಲಾ ಏಳುವರೆ ಎಕರೆ ಜಮೀನು ನಗರಸಭೆ ಕಾಂಪೌಂಡ್ ಹಾಕಿ ವಿಲೇವಾರಿ ಘಟಕ ಸ್ಥಾಪಿಸಿದ್ದಾರೆ.
>
> -ಗೋಪಾಲಗೌಡ, ಸ್ಥಳೀಯ ರೈತ ಮುಖಂಡ

### ಸಮಸ್ಯೆ ನಿವಾರಣೆಗೆ ಆಗ್ರಹ

ಕಸ ಹೊತ್ತು ತಂದ ನಗರಸಭೆಯ ಕಸ ಸಂಗ್ರಹ ಮತ್ತು ಸಾಗಾಣಿಕೆ ವಾಹನಗಳನ್ನು ಬಿಡದ ಕಾರಣ ರಸ್ತೆಯುದ್ದಕ್ಕೂ ಕಣ್ಣಿಗೆ ಕಾಣುವಷ್ಟು ದೂರ ಕಸ ತುಂಬಿದ ವಾಹನಗಳು ನಿಂತಿದ್ದವು. ಸ್ಥಳಕ್ಕೆ ಶಾಸಕ ಬಿ.ಎನ್. ರವಿಕುಮಾರ್, ತಹಶೀಲ್ದಾರ್ ಗಗನ ಸಿಂಧು, ನಗರಸಭೆ ಪೌರಾಯುಕ್ತ ಜಿ.ಅಮೃತ ಇನ್ನಿತರೆ ಅಧಿಕಾರಿಗಳ ತಂಡವು ಸ್ಥಳಕ್ಕೆ ಭೇಟಿ ನೀಡಿದರು. ಸ್ಥಳೀಯರು ತಮ್ಮ ಸಮಸ್ಯೆಗಳನ್ನು ಎಳೆ ಎಳೆಯಾಗಿ ಬಿಡಿಸಿಟ್ಟು ಸಮಸ್ಯೆ ನಿವಾರಣೆಗೆ ಆಗ್ರಹಿಸಿದರು.

## ಮಿನಿ ನ್ಯೂಸ್

### ಬಿಜೆಪಿ ಕಚೇರಿಯಲ್ಲಿ ಡಾ.ಬಾಬು ಜಗಜೀವನರಾಂ 119ನೇ ಜಯಂತಿ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಗುಂಡ್ಲುಪೇಟೆ

ಪಟ್ಟಣದ ಬಿಜೆಪಿ ಕಚೇರಿಯಲ್ಲಿ ಹಸಿರು ಕ್ರಾಂತಿ ಹರಿಕಾರ ಮಾಜಿ ಉಪಪ್ರಧಾನಿಗಳಾದ ಡಾ.ಬಾಬುಜಗಜೀವನರಾಂ ಅವರ 119ನೇ ಜಯಂತಿಯನ್ನ ಆಚರಣೆ ಮಾಡಲಾಯಿತು ಜಗಜೀವನರಾಂ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಮಾತನಾಡಿದ ಎಸ್ಸಿ ಮೋರ್ಚಾ ಚಾಮರಾಜನಗರ ಜಿಲ್ಲಾಧ್ಯಕ್ಷ ಡಾ.ನವೀನ್‌ಮೌರ್ಯ ಬಾಬುಜಿ ಅವರು ಸೃಷ್ಟಿಸಿದ ಹಸಿರು ಕ್ರಾಂತಿಯು ದೇಶದ ಜನರನ್ನ ಹಸುವಿನಿಂದ ಹೊರತಂದಿತು, ಸಮಾಜದ ಕಟ್ಟಕಡೆಯ ವ್ಯಕ್ತಿಯ ಜೀವನ ಸುಧಾರಣೆಗೆ ಶ್ರಮಿಸಿದ್ದರ ಪರಿಣಾಮ ಪ್ರಸ್ತುತವಾಗಿ ಆಹಾರ ಪದಾರ್ಥಗಳ ಅಬಾವವಿಲ್ಲದಂತಾಗಿದೆ, ಅಪ್ರತಿಮ ದೇಶಪ್ರೇಮಿಗಳಾಗಿದ್ದ ಬಾಬುಜಗಜೀವನರಾಂ ಅವರು ಉಪಪ್ರಧಾನಿ ಜವಾಬ್ದಾರಿ ಹೊತ್ತಿದ್ದ ವೇಳೆ ಚಾಮರಾಜನಗರಕ್ಕೆ ಭೇಟಿ ನೀಡಿದ್ದರು, ಅಂದು ಮಹಾನ್ ನಾಯಕನನ್ನ ಕಣ್ತುಂಬಿಕೊಂಡವರೆ ಪುಣ್ಯವಂತರು. ಇಂದು ಜಗತ್ತಿನ ವಿವಿಧೆಡೆ ಯುದ್ಧದ ಕಾರ್ಮೋಡ ಕವಿದಿದೆ ಹಾಗೆಯೇ 1970ರ ದಶಕದಲ್ಲಿಯೇ ದೇಶದ ಭದ್ರತೆಗೆ ಬೇಕಾಗಿದ್ದ ಕ್ಷಿಪಣಿಗಳನ್ನ ತಯಾರಿಸುವ ಕಾರ್ಯಕ್ಕೆ ಅಡಿಪಾಯ ಹಾಕಿಕೊಟ್ಟಿದ್ದರು ಎಂದು ಸ್ಮರಿಸಿದರು.ಈ ಸಂಧರ್ಭದಲ್ಲಿ ಮಂಡಲ ಅಧ್ಯಕ್ಷ ಮಹದೇವಪ್ರಸಾದ್, ಬಸವರಾಜು ಅಗತಗೌಡನಹಳ್ಳಿ, ಸಿದ್ದಯ್ಯ, ಹನುಮಂತಶೆಟ್ಟಿ, ಸಿದ್ದೇಶ್, ನಾಗುಸ್ವಾಮಿ, ಸರಸ್ವತಮ್ಮ, ಮಹೇಶ್ ಕಿರಣ್, ಮಹೇಂದ್ರ ಗರಗನಹಳ್ಳಿ, ರಾಜೇಂದ್ರ, ಸ್ವಾಮಿ, ಸಂತೋಷ್ ಹಾಜರಿದ್ದರು.

### ಜೂಜು, ವ್ಯಸನ: ಕಠಿಣ ಕ್ರಮ

• ಉದಯವಾಹಿನಿ, ಶ್ರೀರಂಗಪಟ್ಟಣ

ಜೂಜುಕೋರರು ಮತ್ತು ಮಾದಕ ವಸ್ತು ಸೇವನೆ ಅಥವಾ ಸಾಗಾಟ ಮಾಡುವವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಪಟ್ಟಣ ಪೊಲೀಸ್ ಠಾಣೆ ಸಿಪಿಐ ಬಿ.ಜಿ. ಕುಮಾರ್ ಎಚ್ಚರಿಸಿದರು. ಪ್ರಸಕ್ತ ಸಾಲಿನ ಮುಖ್ಯಮಂತ್ರಿ ಪದಕ ಪಡೆದಿರುವ ಹಿನ್ನೆಲೆಯಲ್ಲಿ ವಿವಿಧ ಸಂಘಟನೆಗಳ ಮುಖಂಡರಿಂದ ಪಟ್ಟಣದಲ್ಲಿ ಅಭಿನಂದನೆ ಸ್ವೀಕರಿಸಿ ಅವರು ಮಾತನಾಡಿದರು.

ಟೌನ್ ಪೊಲೀಸ್ ಠಾಣೆ ವ್ಯಾಪ್ತಿಯ ಯಾವುದೇ ಗ್ರಾಮದಲ್ಲಿ ಜೂಜು ಅಡ್ಡೆಗಳು ನಡೆಯುತ್ತಿದ್ದರೆ ಮಾಹಿತಿ ನೀಡಬೇಕು ಕ್ರಿಕೆಟ್ ಬೆಟ್ಟಿಂಗ್, ಬಾಲ್ಯ ವಿವಾಹ, ಮಾದಕ ವಸ್ತು ಸಾಗಾಟ ಅಥವಾ ಸೇವನೆ ಪ್ರಕರಣಗಳು ಗೊತ್ತಾದರೆ ತಕ್ಷಣ ತಿಳಿಸಬೇಕು. ಮಾಹಿತಿ ನೀಡಿದವರ ಹೆಸರನ್ನು ಗೌಪ್ಯವಾಗಿ ಇಡಲಾಗುತ್ತದೆ. ಯುವ ಜನರು ದುಶ್ಚಟಗಳಿಗೆ ಬಲಿಯಾಗುವುದನ್ನು ತಡೆಯಲು ಪೊಲೀಸ್ ಇಲಾಖೆ ಕೆಲಸ ಮಾಡುತ್ತಿದೆ. ಈ ಕಾರ್ಯಕ್ಕೆ ಸಂಘ, ಸಂಸ್ಥೆಗಳು ಸಹಕಾರ ನೀಡಬೇಕು ಎಂದು ಮನವಿ ಮಾಡಿದರು. ಜೆಡಿಎಸ್ ತಾಲ್ಲೂಕು ಘಟಕದ ಅಧ್ಯಕ್ಷ ಪಾಲಹಳ್ಳಿ ಪೈ. ಮುಕುಂದ ಮಾತನಾಡಿ, ಬಿ.ಜಿ. ಕುಮಾರ್ ಇಲ್ಲಿಗೆ ಬಂದ ನಂತರ ಅಪರಾಧ ಪ್ರಕರಣಗಳು ಕಡಿಮೆಯಾಗಿವೆ. ತಮ್ಮ ಕಾರ್ಯ ದಕ್ಷತೆಗಾಗಿ ಸಿಎಂ ಪದಕ ಮಾತ್ರವಲ್ಲದೆ ಡಿಜಿ ಮತ್ತು ಐಜಿಪಿ ಪದಕವನ್ನೂ ಪಡೆದಿದ್ದು ಇತರರಿಗೆ ಮಾದರಿಯಾಗಿದ್ದಾರೆ ಎಂದರು.

### ನಗರಸಭೆಗೆ ಗ್ರಾಮ ಸೇರಿದರೆ ಹಿತ: ಉದಯ್

• ಉದಯವಾಹಿನಿ, ಮದ್ದೂರು


ನಗರಸಭೆಗೆ ಗೆಜ್ಜಲಗೆರೆ, ಗೊರವನಹಳ್ಳಿ ಸೇರಿದಂತೆ ನಾಲ್ಕು ಗ್ರಾಮ ಪಂಚಾಯಿತಿಗಳ ಕೆಲವು ಗ್ರಾಮಗಳನ್ನು ಸೇರ್ಪಡೆಯಾಗಿರುವುದರಿಂದ ಹೆಚ್ಚಿನ ಸೌಕರ್ಯಗಳು ಸಿಗಲಿದೆ ಎಂದು ಶಾಸಕ ಕೆ.ಎಂ.ಉದಯ್ ತಿಳಿಸಿದರು. ತಾಲ್ಲೂಕಿನ ಗೊರವನಹಳ್ಳಿ ಗ್ರಾಮದಲ್ಲಿ 8.15 ಕೋಟಿ ವೆಚ್ಚದಲ್ಲಿ ಮರಕಾಡುದೊಡ್ಡಿಯಿಂದ ಮದ್ದೂರು ಕ್ರೀಡಾಂಗಣ ಬಳಿಗೆ ಸಂಪರ್ಕ ಕಲ್ಪಿಸುವ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿ ಅವರು ಮಾತನಾಡಿದರು.

ಗ್ರಾಮಗಳ ಅಭಿವೃದ್ಧಿಗೋಸ್ಕರ 4 ಪಂಚಾಯಿತಿಗಳನ್ನು ನಗರಸಭೆಗೆ ಸೇರಿಸಲಾಗಿದೆ. ನನ್ನ ವೈಯಕ್ತಿಕ ಹಿತಾಸಕ್ತಿ ಏನೂ ಇಲ್ಲ. ದಾರಿ ತಪ್ಪಿಸುವಂಥವರ ಮಾತುಗಳಿಗೆ ಕಿವಿಗೊಡಬಾರದು ಎಂದರು. ಗೊರವನಹಳ್ಳಿ ನಗರಸಭೆಗೆ ಸೇರ್ಪಡೆಯಾಗಿರುವುದರಿಂದ ಗ್ರಾಮದ ಹಾಲಿನ ಡೈರಿಯಾಗಲಿ, ರೈತರ ಸೊಸೈಟಿಯಾಗಲಿ ಗ್ರಾಮದಿಂದ ಬೇರೆ ಎಲ್ಲಿಗೂ ಸ್ಥಳಾಂತರವಾಗುವುದಿಲ್ಲ ಎಂದರು.

ಗೊರವನಹಳ್ಳಿಯ ಅಭಿವೃದ್ಧಿ, ನಗರಸಭೆಯಲ್ಲಿ ಗ್ರಾಮಸ್ಥರಿಗೆ ಆಸ್ತಿ ಬಗೆಗಿನ ಇ-ಖಾತಾ ಸೌಕರ್ಯ, ಆಸ್ತಿ ಕಂದಾಯ ಏರಿಕೆ ಆಗದು ಎಂದು ತಿಳಿಸಿದರು. ಮದ್ದೂರು ಕ್ಷೇತ್ರದ ಅಭಿವೃದ್ಧಿಗಾಗಿ ನನ್ನ ಮನವಿಯಂತೆ ಮುಖ್ಯಮಂತ್ರಿ ಹಾಗೂ ಉಪ ಮುಖ್ಯಮಂತ್ರಿ ಎರಡೂವರೆ ವರ್ಷಗಳಲ್ಲಿ 1900 ಕೋಟಿ ಅನುದಾನದಲ್ಲಿ ಅಭಿವೃದ್ಧಿ ಮಾಡಲು ಸಾಧ್ಯವಾಗಿದೆ ಎಂದರು.

ಅಂತರಾಳದಿಂದ..
EDITORIAL


# ಸ್ವಯಂ ಸೇವಾ ಸಂಸ್ಥೆಗಳ ಕಡಿವಾಣಕ್ಕೆ ಹುನ್ನಾರ



ಕೇಂದ್ರದಲ್ಲಿ ಇರುವ ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರ ಸೈದ್ಧಾಂತಿಕ ಹಾಗೂ ರಾಜಕೀಯ ಭಿನ್ನಾಭಿಪ್ರಾಯಗಳನ್ನು ಇಷ್ಟ ಪಡುವುದಿಲ್ಲ ಎಂಬುದು ಕಳೆದ ಹನ್ನೊಂದು ವರ್ಷಗಳಲ್ಲಿ ಅನೇಕ ಬಾರಿ ಸಾಬೀತಾಗಿದೆ. ತನ್ನ ನಿಲುವಿಗೆ ಭಿನ್ನವಾದ ಅಭಿಪ್ರಾಯಗಳನ್ನು ಈ ಸರಕಾರ ಸಹಿಸುವುದಿಲ್ಲ. ಭಾರತದ ಮೇಲೆ ಏಕ ಪಕ್ಷ ಮತ್ತು ಏಕ ಸಿದ್ಧಾಂತದ ಸರ್ವಾಧಿಕಾರ ಹೇರಲು ಈ ಸರಕಾರ ಹೊರಟಿದೆ. ಇದಕ್ಕೆ ಸಂಬಂಧಿಸಿದಂತೆ ಈಗ ಸರಕಾರೇತರ ಸ್ವಯಂ ಸೇವಾ ಸಂಸ್ಥೆ (ಎನ್‌ಜಿಒ) ಗಳನ್ನು ಮತ್ತಷ್ಟು ನಿಯಂತ್ರಿಸಲು ಹೊರಟಿದೆ. ಲೋಕಸಭೆಯಲ್ಲಿ ಇತ್ತೀಚೆಗೆ ಮಂಡನೆಯಾಗಿರುವ 'ವಿದೇಶಿ ದೇಣಿಗೆ (ನಿಯಂತ್ರಣ) ತಿದ್ದುಪಡಿ ವಿಧೇಯಕ 2026' ಸರಕಾರೇತರ ಸ್ವಯಂ ಸೇವಾ ಸಂಸ್ಥೆಗಳನ್ನು ನಿಯಂತ್ರಿಸಲು ಕೇಂದ್ರದ ನರೇಂದ್ರ ಮೋದಿ ನೇತೃತ್ವದ ಸರಕಾರಕ್ಕೆ ಅನುಕೂಲ ಮಾಡಿಕೊಟ್ಟಿದೆ. ಗುಜರಾತಿನಲ್ಲಿ 2002 ರಲ್ಲಿ ನಡೆದ ಹತ್ಯಾಕಾಂಡದಲ್ಲಿ ಎರಡು ಸಾವಿರಕ್ಕೂ ಹೆಚ್ಚು ಅಲ್ಪಸಂಖ್ಯಾತ ಮುಸಲ್ಮಾನರು ಬಲಿಯಾದರು. ಈ ಹತ್ಯಾಕಾಂಡದ ವಿರುದ್ಧ ಜಾತ್ಯತೀತ ಪಕ್ಷಗಳು ಮಾತ್ರವಲ್ಲ ಕೆಲವು ಸ್ವಯಂ ಸೇವಾ ಸಂಸ್ಥೆಗಳು ಧ್ವನಿ ಎತ್ತಿದವು. ಮನೆ ಮಾರು ಕಳೆದುಕೊಂಡು ಬೀದಿಗೆ ಬಿದ್ದ ಸಾವಿರಾರು ಜನರ ಪುನರ್ವಸತಿಗೆ ಮುಂದಾದವು. ಹತ್ಯಾಕಾಂಡದ ಬಗ್ಗೆ ಅಧ್ಯಯನ ಮಾಡಲು ಮಾನವ ಹಕ್ಕು ಹಾಗೂ ನಾಗರಿಕ ಹಕ್ಕುಗಳ ಸಂಸ್ಥೆಗಳನ್ನು ಕಟ್ಟಿಕೊಂಡು ಸಮೀಕ್ಷೆ ನಡೆಸಿದವು. ಆಗ ಗುಜರಾತ್ ಮುಖ್ಯಮಂತ್ರಿಯಾಗಿದ್ದ ನರೇಂದ್ರ ಮೋದಿಯವರಿಗೆ ಇದು ಇಷ್ಟವಾಗಿರಲ್ಲ. ವಿಚಾರಣೆಗೆ ಒತ್ತಾಯಿಸಿದ ಮಾನವ ಹಕ್ಕುಗಳ ಹೋರಾಟಗಾರ್ತಿ ತೀಸ್ತಾ ಸೆಟಲ್ವಾಡ್ ಅವರಿಗೆ ಸಾಕಷ್ಟು ಚಿತ್ರಹಿಂಸೆ ನೀಡಲಾಯಿತು. ಅದರ ಮುಂದುವರಿದ ಭಾಗವಾಗಿ ಈಗ ಸ್ವಯಂ ಸೇವಾ ಸಂಸ್ಥೆಗಳ ರೆಕ್ಕೆ ಪುಕ್ಕಗಳನ್ನು ಕತ್ತರಿಸಲು ಮೋದಿ ಸರಕಾರ ಮಸಲತ್ತು ನಡೆಸಿದೆ. ಕಾನೂನು ಪ್ರಕಾರ ನೋಂದಣಿ ರದ್ದಾಗಿರುವ ಇಲ್ಲವೇ ನಿರ್ಬಂಧಕ್ಕೆ ಒಳಗಾಗಿರುವ ಸರಕಾರೇತರ ಸ್ವಯಂ ಸೇವಾ ಸಂಸ್ಥೆಗಳ ವಿದೇಶಿ ನಿಧಿಗಳು ಹಾಗೂ ಸ್ವತ್ತುಗಳ ನಿರ್ವಹಣೆಯ ಸಲುವಾಗಿ ನಿರ್ದಿಷ್ಟ ಪ್ರಾಧಿಕಾರವನ್ನು ಸ್ಥಾಪಿಸುವ ಉದ್ದೇಶವನ್ನು ಈ ವಿಧೇಯಕ ಹೊಂದಿದೆ. 2010ರ ಮೂಲ ಶಾಸನದಲ್ಲಿ ಇರುವ ಲೋಪ ದೋಷಗಳನ್ನು ಸರಿಪಡಿಸುವ ಉದ್ದೇಶದಿಂದ ಈ ವಿಧೇಯಕ ತರಲಾಗಿದೆ ಎಂದು ಸರಕಾರ ಹೇಳಿದೆ. ವಿದೇಶದಿಂದ ಸ್ವೀಕರಿಸುವ ದೇಣಿಗೆಗಳ ಮೇಲ್ವಿಚಾರಣೆ ಮತ್ತು ನಿರ್ವಹಣೆಗೆ ಸಮಗ್ರ ಚೌಕಟ್ಟನ್ನು ರೂಪಿಸುವುದು ಈ ವಿಧೇಯಕದ ಉದ್ದೇಶವಾಗಿದೆ ಎಂದು ಗೃಹ ಖಾತೆ ರಾಜ್ಯ ಸಚಿವ ನಿತ್ಯಾನಂದ ರಾಯ್ ಹೇಳಿದ್ದಾರೆ. ಮಾನವ ಹಕ್ಕುಗಳ ಬಗ್ಗೆ ಬಾಯಿ ಬಿಡದಂತೆ, ಪ್ರಭುತ್ವವನ್ನು ಪ್ರಶ್ನಿಸದಂತೆ ಸ್ವಯಂ ಸೇವಾ ಸಂಸ್ಥೆಗಳನ್ನು ಕಟ್ಟಿ ಹಾಕುವ ಉದ್ದೇಶವನ್ನು ಸರಕಾರ ಹೊಂದಿದೆ ಎಂಬುದು ಗುಟ್ಟಿನ ಸಂಗತಿಯಲ್ಲ. ಈ ತಿದ್ದುಪಡಿಯಿಂದ ಸರಕಾರಕ್ಕೆ ಇನ್ನಷ್ಟು ಬಲ ಬಂದಂತಾಗಿದೆ. ರದ್ದುಗೊಳಿಸಲ್ಪಟ್ಟಿರುವ ಅಥವಾ ಅಮಾನತ್ತಿನಲ್ಲಿ ಇಡಲ್ಪಟ್ಟಿರುವ ಸ್ವಯಂ ಸೇವಾ ಸಂಸ್ಥೆಗಳಿಗೆ ಸೇರಿದ ವಿದೇಶಿ ದೇಣಿಗೆಯಿಂದ ನಿರ್ಮಿಸಿರುವ ಆಸ್ತಿಗಳನ್ನು ವಶಕ್ಕೆ ಪಡೆಯಲು ಸರಕಾರಕ್ಕೆ ಅವಕಾಶ ಮಾಡಿಕೊಡುವ ವಿವಾದಾಸ್ಪದ ಅಂಶ ಈ ವಿಧೇಯಕದಲ್ಲಿದೆ. ಇಂಥ ಆಸ್ತಿಗಳನ್ನು ಸಾರ್ವಜನಿಕ ಉದ್ದೇಶಗಳಿಗಾಗಿ ಬಳಸಿಕೊಳ್ಳುವ ಹಾಗೂ ನಿರ್ವಹಿಸುವ ಮತ್ತು ವರ್ಗಾವಣೆ ಮಾಡುವ ಇಲ್ಲವೇ ವಿಲೇವಾರಿ ಮಾಡುವ ಅಧಿಕಾರ ಸಂಬಂಧಿಸಿದ ಪ್ರಾಧಿಕಾರಕ್ಕೆ ದೊರೆಯುತ್ತದೆ. ಸರಕಾರದ ಪರವಾನಿಗೆ ಇಲ್ಲದೆ ವಿದೇಶಿ ನಿಧಿಯಿಂದ ನಿರ್ಮಿಸಲಾದ ಆಸ್ತಿಪಾಸ್ತಿ ವರ್ಗಾವಣೆಗೆ ನಿರ್ಬಂಧ ಹೇರಲಾಗಿದೆ. ಈ ವಿಧೇಯಕದಿಂದ ಸರಕಾರೇತರ ಸ್ವಯಂ ಸೇವಾ ಸಂಸ್ಥೆಗಳ ಸ್ವಾಯತ್ತ ಕಾರ್ಯಾಚರಣೆ ಮೇಲೆ ದುಷ್ಪರಿಣಾಮ ಬೀರಲಿದೆ. ರಾಜ್ಯ ಸರಕಾರಗಳು ವಿದೇಶಿ ದೇಣಿಗೆ ನಿಯಂತ್ರಣ ಕಾಯ್ದೆಗೆ ಯಾವುದೇ ವಿಚಾರಣೆಯನ್ನು ಆರಂಭಿಸುವ ಮೊದಲು ಕೇಂದ್ರ ಸರಕಾರದ ಪರವಾನಿಗೆಯನ್ನು ಪಡೆಯಬೇಕಾಗುತ್ತದೆ. ಈ ನಿಯಮವು ರಾಜ್ಯಗಳ ಸ್ವಾಯತ್ತ ಅಧಿಕಾರವನ್ನು ಮೊಟಕುಗೊಳಿಸಿದಂತಾಗುತ್ತದೆ. ಇದು ಒಕ್ಕೂಟ ತತ್ವಕ್ಕೆ ಅಪಚಾರ ಮಾಡಿದಂತಾಗಿದೆ.

ಸ್ವಯಂ ಸೇವಾ ಸಂಸ್ಥೆಗಳ ಚಟುವಟಿಕೆಗಳಿಗೆ ಕಡಿವಾಣ ಹಾಕುವ ಉದ್ದೇಶದಿಂದ ತಂದ ಈ ತಿದ್ದುಪಡಿ ನಿರ್ದಿಷ್ಟ ಪ್ರಾಧಿಕಾರಕ್ಕೆ ವಿಶೇಷ ಅಧಿಕಾರವನ್ನು ನೀಡುವ ಅಂಶ ವಿವಾದಾಸ್ಪದವಾಗಿದೆ. ಇದು ತನಗಿರುವ ಪರಮಾಧಿಕಾರದಿಂದ ಯಾವುದೇ ಸ್ವಯಂ ಸೇವಾ ಸಂಸ್ಥೆಯನ್ನು ಮುಗಿಸುವುದಕ್ಕೂ ಅವಕಾಶ ಮಾಡಿಕೊಡುತ್ತದೆ. ಈ ವಿಧೇಯಕ ಸರಕಾರದ ಅನುಕೂಲಕ್ಕೆ ಪೂರಕವಾಗಿ, ನಿಯಮಗಳನ್ನು ಪಾಲಿಸಲು ಒತ್ತಡ ಹೇರುವಂತಿದೆ. ಇದನ್ನು ಬಳಸಿಕೊಂಡು ಸರಕಾರ ತನ್ನ ನಿಲುವಿಗೆ ವಿರುದ್ಧವಾದ ಸ್ವಯಂ ಸೇವಾ ಸಂಸ್ಥೆಗಳಿಗೆ ತೊಂದರೆ ಕೊಡಬಹುದು. ಕಳೆದ ಹನ್ನೊಂದು ವರ್ಷಗಳಿಂದ ಮಾನವ ಹಕ್ಕುಗಳ ಸಂಘ, ಸಂಸ್ಥೆಗಳು ಸಾಕಷ್ಟು ತೊಂದರೆ ಅನುಭವಿಸುತ್ತ ಬಂದಿವೆ. ಅಂತಲೇ ವಿದೇಶಿ ದೇಣಿಗೆ ವಿಧೇಯಕವನ್ನು 'ಅಪಾಯಕಾರಿ' ಎಂದು ಪ್ರತಿಪಕ್ಷಗಳು ಟೀಕಿಸಿರುವುದು ನ್ಯಾಯ ಸಮ್ಮತವಾಗಿದೆ. ಇದರ ಪರಿಣಾಮವಾಗಿ ಉಳಿದ ಸ್ವಯಂ ಸೇವಾ ಸಂಸ್ಥೆಗಳು ಒಂದೊಂದಾಗಿ ಕಣ್ಣು ಮುಚ್ಚುವಂತೆ ಮಾಡಿ ವಿದೇಶದಿಂದ ಅತ್ಯಂತ ಹೆಚ್ಚು ದೇಣಿಗೆ ಪಡೆಯುವ ರಾಷ್ಟ್ರೀಯ ಸ್ವಯಂ ಸೇವಕ ಸಂಘ (ಆರೆಸ್ಸೆಸ್‌ಕ್ಕೆ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳುವುದು ಸರಕಾರದ ಮಸಲತ್ತಾಗಿದೆ. 2010ರ ಕಾಯ್ದೆಯನ್ನು 2016, 2018 ಹಾಗೂ 2020ರಲ್ಲಿ ತಂದ ತಿದ್ದುಪಡಿಗಳು ಕೂಡ ಕಠಿಣಗೊಳಿಸುತ್ತಲೇ ಬಂದವು. ಲೋಕಸಭೆಯಲ್ಲಿ ಮಂಡಿಸಲಾಗಿರುವ ಪ್ರಸಕ್ತ ವಿಧೇಯಕವು ಕಾಯ್ದೆಯನ್ನು ಮತ್ತಷ್ಟು ಕಠಿಣಗೊಳಿಸಿದೆ. ಸಂಬಂಧಿಸಿದ ಸಂಸ್ಥೆಯ ಆಸ್ತಿಯನ್ನು ಜಪ್ತಿ ಮಾಡುವುದೆಂದರೆ ಅದರ ಅರ್ಥವೇನು? ಇಂಥ ಸ್ವಯಂ ಸೇವಾ ಸಂಸ್ಥೆಗಳನ್ನು ಶಾಶ್ವತವಾಗಿ ಹೊಸಕಿ ಹಾಕುವುದಲ್ಲದೇ ಬೇರೇನೂ ಅಲ್ಲ. ಸರಕಾರಕ್ಕೆ ಇಷ್ಟವಿಲ್ಲದ ಕ್ಷೇತ್ರಗಳಲ್ಲಿ ಕಾರ್ಯ ನಿರ್ವಹಿಸುವ ಸಂಸ್ಥೆಗಳನ್ನು ಸುರಕ್ಷಿತವಾಗಿ ಇರಲು ಸರಕಾರ ಬಿಡುವುದಿಲ್ಲ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ.

# ರಾಮಾಯಣ



## ಸಂಪಾತಿಗೆ ಗರಿಗಳು ತಿರುಗಿ ಹುಟ್ಟಿದ್ದು

• ಹಿಂದಿನ ಸಂಚಿಕೆಯಿಂದ 121ನೆಯ ಅಧ್ಯಾಯ

ಅವರೊಡನೆ ಸೀತಾದೇವಿಯನ್ನು ರಾವಣನು ಹಿಡಿದುಕೊಂಡು ಹೋದ ವೃತ್ತಾಂತವನ್ನು ನೀನು ಹೇಳುವೆ. ಅದರಿಂದ ನೀನು ಮೊದಲಿನಂತೆಯೇ ದೃಷ್ಟಿ ಸಾಮರ್ಥ್ಯವನ್ನೂ ಬಲವನ್ನೂ ಪಡೆಯುವೆ. ನೀನು ಶ್ರೀರಾಮನು ಅವತರಿಸುವವರೆಗೆ ಕಾದಿದ್ದರೆ ನಿನ್ನ ಗರಿಗಳು ಮೊದಲಿನಂತೆಯೇ ಹುಟ್ಟುವುವು. ನೀನು ಈ ಸ್ಥಳದಲ್ಲಿಯೇ ಇದ್ದರೆ ಶ್ರೀರಾಮಲಕ್ಷ್ಮಣರ ಕಾರ್ಯವನ್ನೂ ಸಮಸ್ತ ಬ್ರಾಹ್ಮಣರ ಮತ್ತು ಇಂದ್ರಾದಿ ದೇವತೆಗಳ ಕಾರ್ಯವನ್ನೂ ನೆರವೇರಿಸಿಕೊಟ್ಟಂತಾಗುವುದು. ನಾನು ರಾಮಲಕ್ಷ್ಮಣರನ್ನು ನೋಡಬೇಕೆಂದು ಮನಸ್ಸಿನಲ್ಲಿ ಬಯಸಿಕೊಂಡಿದ್ದೇನೆ. ಆದರೆ ನಾನು ಬಹುಕಾಲ ಪ್ರಾಣಗಳನ್ನು ಧರಿಸಿಕೊಂಡು ನಿಲ್ಲಲಾರೆನು. ನಾನು ಸ್ವಲ್ಪ ಕಾಲದಲ್ಲೇ ಶರೀರವನ್ನು ಬಿಡುವೆನು' ಎಂದು ಅನೇಕ ಪ್ರಿಯವಚನಗಳಿಂದ ನನ್ನನ್ನು ಸಂತವಿಟ್ಟು ತನ್ನ ಆಶ್ರಮಕ್ಕೆ ಹೋದನು.

### ಸಂಪಾತಿಗೆ ಗರಿಗಳು ಹುಟ್ಟಿದ್ದು

ಸಂಪಾತಿಯು ಮತ್ತೆ ಹೇಳಿದನು ಆ ಬಳಿಕ ನಾನು ಆಕೋಡುಗಲ್ಲಿನಿಂದ ಮೆಲ್ಲಮೆಲ್ಲಗೆ ವಿಂಧ ಪರ್ವತವನ್ನು ಹತ್ತಿ ನಿಶಾಕರಮುನಿಯ ಮಾತನ್ನು ನೆನೆದು ನಿಮ್ಮ ಬರವನ್ನು ಕಾದುಕೊಂಡಿದ್ದೆನು. ಆ ಕಾಲದಿಂದ ಇಂದಿಗೆ ನೂರು ವರುಷಗಳು ಸಂಪೂರ್ಣವಾದವು. ಈ ಪ್ರಕಾರ ನಿಶಾಕರ ಮುನಿಯು ಹೇಳಿ ಮಹಾಪ್ರಸ್ಥಾನವನ್ನು ಹೊಂದಿದ ಮೇಲೆ ನಾನು ಬಹುಕಾಲದಿಂದ ನಿಮ್ಮನ್ನು ಎದುರುನೋಡಿಕೊಂಡು ದುಃಖಿಸುತ್ತಿರುವೆನು. ನನಗೆ ಮರಣಹೊಂದಬೇಕೆಂದು ಬುದ್ಧಿ ಹುಟ್ಟಿದರೂ ನಿಶಾಕರಮುನಿಯ ವಾಕ್ಯಗಳನ್ನೇ ಮನಸ್ಸಿನಲ್ಲಿರಿಸಿಕೊಂಡು ನನ್ನ ಪ್ರಾಣಗಳನ್ನು ರಕ್ಷಿಸಿಕೊಂಡಿರುವನು. ಯಜ್ಞಪುರುಷನ ಪ್ರಭೆಯು ಅಂಧಕಾರವನ್ನು ತೊಲಗಿಸುವಂತೆ ಆ ಮುನಿಯು ಹೇಳಿದ ಬುದ್ಧಿಯು ನನ್ನ ದುಃಖಾಂಧಕಾರವನ್ನು ತೊಲಗಿಸಿರುವುದು. ನಾನು ರಾವಣನ ಪರಾಕ್ರಮವನ್ನು ಬಲ್ಲವನಾದ್ದರಿಂದ ಸೀತಾದೇವಿಯನ್ನು ಎತ್ತಿಕೊಂಡು ಹೋಗುತ್ತಿದ್ದ ರಾವಣನನ್ನು ಕಂಡು ಬಂದ ನನ್ನ ಮಗನಾದ ಸುಪಾರ್ಶ್ವನನ್ನು ಕುರಿತು ಸೀತಾದೇವಿಯನ್ನು ಉಪೇಕ್ಷೆಮಾಡಿ ರಾವಣನನ್ನು ಬಿಟ್ಟು ಬಂದದ್ದಕ್ಕಾಗಿ ಬಹಳವಾಗಿ ಕೋಪಿಸಿಕೊಂಡೆನು. ರಾಮಲಕ್ಷ್ಮಣರು ಸೀತಾ ದೇವಿಯ ವಿಯೋಗದಿಂದ ದುಃಖಾಕ್ರಾಂತರಾಗಿರುವರು. ನನಗೆ ದಶರಥರಾಜನ ಸ್ನೇಹದಿಂದ, ನನ್ನ ಮಗನು ಒಳ್ಳೆಯದನ್ನು ಮಾಡದೆ ಹೋದನಲ್ಲ ಎಂದು ದುಃಖವಾಗಿದೆ ಎಂದು ಸಂಪಾತಿಯು ನುಡಿದನು.

ಆ ಸಮಯದಲ್ಲಿ ಅಂಗದಾದಿ ಕಪಿನಾಯಕರು ನೋಡುತ್ತಿರಲು ಸಂಪಾತಿಗೆ ಗರಿಗಳು ಹುಟ್ಟಿದವು. ಆತನು ಕೆಂಪಾದ ಗರಿಗಳಿಂದ ಮನೋಹರವಾದ ತನ್ನ ಶರೀರವನ್ನು ನೋಡಿ ಅತ್ಯಂತ ಸಂತೋಷಪಟ್ಟು ಆ ಕಪಿನಾಯಕರನ್ನು ಕುರಿತು '' ಎಲೈ ಕಪಿನಾಯಕರೆ, ಮಹಾತ್ಮನಾದ ನಿಶಾಕರಮುನಿಯ ಪ್ರಭಾವದಿಂದ ನನಗೆ ಸೂರ್ಯಕಿರಣಜ್ವಾಲೆಯಿಂದ ಸೀದುಹೋದ ಗರಿಗಳು ತಿರುಗಿ ಹುಟ್ಟಿದವು. ನನಗೆ ಯೌವನಾವಸ್ಥೆಯಲ್ಲಿ ಎಂಥ ಪರಾಕ್ರಮವಿತ್ತೋ ಅಂಥ ಪರಾಕ್ರಮವುಂಟಾಗಿ ನನ್ನ ಶರೀರವು ಮೊದಲಿನಂತೆ ತೇಜಸ್ಸುಳ್ಳದ್ದಾಗಿದೆ. ನಿಶಾಕರಮುನಿಯು ಹೇಳಿದ ಮಾತುಗಳ ಪ್ರಕಾರ ಕೆಲವು ಕಾರ್ಯಗಳು ಸಿದ್ಧಿಸಿರುವುದರಿಂದ ಮಿಕ್ಕ ಕಾರ್ಯಗಳೂ ಸಿದ್ಧಿಸದಿರವು. ಆದ್ದರಿಂದ ನೀವು ಸೀತಾದೇವಿಯನ್ನು ಹುಡುಕುವುದಕ್ಕೆ ತಕ್ಕ ಪ್ರಯತ್ನವನ್ನು ಅವಶ್ಯವಾಗಿ ಮಾಡಿರಿ. ನನಗೆ ಈಗ ಗರಿಹುಟ್ಟಿಬಂದಿದೆ. ಇದು ಮುಂದೆ ನಿಮ್ಮ ಕಾರ್ಯವು ನೆರವೇರುವುದಕ್ಕೆ ಒಳ್ಳೆಯ ಶಕುನ ಎಂದು ನುಡಿದು ಮುಂದೆ ಪರಗತಿಯನ್ನು ಸಂಧಿಸಿಕೊಳ್ಳಬೇಕೆಂಬ ಬುದ್ಧಿಯಿಂದ ವಿಂಧ್ಯಪರ್ವತದ ಕೋಡುಗಲ್ಲಿನಿಂದ ಖೇಚರಮಾರ್ಗವಾಗಿ ಹೋದನು.

ಮುಂದುವರಿಯುವುದು...



ನಾ ಕಂಡಂತೆ
ವಿಶ್ವಾಸ್.ಡಿ.ಗೌಡ
ಲೇಖಕರು
ಸಾಮಾಜಿಕ ಚಿಂತಕರು

# ಸವಿ ಸವಿ ನೆನಪು

ಆಗಿನ ಕಾಲದಲ್ಲಿ ಹಂಚಿನ ಬಾಡಿಗೆ ಮನೆಗಳು.ಸ್ವಂತ ಮನೆ ಇದ್ದವರು ಅನುಕೂಲಸ್ಥರು. ವಾರಕ್ಕೆ ಎರಡು ಬಾರಿ ಬರುವ ನೀರನ್ನು ಮನೆಯವರೆಲ್ಲಾ ಸೇರಿ ಹಿಡಿದಿಟ್ಟು ಶೇಖರಿಸಿ ಉಪಯೋಗಿಸಬೇಕು. ಖಾಲಿಯಾದರೆ ರಸ್ತೆ ಕೊನೆಯಲ್ಲಿ ಇದ್ದ ಕೈ ಬೋರ್‌ವೆಲ್ ನಿಂದ ನೀರನ್ನು ಹೊತ್ತು ತರಬೇಕು. ನೀರು ಕಾಯಿಸಲು ಸೌದೆ ಒಲೆ.ಆ ಸೌದೆಯನ್ನೂ ಆರು ತಿಂಗಳಿಗಾಗುವಷ್ಟು ಒಡೆಸಿ ಶೇಖರಿಸಿ ಇಟ್ಟು ಬಳಸಬೇಕು. ಮನೆಯಲ್ಲಿ ಸೈಕಲ್ ಇದ್ದವರು ಅನುಕೂಲಸ್ಥರು. ಸ್ಕೂಟರ್ ಇದ್ದವರು ಶ್ರೀಮಂತರು.

ಘಂಟೆಗೆ ಇಷ್ಟು ಆಣೆ ಎನ್ನುವ ಲೆಕ್ಕಾಚಾರದಲ್ಲಿ ಸೈಕಲ್ ಶಾಪ್ ನಿಂದ ಬಾಡಿಗೆ ಸೈಕಲ್ ತಂದು ಅದರಲ್ಲೇ ಸೈಕಲ್ ಓಡಿಸುವುದನ್ನು ಕಲಿತುಬಿಟ್ಟರೆ ದೊಡ್ಡ ಸಾಹಸ ಮಾಡಿದಂತೆ. ಆಮೇಲೆ ಅಪ್ಪ ಅಮ್ಮನನ್ನು ಪೀಡಿಸಿ ನಾಲ್ಕಾಣೆ, ಎಂಟಾಣೆ ಪಡೆದು ಸೈಕಲ್ ಶಾಪ್ ಸೈಕಲ್ ಓಡಿಸುತ್ತಿದ್ದರೆ BMW ಕಾರ್ ಓಡಿಸಿದಷ್ಟು ಖುಷಿ. ಬೀದಿಯಲ್ಲಿ ಒಬ್ಬರ ಮನೆಗೆ ಟಿವಿ ತಂದರೆ ಊರಿಗೆಲ್ಲಾ ಅದೇ ಸುದ್ದಿ. ಅದರಲ್ಲಿ ಬರುತ್ತಿದ್ದ ರಾಮಾಯಣ, ಮಹಾಭಾರತ ನೋಡಲು ಬೀದಿಯ ಪರಿಚಿತರು, ಹುಡುಗರೆಲ್ಲಾ ಬಂದು ಕೂರುವುದು. ಸಿಗ್ನಲ್ ಹೋದಾಗ ಮೇಲೊಬ್ಬರು ಟಿವಿ ಆಂಟೆನಾ ತಿರುಗಿಸುತ್ತಿದ್ದರೆ, ಒಳಗಿನಿಂದ ಸಾಕು ಸಾಕು ಬಂತು ಅನ್ನೋ ಸಡಗರ.

ಇರುವ ಸರ್ಕಾರಿ ಶಾಲೆಯಲ್ಲೇ ವಿದ್ಯಾಭ್ಯಾಸ. ವರ್ಷಕ್ಕೊಮ್ಮೆ ಶಾಲೆಯಲ್ಲೇ ಕೊಡುತ್ತಿದ್ದ ಯುನಿಫಾರಂ.ಪಾಸ್ ಆದವರ ಪುಸ್ತಕ ನಮಗೆ ನಮ್ಮ ಪುಸ್ತಕ ನಮ್ಮ ಜ್ಯೂನಿಯರ್ಸ್‌ಗಳಿಗೆ ಶಾಲೆ ಬಿಟ್ಟರೆ ರಸ್ತೆಯಲ್ಲೇ ಗೋಲಿ, ಬುಗುರಿ, ಕಣ್ಣಾಮುಚ್ಚಾಲೆ ಗಿಲ್ಲಿ-ದಾಂಡು ಮುಂತಾದ ಆಟ. ಬೇಸಿಗೆ ರಜೆ ಬಂತೆಂದರೆ ಅಜ್ಜಿಯ ಮನೆ. ಮನೆಯಲ್ಲಿ ಎಲ್ಲರೂ ಒಟ್ಟಾಗಿ ಕುಳಿತು ಸೇವಿಸುವ ಆಹಾರ. ಹಬ್ಬಕ್ಕೆ ತಾಯಿ ಹಾಕುತ್ತಿದ್ದ ಎಣ್ಣೆ ನೀರು, ತಂದೆ ಕೊಡಿಸುತ್ತಿದ್ದ ಹೊಸ ಬಟ್ಟೆ, ಪಟಾಕಿಯ ಖುಷಿ. ಪಟಾಕಿಯನ್ನು ಬಿಸಿಲಿಗಿಟ್ಟು ಒಣಗಿಸಿಯೇ ಹೊಡೆಯಬೇಕು. ಹೋಳಿಗೆ ತಿನ್ನಲು ಹಬ್ಬವೇ ಬರಬೇಕು.

ಪಾಯಸ ತಿನ್ನಲು ಮನೆಗೆ ಯಾರಾದರೂ ಬಂಧು-ಮಿತ್ರರು ಬರಬೇಕು. ಗಣಪತಿ ತಂದರೆ ಅದನ್ನು ಬಿಡೋಕ್ಕೆ ಮನಸಿರಲಿಲ್ಲ. ಅಪರೂಪಕ್ಕೆ ಅಪ್ಪ ಅಮ್ಮ ಕರೆದುಕೊಂಡು ಹೋಗುತ್ತಿದ್ದದ್ದು ಡಾ:ರಾಜ್ ಚಿತ್ರಗಳು. ಟಿವಿಯಲ್ಲಿ ಬರುವ ಸಾಪ್ತಾಹಿಕ ಕಾರ್ಯಕ್ರಮಕ್ಕೆ ವಾರವಿಡೀ ಕಾಯುವಿಕೆ!. ಲ್ಯಾಂಡ್ ಫೋನ್ ಇದ್ದವರು ಅಕ್ಕ ಪಕ್ಕದವರಿಗೆ ಕರೆ ಬಂದರೆ ಕೂಗಿ ಕರೆಯುವುದು. ಅಪರೂಪಕ್ಕೆ ಯಾರಿಗಾದರೂ ಕರೆ ಮಾಡಬೇಕಾದರೆ ಟೆಲಿಫೋನ್ ಎಕ್ಸ್ ಚೇಂಜ್ ಗೆ ಕರೆ ಮಾಡಿ ಬುಕ್ ಮಾಡಬೇಕು.




ಬಡವ-ಶ್ರೀಮಂತ ಎನ್ನುವುದಿಲ್ಲದೇ ಎಲ್ಲರೂ ಕೆಎಸ್‌ಆರ್ ಟಿಸಿ ಕೆಂಪು ಬಸ್ಸಲ್ಲೇ ಖುಷಿಯಾಗಿ ಪ್ರಯಾಣ. ವರ್ಷಕ್ಕೊಮ್ಮೆ ಊರು ಜಾತ್ರೆಯ ಸಂಭ್ರಮ. ಜೋರು ಮಳೆಯಲ್ಲೂ ಆಲಿಕಲ್ಲು ಆರಿಸುವ ತವಕ,ಮಳೆ ನೀರನ್ನು ಬಕೇಟಿನಲ್ಲಿ ಹಿಡಿದು ತೊಟ್ಟಿ ತುಂಬಿಸುವ ಆಟ. ಬಂಧು-ಮಿತ್ರರ ಮನೆಯ ಸುಖ-ದುಃಖದ ಸಂಧರ್ಭದಲ್ಲಿ ಮನೆಯ ಎಲ್ಲರೂ ಹೋಗಿ ಭಾಗಿಯಾಗುವುದು. ವಾರಗಟ್ಟಲೆ ಅಲ್ಲೇ ಕ್ಯಾಂಪ್. ಇಂದು ನಮ್ಮೊಂದಿಗೆ ಇರುವ ಸಾಧನಗಳು ಅಂದಿನ ದಿನದಲ್ಲಿ ಇಲ್ಲದಿದ್ದರೂ ಅದೇ ಸ್ವರ್ಗ.

ಇಂದು ಅಂಗೈಯ್ಯಲ್ಲೇ ಜಗತ್ತು ಇದೆ. ದುಡ್ಡು ಇದೆ.ಮನೆಗೊಂದು ಕಾರ್ ಇದೆ. ನಲ್ಲಿ ತಿರುಗಿಸಿದರೆ ಬಿಸಿ-ಅಥವಾ ತಣ್ಣೀರು ಬರುತ್ತದೆ. ಕ್ಷಣ ಮಾತ್ರದಲ್ಲಿ ಎಲ್ಲಿಗೆ ಬೇಕಾದರೂ ತಲುಪುವಷ್ಟು ಸುಖವಾದ ಸಾಧನಗಳಿವೆ. ಭೂತ-ವರ್ತಮಾನ-ಭವಿಷ್ಯವನ್ನು ಭಗವಂತನಿಗಿಂತ ಚೆನ್ನಾಗಿ ಬಲ್ಲ ಮತ್ತು ಅದನ್ನು ವಿವರಿಸುವ ನ್ಯೂಸ್ ಚಾನೆಲ್ ಗಳಿವೆ. ಸೆಖೆ ಆದರೆ ಎಸಿ ಇದೆ. ಛಳಿ ಆದರೆ ಹೀಟರ್ ಇದೆ. ರಸ್ತೆಗೊಂದು ಕಾನ್ವೆಂಟ್,ಇದೆ ಹೋಟೆಲ್.... ಆಸ್ಪತ್ರೆ ಎಲ್ಲವೂ ಇದೆ. ಮನೆಯಲ್ಲೇ ಕುಳಿತು ಆರ್ಡರ್ ಮಾಡಿದರೆ ಮೊಬೈಲ್ ಕೆಳಗೆ ಇಡುವಷ್ಟರಲ್ಲಿ ಪಾರ್ಸೆಲ್ ಮನೆ ಬಾಗಿಲಿಗೆ ಬರುತ್ತದೆ. ಆದರೂ ಒಂದು ಮಾತ್ರ ON LINE ಸೇರಿದಂತೆ ಎಲ್ಲೇ ಹುಡುಕಿದರೂ ಸಿಗ್ತಾ ಇಲ್ಲ!.. ಆಗಿನ ಕಾಲದಲ್ಲಿ ಸಿಗುತ್ತಿದ್ದ ಸಂಬಂಧ,ಸ್ನೇಹ, ಪ್ರೀತಿ-ವಿಶ್ವಾಸ, ಸಂತೋಷ-ಸುಖ, ನೆಮ್ಮದಿ.!!!

## ನೋಡಿ ಇಂತಹ ಅಭ್ಯಾಸಗಳಿಂದಾಗಿಯೇ ಗಂಡಹೆಂಡತಿ ನಡುವಿನ ಮಾತುಕತೆ ಕಡಿಮೆ ಆಗುವುದು

ಜೀವನದಲ್ಲಿ ಒಂದು ಬಾರಿ ಸಂಬಂಧ ಎನ್ನುವ ಬಂಧನಕ್ಕೆ ಒಳಪಟ್ಟಾಗ, ನಮ್ಮ ಜೀವನದ ಶೈಲಿ ಮತ್ತು ಅಭ್ಯಾಸಗಳಲ್ಲಿ ಬದಲಾವಣೆಗಳನ್ನು ಮಾಡಿಕೊಳ್ಳುವುದು ಅವಶ್ಯಕ ಹಾಗೂ ಅನಿವಾರ್ಯ ಯಾಕೆಂದ್ರೆ, ಮದುವೆಯ ಬಂಧಕ್ಕೆ ಒಳಪಟ್ಟಾಗ ಕೆಲವೊಂದು ಬದಲಾವಣೆಗಳನ್ನು ನಾವು ಮಾಡಿಕೊಳ್ಳಲೇಬೇಕು. ಮದುವೆಗೆ ಮುನ್ನ ಹೇಗೋ ಇದ್ದ ನಾವು ಮದುವೆಯ ನಂತರ ನಂತರದ ಜೀವನದಲ್ಲಿ ದಂಪತಿಗಳ ಅಥವಾ ಗಂಡ ಹೆಂಡತಿಯ ನಡುವೆ ಸಾಕಷ್ಟು ಬದಲಾವಣೆಗಳು ಕಂಡುಬರುತ್ತವೆ. ಅದರಲ್ಲೂ ಈ ಸಂದರ್ಭದಲ್ಲಿ ನಾವು ಅನುಸರಿಸಿ ಕೊಳ್ಳುವ ಸಕರಾತ್ಮಕ ಬದಲಾವಣೆಗಳು ಸಂಬಂಧವನ್ನು ಬಲಪಡಿಸಲು ಮತ್ತು ಸಾಮರಸ್ಯವನ್ನು ಕಾಪಾಡಿಕೊಳ್ಳಲು ಸದಾ ನೆರವಿಗೆ ಬರುತ್ತದೆ.

**ಸಂಬಂಧ ಎನ್ನುವ ಬಂಧನಕ್ಕೆ ಒಳಪಟ್ಟಾಗ:** ಮೊದಲೇ ಹೇಳಿದ ಹಾಗೆ, ಸಂಬಂಧ ಎನ್ನುವ ಬಂಧನಕ್ಕೆ ಒಳಪಟ್ಟಾಗ ಸಂಗಾತಿಯೊಂದಿಗೆ ಹೊಂದಾಣಿಕೆ ಮಾಡಿಕೊಳ್ಳಲು ತಮ್ಮ ಜೀವನ ಶೈಲಿಯಲ್ಲಿ ಅಥವಾ ಹವ್ಯಾಸಗಳಲ್ಲಿ ಬದಲಾಯಿಸಿಕೊಳ್ಳುವುದು ಅನಿವಾರ್ಯ. ಅದರಲ್ಲೂ ಮದುವೆಗೂ ಮುನ್ನ ತಮ್ಮದೇ ಆದ ವಿಶಿಷ್ಟ ಹವ್ಯಾಸ, ಯಾವುದೋ ಆನೆ ನಡೆದ್ದೇ ದಾರಿ ಎನ್ನುವ ಹಾಗಿದ್ದವರು, ಮದುವೆಯ ಬಳಿಕ ಸಂಗಾತಿಯೊಂದಿಗೆ ಪರಸ್ಪರ ಗೌರವ, ಪ್ರೀತಿ, ಹೊಂದಾಣಿಕೆ ಮಾಡಿಕೊಂಡು ಜೀವನ ನಡೆಸಬೇಕು.

**ಭಾವನೆಗಳನ್ನು ಅರ್ಥಮಾಡಿಕೊಳ್ಳದಿರುವುದು:** ನಿಮ್ಮ ಸಂಬಂಧವು ದೀರ್ಘಕಾಲ, ಸಮಸ್ಯೆಗಳಿಲ್ಲದೆ ಇರಬೇಕೆಂದು ನೀವು ಬಯಸಿದರೆ, ನಿಮ್ಮ ಸಂಗಾತಿಯ ಭಾವನೆಗಳನ್ನು ನೀವು ಎಂದಿಗೂ ನಿರ್ಲಕ್ಷಿಸ ಬಾರದು. ದೀರ್ಘಕಾಲದವರೆಗೆ ಭಾವನೆಗಳನ್ನು ನಿರ್ಲಕ್ಷಿಸುವುದರಿಂದ ಉದ್ವಿಗ್ನತೆ ಉಂಟಾಗಬಹುದು, ಸಂಬಂಧವು ಮುರಿದು ಹೋಗುವ ಅಪಾಯವನ್ನು ಹೆಚ್ಚಿಸಬಹುದು. ನಿಮ್ಮ ಸಂಗಾತಿ ತಮ್ಮ ಭಾವನೆಗಳನ್ನು ನಿಮ್ಮೊಂದಿಗೆ ಹಂಚಿಕೊಳ್ಳುತ್ತಿದ್ದರೆ, ಅವರನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಿ ಮತ್ತು ಅವರನ್ನು ಎಂದಿಗೂ ನಿರ್ಲಕ್ಷಿಸಬೇಡಿ.

**ಮೌನವಾಗಿರುವುದು:** ಕೆಲವೊಮ್ಮೆ ಸಂಗಾತಿಯ ನಡುವೆ ಕಾಣಿಸಿಕೊಳ್ಳುವ ವಾದದ ಸಮಯದಲ್ಲಿ ಮಾತನಾಡುವ ಬದಲು ಸಂಪೂರ್ಣವಾಗಿ ಮೌನವಾಗಿರುವುದು ಅಥವಾ ಸಂಗಾತಿಯನ್ನು ನಿರ್ಲಕ್ಷಿಸುವುದನ್ನು ಮನೋವಿಜ್ಞಾನದಲ್ಲಿ ಸೈಲೆಂಟ್ ಟ್ರೀಟ್‌ಮೆಂಟ್ ಎಂದು ಕರೆಯಲಾಗುತ್ತದೆ. ಇದು ಸಂಬಂಧಗಳಲ್ಲಿ ಅತ್ಯಂತ ಹಾನಿಕಾರಕ ನಡವಳಿಕೆಯಾಗಿದ್ದು, ಗಂಡ ಹೆಂಡತಿ ಅಥವಾ ಸಂಬಂಧಗಳ ನಡುವಿನ ಅಂತರವನ್ನು ಇನ್ನಷ್ಟು ಹೆಚ್ಚಿಸಬಹುದು. ಮುಕ್ತ ಸಂವಹನವು ಯಾವುದೇ ಸಂಬಂಧದ ಜೀವಾಳವಾಗಿದೆ. ನೀವು ಮೌನವಾಗಿ ವರ್ತಿಸಿದಾಗ, ನಿಮ್ಮ ಸಂಗಾತಿ ಅಸುರಕ್ಷಿತ ಭಾವನೆ ಹೊಂದುತ್ತಾರೆ ಮತ್ತು ಅಂತರವನ್ನು ಕಡಿಮೆ ಮಾಡುವ ಬದಲು, ಗೋಡೆಗಳನ್ನು ನಿರ್ಮಿಸಲಾಗುತ್ತದೆ. PubMed ಅಧ್ಯಾಯನದ ಪ್ರಕಾರ ಸಂಬಂಧಗಳಲ್ಲಿ ಉತ್ತಮ ಸಂವಹನವು ಮುಕ್ತ, ಪ್ರಾಮಾಣಿಕ ಸಂಭಾಷಣೆ, ಸಕ್ರಿಯ ಆಲಿಸುವಿಕೆ ಮತ್ತು ಸಹಾನುಭೂತಿಯನ್ನು ಒಳಗೊಂಡಿರುತ್ತದೆ, ಇವು ಒತ್ತಡವನ್ನು ಕಡಿಮೆ ಮಾಡಲು, ಸಂಘರ್ಷವನ್ನು ಪರಿಹರಿಸಲು ಮತ್ತು ತೃಪ್ತಿಯನ್ನು ಹೆಚ್ಚಿಸಲು ನಿರ್ಣಾಯಕವಾಗಿವೆ.

**ಹಿಂದೆ ನಡೆದು ಹೋಗಿರುವ ಸಮಸ್ಯೆಗಳನ್ನು ಮತ್ತೆ ಕೆದಕುವುದು**
ಹಿಂದೆ ನಡೆದು ಹೋಗಿರುವ ಸಮಸ್ಯೆಗಳು ಅಥವಾ ಕಹಿ ನೆನಪುಗಳನ್ನು ಮತ್ತೆ ಕೆದಕುವುದು ಮನಸಿನ ಶಾಂತಿಯನ್ನು ಕೆಡಿಸುವುದು ಮಾತ್ರವಲ್ಲದೆ, ಸಂಬಂಧದಲ್ಲಿ ಇನ್ನಷ್ಟು ಅಂತರ ಉಂಟು ಮಾಡಬಹುದು.



**ಗೌಪ್ಯತೆಯನ್ನು ಗೌರವಿಸದಿರುವುದು:** ಪ್ರೀತಿ ಎಂದರೆ ನಿಮ್ಮ ಸಂಗಾತಿಯ ಜೀವನದ ಪ್ರತಿಯೊಂದು ಕ್ಷಣ ಮತ್ತು ಪ್ರತಿಯೊಂದು ಪಾಸ್‌ವರ್ಡ್ ನಿಮಗೆ ಸೇರಿದ್ದು ಎಂದಲ್ಲ. ಅವರ ಫೋನ್ ಮೇಲೆ ಕಣ್ಣಿಡುವುದು, ಅವರ ಸ್ನೇಹಿತರ ಸಂವಹನವನ್ನು ಪ್ರಶ್ನಿಸುವುದು ಅಥವಾ ಅವರಿಗೆ ಯಾವುದೇ ಸಮಯ ನಿರಾಕರಿಸುವುದು ಸಂಬಂಧವನ್ನು ಉಸಿರುಗಟ್ಟಿಸಬಹುದು.

ಒಬ್ಬ ವ್ಯಕ್ತಿಯು ತಮ್ಮ ಸ್ವಾತಂತ್ರ್ಯವನ್ನು ಕಸಿದುಕೊಳ್ಳಲಾಗುತ್ತಿದೆ ಎಂದು ಭಾವಿಸಿದಾಗ, ಅವರು ತಪ್ಪಿಸಿಕೊಳ್ಳಲು ಮಾರ್ಗಗಳನ್ನು ಹುಡುಕಲು ಪ್ರಾರಂಭಿಸುತ್ತಾರೆ. ನಂಬಿಕೆಯು ಸಂಬಂಧದ ಅಡಿಪಾಯವಾಗಿದೆ ಅದು ಕಾಣೆಯಾಗಿದ್ದರೆ, ಅದನ್ನು ಉಳಿಸಿಕೊಳ್ಳುವುದು ಕಷ್ಟ.

> **ನಂಬಿಕೆ ಇಲ್ಲದಿರುವುದು**
> **ಪ್ರೀತಿಯ ಅಡಿಪಾಯವು ನಂಬಿಕೆಯಸಂಬಂಧದ ಮೇಲೆ ನಿಂತಿದೆ. ಈ ಅಡಿಪಾಯ ಅಲುಗಾಡುವ ದಿನ, ಸಂಬಂಧದಲ್ಲಿ ಬಿರುಕುಗಳು ಕಾಣಿಸಿಕೊಳ್ಳಲು ಪ್ರಾರಂಭಿ ಸುತ್ತವೆ. ಆದ್ದರಿಂದ, ಸಂಬಂಧದಲ್ಲಿ ನಂಬಿಕೆಗೆ ದಕ್ಕೆ ಉಂಟಾಗುವ ಅಂಶಗಳಿಂದ ದೂರ ವಿರುವುದು ಆರೋಗ್ಯಕರ ಬಾಂಧವ್ಯಕ್ಕೆ ಅತ್ಯಗತ್ಯ. ಸಂಬಂಧದಲ್ಲಿ ನಂಬಿಕೆ ಯನ್ನು ಕಳೆದುಕೊಳ್ಳುವುದು ಪ್ರೀತಿಯ ನಷ್ಟಕ್ಕೆ ಕಾರಣ ವಾಗುವುದಲ್ಲದೆ, ಸಂಬಂಧದ ನಷ್ಟಕ್ಕೂ ಕಾರಣವಾಗಬಹುದು.**

**ಸಂಗಾತಿಯೊಂದಿಗೆ ಸಮಯ ಕಳೆಯದಿರುವುದು:** ಪ್ರತಿಯೊಂದು ಕಷ್ಟದ ಸಮಯದಲ್ಲಿಯೂ ನಮ್ಮ ಸಂಗಾತಿ ನಮ್ಮೊಂದಿಗೆ ಇರಬೇಕೆಂದು ನಾವು ಬಯಸುತ್ತೇವೆ, ಆದರೆ ನಾವು ಅವರ ಬಗ್ಗೆಯೂ ಹಾಗೆಯೇ ಯೋಚಿಸುತ್ತೇವೆಯೇ? ಯಾರಿಗೆ ಗೊತ್ತು ಅವರಿಗೆ ನಮ್ಮ ಅಗತ್ಯವಿರುವಾಗ ನಾವು ಇಲ್ಲದಿರಬಹುದು? ಪ್ರೀತಿಯ ಸಂಬಂಧ ದಲ್ಲಿ, ಇಬ್ಬರೂ ಪಾಲುದಾರರಿಗೆ ಪರಸ್ಪರ ಸಮಯವಿಲ್ಲದಿದ್ದರೆ, ಅದು ಯಾವುದೇ ಸಂಘರ್ಷವಿಲ್ಲದೆ ಬಿರುಕು ಬಿಡಬಹುದು. ಆದ್ದರಿಂದ, ಈ ಪರಿಸ್ಥಿತಿ ಉದ್ಭವಿಸಲು ಬಿಡಬೇಡಿ. ನಿಮ್ಮ ಸಂಗಾತಿಗೆ ಸಮಯ ನೀಡಿ, ಅವರೊಂದಿಗೆ ಸಮಯ ಕಳೆಯಿರಿ, ಅವರ ಅಗತ್ಯಗಳನ್ನು ಅರ್ಥಮಾಡಿಕೊಳ್ಳಿ ಮತ್ತು ಅವರನ್ನು ಪ್ರೀತಿಸಿ. PubMed central ಸಂಶೋಧನೆಯು ಸಂಬಂಧಗಳಲ್ಲಿ ಒಟ್ಟಿಗೆ ಕಳೆಯುವ ಸಮಯ ಕಡಿಮೆಯಾಗುವುದರಿಂದ, ಸಂಗಾತಿಗಳ ನಡುವೆ ತೃಪ್ತಿ ಕಡಿಮೆಯಾಗುತ್ತದೆ ಮತ್ತು ಸಂಘರ್ಷಗಳು ಹೆಚ್ಚಾಗುತ್ತವೆ ಎಂದು ಸಂಶೋಧನೆಗಳು ಮತ್ತು ಸಂಬಂಧ ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

## ಬಾಯಲ್ಲಿ ನೀರೂರಿಸುವ, ಖಾರವಾದ ಬೆಳ್ಳುಳ್ಳಿ ಚಟ್ನಿ ಮಾಡಿ ಸವಿಯಿರಿ

ದಿನನಿತ್ಯ ಒಂದೇ ರೀತಿಯ ಊಟ ತಿಂದು ಬೇಜಾರಾಗಿದ್ಯಾ? ಅಥವಾ ಹುಷಾರಿಲ್ವಾ? ಹಾಗಿದ್ರೆ ಒಮ್ಮೆ ಖಾರವಾದ ಬೆಳ್ಳುಳ್ಳಿ ಚಟ್ನಿ ತಿಂದು ನೋಡಿ.. ನಿಜಕ್ಕೂ ಇನ್ನೊಮ್ಮೆ ತಿನ್ನಬೇಕು ಅನಿಸುತ್ತೆ. ದೋಸೆ, ಇಡ್ಲಿ, ರೊಟ್ಟಿ, ಪರಾಟ, ಬಿಸಿ ಅನ್ನದ ಜೊತೆ ಈ ಬೆಳ್ಳುಳ್ಳಿ ಚಟ್ನಿಯನ್ನು ತಿಂದರೆ ನಿಜಕ್ಕೂ ಅದ್ಭುತವಾಗಿರುತ್ತದೆ. ಮಾಡೋದು ಹೇಗೆ ಎನ್ನುವ ಕುರಿತು ಇಲ್ಲಿದೆ ನೋಡಿ.

**ಬೇಕಾಗುವ ಪದಾರ್ಥಗಳು:** ತಾಜಾ ಬೆಳ್ಳುಳ್ಳಿ ಎಸಳು, ಟೊಮೆಟೊ, ಶುಂಠಿ, ಒಣ ಮೆಣಸಿನಕಾಯಿ, ದಾಲ್ಚಿನ್ನಿ, ಕೊತ್ತಂಬರಿ ಸೊಪ್ಪು, ಸ್ವಲ್ಪ ಸಾಸಿವೆ ಎಣ್ಣೆ, ಜೀರಿಗೆ, ಮೆಂತ್ಯ, ಧನಿಯಾ ಪುಡಿ, ಕೆಂಪು ಖಾರದ ಪುಡಿ, ಜೀರಿಗೆ ಪುಡಿ, ನಿಂಬೆ ರಸ, ಉಪ್ಪು, ಸಕ್ಕರೆ



**ಮಾಡುವ ವಿಧಾನ:** ಮೊದಲು ಬೆಳ್ಳುಳ್ಳಿ ಎಸಳುಗಳನ್ನು ಸಿಪ್ಪೆ ತೆಗೆದು, ಸ್ವಚ್ಛವಾಗಿ ತೊಳೆಯಿರಿ. ಬಿಸಿ ನೀರಿನ ಪಾತ್ರೆಗೆ ಒಣಗಿದ ಮೆಣಸಿನಕಾಯಿಯನ್ನು ಹಾಕಿ 5 ರಿಂದ 10 ನಿಮಿಷಗಳ ಕಾಲ ನೆನೆಸಿಡಿ. ಬಳಿಕ ಮಿಕ್ಸರ್ ಜಾರ್‌ನಲ್ಲಿ ಬೆಳ್ಳುಳ್ಳಿ ಎಸಳುಗಳು, ಕತ್ತರಿಸಿದ ಟೊಮೆಟೊ ಹಾಗೂ ಶುಂಠಿ, ಕೊತ್ತಂಬರಿ ಸೊಪ್ಪು, ನೆನೆಸಿದ ಒಣ ಮೆಣಸಿನಕಾಯಿ, ದಾಲ್ಚಿನ್ನಿ, ಸ್ವಲ್ಪ ಉಪ್ಪು, ಒಂದು ಚಮಚ ಎಣ್ಣೆ ಮತ್ತು ಒಂದು ಚಮಚ ಜೀರಿಗೆ ಸೇರಿಸಿ ನಯವಾದ ಪೇಸ್ಟ್ ಮಾಡಿ. ಅಗತ್ಯವಿದ್ದರೆ ಸ್ವಲ್ಪ ನೀರು ಸೇರಿಸಿಕೊಳ್ಳಿ ಆನಂತರ ಒಂದು ಪ್ಯಾನ್ ತೆಗೆದುಕೊಂಡು ಅದಕ್ಕೆ ಎಣ್ಣೆ ಹಾಕಿ. ಬಿಸಿಯಾದ ನಂತರ ಮಾಡಿ ಜೀರಿಗೆ ಮತ್ತು ಸ್ವಲ್ಪ ಮೆಂತ್ಯ ಸೇರಿಸಿ ಹುರಿಯಿರಿ. ಬಳಿಕ ರುಬ್ಬಿಕೊಂಡ ಬೆಳ್ಳುಳ್ಳಿ ಪೇಸ್ಟ್ ಅನ್ನು ಸೇರಿಸಿ, ಚೆನ್ನಾಗಿ ಮಿಶ್ರಣ ಮಾಡಿ. ಸ್ವಲ್ಪ ಹೊತ್ತಿನ ಕಾಲ ಚೆನ್ನಾಗಿ ಬೇಯಿಸಿಕೊಳ್ಳಿ. ನಂತರ ಅದಕ್ಕೆ ಧನಿಯಾ ಪುಡಿ, ಜೀರಿಗೆ ಪುಡಿ, ಖಾರದ ಪುಡಿ, ರುಚಿಗೆ ತಕ್ಕ ಉಪ್ಪು ಮತ್ತು ಸ್ವಲ್ಪ ಸಕ್ಕರೆ ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಿ. ಎಲ್ಲಾ ಮಸಾಲೆ ಪದಾರ್ಥಗಳು ಹಸಿ ವಾಸನೆ ಹೋಗುವವರೆಗೂ ಹುರಿಯಿರಿ. ಕೊನೆಗೆ ಒಲೆಯನ್ನು ಆರಿಸಿ, ಒಂದು ಚಮಚ ನಿಂಬೆ ರಸ ಸೇರಿಸಿ, ಚೆನ್ನಾಗಿ ಮಿಶ್ರಣ ಮಾಡಿದರೆ ಬೆಳ್ಳುಳ್ಳಿ ಚಟ್ನಿ ಸಿದ್ಧ. ಇದನ್ನು ದೋಸೆ, ಇಡ್ಲಿ, ಚಪಾತಿ, ಬಿಸಿ ಅನ್ನ ಜೊತೆ ಸವಿಯಬಹುದು.





ಅಂತರಂಗದ ಮಾತು
ಡಾ.ಸುಧಾಕರ.ಜಿ. ಲಕ್ಕವಳ್ಳಿ
ಲೇಖಕರು
ಸಾಮಾಜಿಕ ಚಿಂತಕರು

# ಅಖಾಡದ ಅಮೃತ: ಕೆಮ್ಮಣ್ಣಿನ ಹದದಲ್ಲಿ ಅರಳುವ ವಜ್ರಕಾಯ

ಹನುಮಂತನ ಉಪಾಸನೆ, ಮೃತ್ತಿಕೆಯ ಮಮಕಾರ ಮತ್ತು ಪುರಾತನ ಸಮರ ಕಲೆಗಳ ವೈಜ್ಞಾನಿಕ ಸಂಗಮವೇ ಗರಡಿ ಮನೆಗಳು. ಕರ್ನಾಟಕದ ಗ್ರಾಮೀಣ ಸೀಮೆಯ ಗಲ್ಲಿಗಳಲ್ಲಿ ಸೂರ್ಯೋದಯಕ್ಕೂ ಮುನ್ನ ಕೇಳಿಬರುವ 'ಜೈ ಬಜರಂಗಿ' ಎಂಬ ನಿನಾದವು ಕೇವಲ ದೈವಭಕ್ತಿಯ ದನಿಯಲ್ಲ, ಅದು ನೆಲದ ಮಗನೊಬ್ಬ ತನ್ನ ಅಸ್ಮಿತೆಯನ್ನು ತಿದ್ದಿಕೊಳ್ಳುವ ಅಖಾಡದ ಆಹ್ವಾನ. ಮುಂಜಾವಿನ ಇಬ್ಬನಿಯಲ್ಲಿ ತೋಯ್ದ ಗರಡಿ ಮನೆಯ ಹೊಸ್ತಿಲು ತುಳಿದಾಗ, ಘ್ರಾಣೇಂದ್ರಿಯಕ್ಕೆ ಮೊದಲು ಹಿತನೀಡುವುದು ಗಿಡಮೂಲಿಕೆಗಳ ಸಾರದಿಂದ ಮಾಗಿದ ಮಣ್ಣಿನ ಪರಿಮಳ. ಈ ಕೆಮ್ಮಣ್ಣು ಕೇವಲ ಧೂಳಲ್ಲ, ಅದು ಮಲ್ಲನೊಬ್ಬನ ದೈಹಿಕ ಮತ್ತು ಮಾನಸಿಕ ವಿಕಾಸಕ್ಕೆ ಪೂರಕವಾದ 'ಜೀವಧಾತು'. ಮಣ್ಣನ್ನು ಆರಾಧಿಸುವವನಿಗೆ ಆ ಮಣ್ಣೇ ಶ್ರೀರಕ್ಷೆ ಎಂಬ ಅಚಲ ನಂಬಿಕೆಯ ಮೇಲೆ ಈ ಸಂಸ್ಕೃತಿ ನಿಂತಿದೆ.

ಅಖಾಡದ ನಿರ್ಮಾಣವೆಂಬುದು ಕೇವಲ ಭೂಮಿಯನ್ನು ಅಗೆಯುವ ಕೆಲಸವಲ್ಲ ಅದೊಂದು ಪವಿತ್ರ ಅನುಷ್ಠಾನ. ಹಳ್ಳಿಯ ಕೃಷಿ ಭೂಮಿಯ ಆಳದಿಂದ ತೆಗೆದ ರಕ್ತವರ್ಣದ ಕೆಮ್ಮಣ್ಣು ಅಥವಾ ಜಲಮೂಲಗಳ ಸನಿಹದ ಮೆಕ್ಕಲು ಮಣ್ಣು ಈ ಶಕ್ತಿಪೀಠದ ತಳಹದಿ. ಕಲ್ಲು-ಮುಳ್ಳುಗಳ ಸೋಂಕಿಲ್ಲದ, ಅಪ್ಪಟ ಮೃದುತ್ವದ ಈ ಮಣ್ಣನ್ನು ಮಡಿ ಮಾಡಿ ಜರಡಿ ಹಿಡಿಯುವುದು ಮೊದಲ ಹಂತ. ಈ ಮಣ್ಣು ನವಜಾತ ಶಿಶುವಿನ ಸ್ಪರ್ಶದಂತೆ ಮೆದುವಾಗಿರಬೇಕು ಮತ್ತು ಜಿನುಗುವ ತೇವಾಂಶವನ್ನು ಸದಾ ಕಾಲ ತನ್ನೊಡಲಲ್ಲಿ ಇರಿಸಿಕೊಳ್ಳುವ ಜೈವಿಕ ಗುಣ ಹೊಂದಿರಬೇಕು. ಅಖಾಡದ ಹದ ವ್ಯತ್ಯಾಸವಾದರೆ ಕ್ರೀಡಾಪಟುವಿನ ಸಂಧುಗಳಿಗೆ, ಬೆನ್ನಿಗೆ ಆಘಾತವಾಗುವ ಸಂಭವವಿರುತ್ತದೆ ಹಾಗಾಗಿ ಇಲ್ಲಿ ಮಣ್ಣಿನ ಗುಣಧರ್ಮಕ್ಕೇ ಪ್ರಥಮ ಆದ್ಯತೆ. ಪ್ರಾಚೀನ ಕ್ರೀಡಾ ವಿಜ್ಞಾನವು ಇಂದಿನ ಚರ್ಮವೈದ್ಯಕೀಯ ಶಾಸ್ತ್ರವನ್ನೂ ವಿಸ್ಮಯಗೊಳಿಸುವಂತಿದೆ. ಬರಿ ಮಣ್ಣಿನ ಸಂಪರ್ಕದಿಂದ ದೇಹದ ಚರ್ಮವು ಒರಟಾಗಬಾರದೆಂಬ ಕಾರಣಕ್ಕೆ, ಅದಕ್ಕೆ ಶುದ್ಧ ಅರಿಶಿನದ ಪುಡಿ ಮತ್ತು ಪಚ್ಚಕರ್ಪೂರವನ್ನು ಹೇರಳವಾಗಿ ಮಿಶ್ರಣ ಮಾಡಲಾಗುತ್ತದೆ.

ಅರಿಶಿನವು ನೈಸರ್ಗಿಕ ಕ್ರಿಮಿನಾಶಕವಾಗಿ ಗಾಯಗಳನ್ನು ಮಾಯಿಸಿದರೆ, ಕರ್ಪೂರವು ದೇಹದ ತಾಪವನ್ನು ಸಮತೋಲನದಲ್ಲಿಡುತ್ತದೆ. ಕಾಲಕಾಲಕ್ಕೆ




ಚಿಮುಕಿಸುವ ಬೇವಿನ ಸಾರವು ಚರ್ಮದ ಯಾವುದೇ ವ್ಯಾಧಿಗಳು ಪೈಲ್ವಾನನ ಸನಿಹ ಸುಳಿಯದಂತೆ ಅಸ್ತ್ರವಾಗಿ ಕೆಲಸ ಮಾಡುತ್ತದೆ. ಈ ಸುವಾಸಿತ ಮಣ್ಣಿನ ಅನುಭವವು ಸಾಧಕನ ಚಿತ್ತವನ್ನು ಪ್ರಫುಲ್ಲಗೊಳಿಸಿ ಏಕಾಗ್ರತೆಯನ್ನು ವೃದ್ಧಿಸುತ್ತದೆ.

ಅಖಾಡದ ಮಣ್ಣು ಸದಾಕಾಲ ಜಿನುಗುವಂತೆ ಮತ್ತು ಸ್ನಿಗ್ಧವಾಗಿರಲು ಅದಕ್ಕೆ ಗಾಣದ ಎಳ್ಳೆಣ್ಣೆ ಅಥವಾ ಸಾಸಿವೆ ತೈಲವನ್ನು ಧಾರೆಯೆರೆಯಲಾಗುತ್ತದೆ. ಕುತೂಹಲದ ಸಂಗತಿಯೆಂದರೆ, ಮಣ್ಣಿನ ಸಾಂದ್ರತೆಗಾಗಿ ಹರಿವಾಣಗಟ್ಟಲೆ ಹಸಿ ಹಾಲು, ಮೊಸರು ಮತ್ತು ಆಕಳ ತುಪ್ಪವನ್ನು ಬೆರೆಸುವ ಪದ್ಧತಿ ಇಂದಿಗೂ ಪರಂಪರೆಯಾಗಿ ಮುಂದುವರಿದಿದೆ. ಈ ಹೈನು ಪದಾರ್ಥಗಳು ಮಣ್ಣಿನಲ್ಲಿ ಲೀನವಾಗಿ, ಅದು ಧೂಳಾಗಿ ಹಾರದಂತೆ ಕಾಯುತ್ತವೆ. ಕುಸ್ತಿ ಪಟುಗಳು ಅಖಾಡದಲ್ಲಿ ಮಲ್ಲಯುದ್ಧ ನಡೆಸುವಾಗ, ಈ ತೈಲಾಂಶಗಳು ಚರ್ಮದ ರೋಮಕೂಪಗಳ ಮೂಲಕ ದೇಹದ ಆಳಕ್ಕಿಳಿದು ಸ್ನಾಯುಗಳಿಗೆ ಅಪ್ರತಿಮ ದಾರ್ಢ್ಯತೆಯನ್ನು ನೀಡುತ್ತವೆ. ಇದು ಕೇವಲ ಶ್ರಮವಲ್ಲ, ಸ್ನಾಯುಗಳಿಗೆ ನೀಡುವ ಒಂದು ದೈವಿಕ ಪುನಶ್ಚೇತನ.

ದೀರ್ಘಕಾಲದ ಬಳಕೆಯಿಂದ ಅಖಾಡದ ಮಣ್ಣು ಮಲಿನವಾಗಬಾರದೆಂದು ಅದಕ್ಕೆ ಪನ್ನೀರು ಮತ್ತು ಸುಗಂಧ ತೈಲಗಳನ್ನು ಪ್ರೋಕ್ಷಣೆ ಮಾಡಲಾಗುತ್ತದೆ. ಈ ಪರಿಮಳವು ಗರಡಿ ಮನೆಯ ವಾತಾವರಣವನ್ನು ಗುಡಿಯಂತೆ ಶುದ್ಧವಾಗಿರಿಸುತ್ತದೆ. ಪ್ರತಿ ಆರು ತಿಂಗಳಿಗೊಮ್ಮೆ ಹಳೆಯ ಮಣ್ಣನ್ನು ಸಂಪೂರ್ಣವಾಗಿ ವಿಲೇವಾರಿ ಮಾಡಿ, ಹೊಸ ದ್ರವ್ಯಗಳೊಂದಿಗೆ ಮಣ್ಣನ್ನು ಪುನರುಜ್ಜೀವನಗೊಳಿಸುವುದು ಗರಡಿ ಸಂಸ್ಕೃತಿಯ ಒಂದು ಶ್ರದ್ಧಾತುರ ಕಾರ್ಯ. ಈ ಪ್ರಕ್ರಿಯೆಯು ಒಬ್ಬ ಪೈಲ್ವಾನನಿಗೆ ತಾಳ್ಮೆ ಮತ್ತು ಶ್ರಮದ ಮಹತ್ವವನ್ನು ಬೋಧಿಸುತ್ತದೆ. ಅಖಾಡದ ಪ್ರತಿ ಕಣವೂ ಬೆವರಿನೊಂದಿಗೆ ಬೆರೆತು, ದೇಹದ ಆಂತರಿಕ ಉಷ್ಣತೆಯನ್ನು ನಿಯಂತ್ರಿಸುವ ಆಯುರ್ವೇದ ಚಿಕಿತ್ಸೆಯಂತೆ ಕಾರ್ಯನಿರ್ವಹಿಸುತ್ತದೆ.

ಆಧುನಿಕ ಜಿಮ್‌ಗಳ ಕೃತಕ ವಾತಾವರಣದಲ್ಲಿ ಕಾಣಸಿಗದ ನೈಸರ್ಗಿಕ ಕಾಂತಿ ಗರಡಿ ಮನೆಯ ಸಾಧಕರಲ್ಲಿ ಗೋಚರಿಸುತ್ತದೆ. ಅಲ್ಲಿನ ಚರ್ಮವು ಶಿಲೆಯಂತೆ ಕಠಿಣವಾಗಿದ್ದರೂ, ಸ್ಪರ್ಶಕ್ಕೆ ಅತ್ಯಂತ ಕೋಮಲವಾಗಿರುತ್ತದೆ. ಅರಿಶಿನ ಮತ್ತು ತೈಲಯುಕ್ತ ಮಣ್ಣಿನ ನಿರಂತರ ಮರ್ಧನದಿಂದ ದೇಹದ ಒಟ್ಟಾರೆ ಆರೋಗ್ಯ ಸುಧಾರಿಸುತ್ತದೆ. ಇಂದಿನ ಪ್ಲಾಸ್ಟಿಕ್ ಮ್ಯಾಟ್‌ಗಳ ಯಾಂತ್ರಿಕ ಜಗತ್ತಿನಲ್ಲಿ, ಕೆಮ್ಮಣ್ಣಿನ ಅಖಾಡದ ಈ 'ಅಮೃತ ಸತ್ವ'ವನ್ನು ಉಳಿಸಿಕೊಳ್ಳುವುದು ಕೇವಲ ಕ್ರೀಡೆಯ ದೃಷ್ಟಿಯಿಂದಲ್ಲ, ನಮ್ಮ ಸಾಂಸ್ಕೃತಿಕ ಬೇರುಗಳ ಹಿತದೃಷ್ಟಿಯಿಂದಲೂ ಅನಿವಾರ್ಯ. ಮಣ್ಣನ್ನು ಸದಾ ನಂಬುವವನಿಗೆ ಭೂತಾಯಿಯೇ ಶಕ್ತಿಯಾಗಿ ನಿಂತು ಅವನನ್ನು 'ವಜ್ರಕಾಯ'ನನ್ನಾಗಿ ರೂಪಿಸುತ್ತಾಳೆ ಎಂಬುದು ಈ ಗರಡಿ ಸಂಸ್ಕೃತಿಯ ಸನಾತನ ಸತ್ಯ. ಈ ಮಣ್ಣಿನ ಸೊಗಡು ಮುಂದಿನ ತಲೆಮಾರಿಗೂ ಸ್ಫೂರ್ತಿಯಾಗಲಿ.

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಬೆಳಿಗ್ಗೆ | 07:30 ರಿಂದ 09:00 |
| ಗುಳಿಕ ಕಾಲ | ಮಧ್ಯಾಹ್ನ | 01:30 ರಿಂದ 03:00 |
| ಯಮಗಂಡ ಕಾಲ | ಬೆಳಿಗ್ಗೆ | 10:30 ರಿಂದ 12:00 |

**ಮೇಷ** ನಿಮ್ಮ ಮನಸ್ಸು ಇತ್ತೀಚಿನ ಘಟನೆಗಳಿಂದ ತೊಂದರೆಗೊಳಗಾಗುತ್ತದೆ. ಧ್ಯಾನ ಮತ್ತು ಯೋಗ ಆಧ್ಯಾತ್ಮಿಕ ಹಾಗೂ ಭೌತಿಕ ಲಾಭಗಳಿಗೆ ಪ್ರಯೋಜನಕಾರಿ ಎಂದು ಸಾಬೀತಾಗುತ್ತದೆ.

**ವೃಷಭ** ನಿಮ್ಮ ಮನಸ್ಥಿತಿಯನ್ನು ಬದಲಾಯಿಸಲು ಯಾವುದಾದರೂ ಸಾಮಾಜಿಕ ಸಭೆಗೆ ಹಾಜರಾಗಿ. ಚಂದ್ರನ ಸ್ಥಾನದಿಂದಾಗಿ, ಇಂದು ನಿಮ್ಮ ಹಣವನ್ನು ಅನಗತ್ಯ ಕೆಲಸಗಳಿಗೆ ಖರ್ಚು ಮಾಡಬಹುದು.

**ಮಿಥುನ** ನಿಮ್ಮ ವೃತ್ತಿ ಅವಕಾಶಗಳನ್ನು ಹೆಚ್ಚಿಸಲು ನಿಮ್ಮ ವೃತ್ತಿಪರ ಶಕ್ತಿಯನ್ನು ಬಳಸಿ. ನಿಮ್ಮ ಚಟುವಟಿಕೆಯ ಕ್ಷೇತ್ರದಲ್ಲಿ ನೀವು ಅಪರಿಮಿತ ಯಶಸ್ಸು ಸಾಧಿಸುವ ಸಾಧ್ಯತೆಯಿದೆ.

**ಕರ್ಕಾಟಕ** ನೀವು ಕೆಲವು ಆಘಾತಗಳನ್ನು ಎದುರಿಸುವುದರಿಂದ ನೀವು ಬಹಳ ಧೈರ್ಯ ಹಾಗೂ ಶಕ್ತಿಯನ್ನು ಪ್ರದರ್ಶಿಸುವ ಅಗತ್ಯವಿದೆ. ನೀವು ನಿಮ್ಮ ಆಶಾವಾದಿ ನಿಲುವಿನಿಂದ ಇವುಗಳಿಂದ ಸುಲಭವಾಗಿ ಹೊರಬರಬಹುದು.

**ಸಿಂಹ** ನಿಮ್ಮ ಸಕಾರಾತ್ಮಕ ದೃಷ್ಟಿಕೋನ ಮತ್ತು ಆತ್ಮವಿಶ್ವಾಸದಿಂದ ನಿಮ್ಮ ಸುತ್ತಲಿರುವ ಜನರನ್ನು ಪ್ರಭಾವಿಸಬಹುದಾದ ಸಾಧ್ಯತೆಗಳಿವೆ. ಇಂದು ನಿಮ್ಮ ಯಾವುದೇ ಚಲಿಸಬಲ್ಲ ಅಸ್ತಿಯನ್ನು ಕದಿಯಬಹುದು.

**ಕನ್ಯಾ** ನಿಮ್ಮ ತೂಕದ ಮೇಲೆ ಒಂದು ಕಣ್ಣಿಟ್ಟಿರಿ ಮತ್ತು ಅತಿಯಾಗಿ ತಿನ್ನಬೇಡಿ. ಭವಿಷ್ಯದಲ್ಲಿ ನೀವು ಆರ್ಥಿಕವಾಗಿ ಬಲವಾಗಿರಬೇಕೆಂದು ಬಯಸಿದರೆ ಇಂದಿನಿಂದಲೇ ಹಣವನ್ನು ಉಳಿಸಿ.

**ತುಲಾ** ಪ್ರಕೃತಿಯು ನಿಮ್ಮಲ್ಲಿ ಗಮನಾರ್ಹ ವಿಶ್ವಾಸ ಮತ್ತು ಬುದ್ಧಿವಂತಿಕೆಯನ್ನಿರಿಸಿದೆ – ಅದನ್ನು ಸಾಧ್ಯವಾದಷ್ಟೂ ಬಳಸಿಕೊಳ್ಳಿ. ತಮ್ಮ ಹಣವನ್ನು ಬೆಟ್ಟಿಂಗ್‌ನಲ್ಲಿ ಖರ್ಚು ಮಾಡಿದವರು ನಷ್ಟ ಅನುಭವಿಸುವ ಸಾಧ್ಯತೆಯಿದೆ.

**ವೃಶ್ಚಿಕ** ಕುತ್ತಿಗೆ / ಬೆನ್ನಿನಲ್ಲಿ ನಿರಂತರ ನೋವಿನಿಂದ ಬಳಲುವ ಸಾಧ್ಯತೆಯಿದೆ. ವಿಶೇಷವಾಗಿ ಇದರ ಜೊತೆ ಸಾಮಾನ್ಯ ದೌರ್ಬಲ್ಯವಿದ್ದಾಗ ಇದನ್ನು ನಿರ್ಲಕ್ಷಿಸದಿರಿ. ಇಂದು ವಿಶ್ರಾಂತಿ ಬಹಳ ಪ್ರಮುಖವಾಗಿರುತ್ತದೆ.

**ಧನಸ್ಸು** ನಿಮ್ಮ ಚಿಂತನೆ ಮತ್ತು ಶಕ್ತಿಯನ್ನು ನೀವು ವಾಸ್ತವವಾಗಿ ಏನನ್ನು ನೋಡಬಯಸುತ್ತೀರೋ ಅದನ್ನು ಸಾಧಿಸುವಲ್ಲಿ ನಿರ್ದೇಶಿಸಿ. ಇದುವರೆಗೆ ನಿಮ್ಮ ಸಮಸ್ಯೆಯೆಂದರೆ ನೀವು ಪ್ರಯತ್ನಿಸದೇ ಕೇವಲ ಆಸೆಪಡುತ್ತೀರಿ.

**ಮಕರ** ಯಾವುದೇ ಪರಿಸ್ಥಿತಿಯಲ್ಲಿ ನೀವು ನಿಮ್ಮ ಸಮಯದ ಬಗ್ಗೆ ಕಾಳಜಿ ವಹಿಸಬೇಕು. ನೀವು ಸಮಯದ ಆರೈಕೆ ಮಾಡದಿದ್ದರೆ, ಇದರಿಂದ ನಿಮಗೆ ಮಾತ್ರ ಹಾನಿಯಾಗುತ್ತದೆ.

**ಕುಂಭ** ನಿಮ್ಮ ಮುಖದಲ್ಲಿ ನಿರಂತರವಾದ ನಗುವಿರುವ ಮತ್ತು ಅಪರಿಚಿತರೂ ಪರಿಚಿತರಂತೆ ತೋರುವ ಒಂದು ದಿನ. ಆಪ್ತ ಸ್ನೇಹಿತನ ಸಹಾಯದಿಂದ ಇಂದು ಕೆಲವು ವ್ಯಾಪಾರಿಗಳಿಗೆ ಹಣದ ಲಾಭವಾಗುವ ಸಾಧ್ಯತೆ ಇದೆ.

**ಮೀನ** ನಿಮ್ಮ ಪ್ರಚಂಡ ಬೌದ್ಧಿಕ ಸಾಮರ್ಥ್ಯ ಅಂಗವೈಕಲ್ಯದ ವಿರುದ್ಧ ಹೋರಾಡಲು ಸಹಾಯ ಮಾಡುತ್ತದೆ. ಕೇವಲ ಸಕಾರಾತ್ಮಕ ಆಲೋಚನೆಗಳ ಜೊತೆ ಮಾತ್ರ ನೀವು ಈ ಸಮಸ್ಯೆಯ ವಿರುದ್ಧ ಹೋರಾಡಬೇಕು.

### ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಈಗಾಗಲೇ ಒಟ್ಟು 10 ಲಕ್ಷ ರೂ. ಗಿಂತ ಹೆಚ್ಚು ಹಣ ಮರಳಿ ಪಡೆದಿದೆ

# ಮೃತರ ಗೃಹಲಕ್ಷ್ಮೀ ಯೋಜನೆ ಹಣ ವಾಪಸ್

• **ಉದಯವಾಹಿನಿ ಹಾವೇರಿ**

ರಾಜ್ಯದ ಪ್ರಮುಖ ಗ್ಯಾರಂಟಿ ಯೋಜನೆಗಳಲ್ಲಿ ಒಂದಾದ ಗೃಹಲಕ್ಷ್ಮೀ ಯೋಜನೆಯಲ್ಲಿ ಹಲವು ಮೃತ ಫಲಾನುಭವಿಗಳ ಬ್ಯಾಂಕ್ ಖಾತೆಗಳಿಗೆ ಹಣ ಜಮಾ ಆಗುತ್ತಿದ್ದು ಎಟಿಎಂ ಮೂಲಕ ಹಣ ತೆಗೆದ ವಿಚಾರ ಪತ್ತೆಯಾಗಿದೆ. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಇಂತಹ ಖಾತೆಗಳಿಂದ ಈಗಾಗಲೇ ಒಟ್ಟು 10 ಲಕ್ಷ ರೂ. ಗಿಂತ ಹೆಚ್ಚು ಹಣ ಮರಳಿ ಪಡೆದಿದೆ. ಕುಟುಂಬದ ಯಜಮಾನಿಗೆ ಪ್ರತಿ ತಿಂಗಳು 2 ಸಾವಿರ ರೂ. ನೀಡುವ ಗೃಹಲಕ್ಷ್ಮೀ ಯೋಜನೆಯ ಪ್ರಯೋಜನವನ್ನು ಸಾವಿರಾರು ಮಹಿಳೆಯರು ಪಡೆದಿದ್ದಾರೆ. ಆದರೆ ಕೆಲ ಫಲಾನುಭವಿಗಳ ಕುಟುಂಬಗಳು ಯಜಮಾನಿ ಮೃತಪಟ್ಟ ಮಾಹಿತಿಯನ್ನು ಸರಕಾರಕ್ಕೆ ಸಲ್ಲಿಸಿಲ್ಲ. ಹಾಗಾಗಿ ಅಂತಹ ಫಲಾನುಭವಿಗಳ ಖಾತೆಗೆ ಹಣ ಹೋಗುತ್ತಲೇ ಇದೆ. ಕೆಲವೆಡೆ ಆ ಹಣವನ್ನು ಎಟಿಎಂ ಕಾರ್ಡ್ ಮೂಲಕ ತೆಗೆದ ಘಟನೆಗಳೂ ಬೆಳಕಿಗೆ ಬಂದಿವೆ.

**ಬ್ಯಾಂಕ್ ಖಾತೆಯಿಂದ ವಸೂಲಿ ಕಾರ್ಯ**

**ವಸೂಲಿ ಕ್ರಮಕ್ಕೆ ವೇಗ:** ಮೃತ ಫಲಾನುಭವಿಗಳ ಖಾತೆಯಿಂದ ಗೃಹಲಕ್ಷ್ಮೀ ಹಣ ತೆಗೆಯುತ್ತಿರುವ ಸಂಗತಿ ಪತ್ತೆಯಾಗುತ್ತಿದ್ದಂತೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಎಚ್ಚೆತ್ತುಕೊಂಡಿದೆ. ಪ್ರಸಕ್ತ ವರ್ಷ ಜನವರಿಯಿಂದಲೇ ಮೃತ ಫಲಾನುಭವಿಗಳ ಬ್ಯಾಂಕ್ ಖಾತೆಯಿಂದ ವಸೂಲಿ ಕಾರ್ಯ ಆರಂಭಗೊಂಡಿದೆ.

ಜಿಲ್ಲೆಯಲ್ಲಿ ಯೋಜನೆ ಅನುಷ್ಠಾನಗೊಂಡಾಗಿನಿಂದ ಈ ವರೆಗೆ ಒಟ್ಟು 1792 ಫಲಾನುಭವಿಗಳು ಮೃತಪಟ್ಟ ಮಾಹಿತಿ ಇಲಾಖೆಗೆ ಲಭಿಸಿದೆ. ಈ ಖಾತೆಗಳಿಗೆ ಬಿಡುಗಡೆಯಾದ ಒಟ್ಟು 10,16,000 ರೂ.ಗಳನ್ನು ಇಲಾಖೆಯಿಂದ ಮರಳಿ ಪಡೆಯಲಾಗಿದೆ.

ಇನ್ನು, ಜಿಲ್ಲಾ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಸಭೆಯಲ್ಲಿಯೂ ಈ ವಿಷಯ ಚರ್ಚೆಗೆ ಬಂದಿದೆ. ಮೃತರ ಖಾತೆಗಳಿಗೆ ಹಣ ಜಮಾ ಆಗುವುದನ್ನು ತಡೆಯಲು ವಿವಿಧ ಕ್ರಮಗಳನ್ನು ಕೈಗೊಳ್ಳಲು ಸರಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

**ಹಣ ತೆಗೆಯುವುದು ಹೇಗೆ ?:** ಗ್ರಾಮೀಣ ಭಾಗದ ಕೆಲವು ವಯೋವೃದ್ಧ ಮಹಿಳೆಯರಿಗೆ ಗೃಹಲಕ್ಷ್ಮೀ ಯೋಜನೆಯಡಿ ಪ್ರತಿ ತಿಂಗಳು ಹಣ ಬರುತ್ತಿದೆ. ಆದರೆ ಅವರಲ್ಲಿ ಅನೇಕರು ಎಟಿಎಂ ಕಾರ್ಡ್ ಬಳಕೆಯ ಮಾಹಿತಿ ಹೊಂದಿಲ್ಲ. ಹಾಗಾಗಿ ಕುಟುಂಬದ ಸದಸ್ಯರಿಗೆ ಖಾತೆ ಸಂಖ್ಯೆ, ಎಟಿಎಂ ಪಾಸ್ ವರ್ಡ್ ಕೊಟ್ಟು ಅವರಿಂದಲೇ ಹಣ ತೆಗೆಸಿಕೊಳ್ಳುತ್ತ ಬಂದಿದ್ದರು. ಇದರಿಂದ ಫಲಾನುಭವಿ ಮಹಿಳೆ ಮೃತಪಟ್ಟ ಬಳಿಕವೂ ಎಟಿಎಂನಿಂದ ಹಣ ತೆಗೆಯಲು ಸಾಧ್ಯವಾಗಿದೆ.

ಇನ್ನು ಕೆಲ ಫಲಾನುಭವಿಗಳು ಬ್ಯಾಂಕ್‌ಗೆ ಹೋಗಲು ಅಸಮರ್ಥರಾಗಿರುವುದರಿಂದ ಕುಟುಂಬ ಸದಸ್ಯರು ಖಾತೆ ನಿರ್ವಹಿಸುತ್ತಿದ್ದಾರೆ. ಅವರ ಎಟಿಎಂ ಕಾರ್ಡ್ ಇರುವುದರಿಂದ ಮೃತರ ಖಾತೆಯಿಂದಲೂ ಹಣ ತೆಗೆಯಲಾಗುತ್ತಿದೆ ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

**ಅಂಗನವಾಡಿ-ಬ್ಯಾಂಕ್ ಸಮನ್ವಯ:** ಮೃತ ಫಲಾನುಭವಿಗಳ ಮಾಹಿತಿ ಸಂಗ್ರಹಿಸಲು ಅಂಗನವಾಡಿ ಕಾರ್ಯಕರ್ತೆಯರಿಗೆ ಜವಾಬ್ದಾರಿ ನೀಡಲಾಗಿದೆ. ಅವರು ಮಕ್ಕಳ ಅಭಿವೃದ್ಧಿ ಯೋಜನೆ ಅಧಿಕಾರಿಗೆ ಮಾಹಿತಿ ನೀಡಿದ ಬಳಿಕ, ಉಪನಿರ್ದೇಶಕರು ಬ್ಯಾಂಕ್‌ಗಳಿಗೆ ಸೂಚನೆ ನೀಡುತ್ತಾರೆ. ಇನ್ನು, ಬ್ಯಾಂಕ್‌ಗಳಿಗೆ ಪ್ರತೀ ತಿಂಗಳು ಫಲಾನುಭವಿಗಳ ಪಟ್ಟಿ ಪರಿಶೀಲಿಸುವಂತೆ ಸೂಚನೆ ನೀಡಲಾಗಿದೆ.



ಉದಯವಾಹಿನಿ ಚಿತ್ರ

**ಕೆಲವು ಗೃಹಲಕ್ಷ್ಮೀ ಫಲಾನುಭವಿಗಳು ನಿಧನ ಹೊಂದಿದ ಬಳಿಕವೂ ಅವರ ಖಾತೆಗಳಿಂದ ಹಣ ತೆಗೆದಿರುವುದು ಪತ್ತೆಯಾಗಿದೆ. ಕೆಲವರು ಸರಕಾರದ ಸೂಚನೆ ಮೇರೆಗೆ ಹಿಂತಿರುಗಿಸಿದ್ದಾರೆ. ಈಗಾಗಲೇ 10 ಲಕ್ಷ ರೂ.ಗಿಂತ ಹೆಚ್ಚು ಹಣವನ್ನು ಬ್ಯಾಂಕ್ ಖಾತೆಗಳಿಂದ ವಸೂಲಿ ಮಾಡಲಾಗಿದೆ.**
**-ರೇವತಿ ಹೊಸ್ಮಠ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಉಪನಿರ್ದೇಶಕಿ, ಹಾವೇರಿ**

**ತಾಲ್ಲೂಕು -ಮೃತರ ಸಂಖ್ಯೆ - ವಸೂಲಾದ ಹಣ**

- ಹಾನಗಲ್ 215 - 3,26,000
- ರಾಣೆಬೆನ್ನೂರು 571 - 3,32,000
- ಹಿರೇಕೇರೂರು 291 - 18,000
- ಶಿಗ್ಗಾವಿ 224 - 30,000
- ಸವಣೂರು 203 - 62,000
- ಹಾವೇರಿ 186 - 1,74,000
- ಬ್ಯಾಡಗಿ 102 - 74,000
- ಒಟ್ಟು 1792 - 10,16,000

- **ಮೃತಪಟ್ಟ ನಂತರವೂ ಫಲಾನುಭವಿಗಳ ಖಾತೆಗೆ ಹಣ ಹೋಗುತ್ತಲೇ ಇದೆ. ಕೆಲವೆಡೆ ಆ ಹಣವನ್ನು ಎಟಿಎಂ ಕಾರ್ಡ್ ಮೂಲಕ ತೆಗೆದ ಘಟನೆಗಳೂ ಬೆಳಕಿಗೆ ಬಂದಿವೆ**
- **ಜನವರಿಯಿಂದಲೇ ಮೃತ ಫಲಾನುಭವಿಗಳ ಬ್ಯಾಂಕ್ ಖಾತೆಯಿಂದ ವಸೂಲಿ ಕಾರ್ಯ ಆರಂಭಗೊಂಡಿದೆ.**
- **ಫಲಾನುಭವಿ ಮಹಿಳೆ ಮೃತಪಟ್ಟ ಬಳಿಕವೂ ಎಟಿಎಂನಿಂದ ಹಣ ತೆಗೆಯಲು ಸಾಧ್ಯವಾಗಿದೆ.**

## ಅಧಿಕಾರಿಗಳಿಗೆ ಆರ್‌ಟಿಐ ಕಾಯ್ದೆ ಜ್ಞಾನವಿರಲಿ

• **ಉದಯವಾಹಿನಿ ಕಾರವಾರ**

ಮಾಹಿತಿ ಹಕ್ಕು ಕಾಯ್ದೆ ಅಡಿ ಮಾಹಿತಿ ಕೋರಿ ಸಲ್ಲಿಕೆಯಾದ ಅರ್ಜಿಗಳಿಗೆ ನಿಗದಿತ ಕಾಲಮಿತಿಯೊಳಗೆ ಮಾಹಿತಿ ಒದಗಿಸದಿದ್ದರೆ ಸಂಬಂಧಪಟ್ಟ ಅಧಿಕಾರಿಗಳಿಗೆ ದಂಡ ಮತ್ತು ಕರ್ತವ್ಯ ಲೋಪ ಎಸಗಿದ ಕಾರಣಕ್ಕೆ ಶಿಸ್ತು ಕ್ರಮ ಜರುಗಿಸಲಾಗುತ್ತದೆ' ಎಂದು ರಾಜ್ಯ ಮಾಹಿತಿ ಹಕ್ಕು ಆಯೋಗದ ಆಯುಕ್ತ ಹರೀಶ ಕುಮಾರ್ ಎಚ್ಚರಿಸಿದರು.

ಇಲ್ಲಿನ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಗೂ ವಿವಿಧ ಇಲಾಖೆಯ ಸಾರ್ವಜನಿಕ ಮಾಹಿತಿ ಅಧಿಕಾರಿಗಳಿಗೆ ಆಯೋಜಿಸಿದ್ದ ಮಾಹಿತಿ ಹಕ್ಕು ಕಾಯ್ದೆ ಕುರಿತು ಜಾಗೃತಿ ಕಾರ್ಯಾಗಾರ ಹಾಗೂ ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಮಾಹಿತಿ ಸಲ್ಲಿಕೆಗೆ ಕೋರಿ ಸಾರ್ವಜನಿಕರು ಸಲ್ಲಿಸುವ ಅರ್ಜಿಗಳಿಗೆ ನಿಗದಿತ ಅವಧಿಯೊಳಗೆ ಅಗತ್ಯ ಮಾಹಿತಿ ಒದಗಿಸುವುದು ಎಲ್ಲಾ ಇಲಾಖೆಗಳ ಮಾಹಿತಿ ಅಧಿಕಾರಿಗಳ ಕಡ್ಡಾಯ ಜವಾಬ್ದಾರಿ. ಮಾಹಿತಿ ಹಕ್ಕು ಕಾಯ್ದೆ ಸಾರ್ವಜನಿಕ ಆಡಳಿತ ವ್ಯವಸ್ಥೆಯಲ್ಲಿ ಪಾರದರ್ಶಕತೆ ಮತ್ತು ಕಾನೂನಾತ್ಮಕವಾಗಿ ಸಾರ್ವಜನಿಕ ಕೆಲಸಗಳನ್ನು ಮಾಡಲು ಸಹಕಾರಿಯಾಗಿದೆ' ಎಂದರು.

ಕಾಯ್ದೆಯ ಕುರಿತಂತೆ ಸುಪ್ರಿಂ ಕೋರ್ಟ್, ಹೈಕೋರ್ಟ್‌ಗಳು ನೀಡುವ ತೀರ್ಪುಗಳ ಕುರಿತಂತೆ ಮಾಹಿತಿ ಅಧಿಕಾರಿಗಳು ಅರಿವು ಹೊಂದಿರಬೇಕು. ಕಾಯ್ದೆಯಲ್ಲಿನ ಎಲ್ಲಾ ಅಂಶಗಳ ಬಗ್ಗೆ ಸಮಗ್ರವಾಗಿ ಅರಿತುಕೊಂಡು ಸಾರ್ವಜನಿಕರಿಗೆ ಮಾಹಿತಿಗಳನ್ನು ಒದಗಿಸಬೇಕು. ಪ್ರಥಮ ಮೇಲ್ಮನವಿ ಮತ್ತು ಎರಡನೇ ಮೇಲ್ಮನವಿಗಳ ಸಲ್ಲಿಕೆಗೆ ಅವಕಾಶ ನೀಡದೇ ಅರ್ಜಿಗಳನ್ನು ವಿಲೇಗೊಳಿಸಬೇಕು. ಇಲ್ಲದಿದ್ದರೆ ಶಿಸ್ತುಕ್ರಮ ಎದುರಿಸ ಬೇಕಾಗುತ್ತದೆ ಎಂದರು.

ಶೀಘ್ರದಲ್ಲಿ ಮತ್ತು ಸಮರ್ಪಕವಾದ ಮಾಹಿತಿ ನೀಡಲು ಅನುಕೂಲವಾಗುವಂತೆ ಕಚೇರಿಗಳಲ್ಲಿ ಕಡತಗಳನ್ನು ವರ್ಗೀಕರಣ ಮಾಡಿಟ್ಟುಕೊಳ್ಳಬೇಕು. ಕಡತಗಳನ್ನು ನಾಶಪಡಿಸಿದ್ದರೆ ಈ ಬಗ್ಗೆ ದಾಖಲೆ ಇರಬೇಕು. ಕಡತಗಳು ಕಣ್ಮರೆಯಾಗಿದ್ದಲ್ಲಿ ಈ ಕುರಿತು ಪೊಲೀಸ್ ಠಾಣೆಗಳಲ್ಲಿ ಎಫ್‌ಐಆರ್ ದಾಖಲಿಸಬೇಕು. ಇಲ್ಲವಾದಲ್ಲಿ ಸಂಬಂಧಪಟ್ಟ ಅಧಿಕಾರಿಯೇ ಶಿಕ್ಷೆ ಎದುರಿಸಬೇಕಾಗುತ್ತದೆ' ಎಂದರು.


ಉದಯವಾಹಿನಿ ಚಿತ್ರ

## ಫಲಾನುಭವಿಗಳ ಕರೆತರಲು ಕ್ರಮವಹಿಸಿ: ನಟೇಶ್

• **ಉದಯವಾಹಿನಿ ನರಸಿಂಹರಾಜಪುರ**

ತಾಲ್ಲೂಕಿನ ವ್ಯಾಪ್ತಿಯ ಹೊನ್ನೆಕೂಡಿಗೆ ಸೇತುವೆ ಉದ್ಘಾಟನೆ ಮತ್ತು ರಸ್ತೆ ವಿಸ್ತರಣೆ ಕಾಮಗಾರಿಗೆ ಶಂಕುಸ್ಥಾಪನೆಗೆ ಸಿಎಂ ಸಿದ್ದರಾಮಯ್ಯ ಅವರು ಏ.12, ಏ.13ರಂದು ತಾಲ್ಲೂಕಿಗೆ ಬರಲಿದ್ದು, ಸರ್ಕಾರಿ ಸೌಲಭ್ಯ ಪಡೆಯುವ ಫಲಾನುಭವಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಗಮನಹರಿಸಬೇಕು ಎಂದು ತರೀಕೆರೆ ಉಪವಿಭಾಗಾಧಿಕಾರಿ ನಟೇಶ್ ಹೇಳಿದರು.

ತಾಲ್ಲೂಕು ಕೇಂದ್ರಕ್ಕೆ ಸಿಎಂ ಸಿದ್ದರಾಮಯ್ಯ ಅವರು ಭೇಟಿ ನೀಡುತ್ತಿರುವ ಹಿನ್ನೆಲೆಯಲ್ಲಿ ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ನಡೆದ ಕೊಪ್ಪ, ಶೃಂಗೇರಿ, ನರಸಿಂಹರಾಜಪುರ ತಾಲ್ಲೂಕುಗಳ ಅಧಿಕಾರಿಗಳ ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿದರು.

ಮೂರು ತಾಲ್ಲೂಕುಗಳಿಂದ ಫಲಾನುಭವಿಗಳನ್ನು ಕರೆದುಕೊಂಡು ಬಂದು ಅವರನ್ನು ಸುರಕ್ಷಿತವಾಗಿ ಮನೆಗೆ ತಲುಪಿಸುವ ಜವಾಬ್ದಾರಿಯನ್ನು ಆಯಾ ಇಲಾಖೆಯ ಅಧಿಕಾರಿಗಳು ತೆಗೆದುಕೊಳ್ಳಬೇಕು. ನೂತನ ಸೇತುವೆಯಿಂದ ಮೀನುಗಾರಿಕೆಗೆ ಹೆಚ್ಚು ಅನುಕೂಲ ಆಗುವುದರಿಂದ ಮೀನುಗಾರಿಕೆ ಇಲಾಖೆಯವರು ಹೆಚ್ಚಿನ ಸಂಖ್ಯೆಯ ಫಲಾನುಭವಿಗಳನ್ನು ಸಭೆಗೆ ಕರೆದುಕೊಂಡು ಬರಬೇಕು.

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಕೃಷಿ ಇಲಾಖೆ, ತೋಟಗಾರಿಕಾ ಇಲಾಖೆ ಹಾಗೂ ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳು ಪ್ರಸಕ್ತ ಸಾಲಿನಲ್ಲಿ ವಿವಿಧ ಸೌಲಭ್ಯಗಳಿಗೆ ಆಯ್ಕೆಯಾದ ಫಲಾನುಭವಿಗಳನ್ನು ಕರೆದು ಕೊಂಡು ಬರಬೇಕು. ಮುಖ್ಯಮಂತ್ರಿಗಳಿಂದ ಸವಲತ್ತುಗಳನ್ನು ವಿತರಿಸಲಾಗುವುದು ಎಂದರು.

ಅಂಗನವಾಡಿ ಕಾರ್ಯಕರ್ತೆಯರು, ಆಶಾ ಕಾರ್ಯಕರ್ತೆಯರು, ವಿವಿಧ ಸಂಘ ಸಂಸ್ಥೆಗಳ ಸದಸ್ಯರು ಭಾಗವಹಿಸಲು ಕ್ರಮ ಕೈಗೊಳ್ಳಬೇಕು. ಪ್ರತಿ ಇಲಾಖೆಯ ಫಲಾನುಭವಿಗಳಿಗೆ ಪ್ರತ್ಯೇಕ ಆಸನದ ವ್ಯವಸ್ಥೆ ಮಾಡಲಾಗುವುದು. ಗ್ರಾಮೀಣ ಕುಡಿಯುವ ನೀರು ಸರಬರಾಜು ಇಲಾಖೆ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕು. ಪಟ್ಟಣ ಪಂಚಾಯಿತಿಯವರು ಸ್ವಚ್ಛತೆ ಕೈಗೊಳ್ಳಬೇಕು ಎಂದು ಸೂಚಿಸಿದರು.

ವಿವಿಧ ಇಲಾಖೆಯಿಂದ ಸೌಲಭ್ಯಗಳಿಗೆ ಆಯ್ಕೆಯಾದ ಫಲಾನುಭವಿಗಳ ಪಟ್ಟಿ ಸಿದ್ಧಪಡಿಸುವ ಜವಾಬ್ದಾರಿಯನ್ನು ಸಹಾಯಕ ಕೃಷಿ ನಿರ್ದೇಶಕರಿಗೆ ನೀಡಲಾಯಿತು.

ಸ. ಪ್ರಥಮ ದರ್ಜೆ ಕಾಲೇಜು ಕ್ರೀಡಾಂಗಣದಲ್ಲಿ ತಾತ್ಕಾಲಿಕವಾಗಿ 3 ಹೆಲಿಪ್ಯಾಡ್ ನಿರ್ಮಿಸಲಾಗಿದೆ. ಪ್ರವಾಸಿ ಮಂದಿರವನ್ನು ಸ್ವಚ್ಛಗೊಳಿಸಲಾಗಿದೆ. ಸಭೆ ನಡೆಯುವ ಸಭಾಂಗಣದ ನಕಾಶೆ ಸಿದ್ಧಪಡಿಸಲಾಗಿದೆ ಎಂದು ಲೋಕೋಪಯೋಗಿ ಇಲಾಖೆ ಇಂಜಿನಿಯರ್ ದಿನೇಶ್ ಮಾಹಿತಿ ನೀಡಿದರು.


ಉದಯವಾಹಿನಿ ಚಿತ್ರ

**ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಗಮನಹರಿಸಬೇಕು**

## ಬೃಹತ್ ತಿರಂಗಾ ರ್‍ಯಾಲಿ, ಸೈನಿಕನಿಗೆ ಅಭಿನಂದನಾ ಸಮಾರಂಭ

• **ಉದಯವಾಹಿನಿ ಗದಗ**

ಸೊರಟೂರ ಗ್ರಾಮದಲ್ಲಿ ಸೈನಿಕನಿಗೆ ಅದ್ದೂರಿ ಸ್ವಾಗತವನ್ನು ಆಚರಿಸಲಾಯಿತು. ಭಾರತೀಯ ಸೇನೆಯಲ್ಲಿ 22 ವರ್ಷ ಸೇವೆ ಸಲ್ಲಿಸಿ ತನ್ನ ಹುಟ್ಟೂರಿಗೆ ಆಗಮಿಸಿದ ಹವಾಲ್ದಾರ ಜಗದೀಶ ಸಿದ್ದಪ್ಪ ಮಳ್ಳಿ ಯವರನ್ನು ಸೊರಟೂರ ಗ್ರಾಮದ ನಾಗರಿಕರು 100 ಮೀಟರ್ ತಿರಂಗಾ ರ್‍ಯಾಲಿ ಮಾಡುವ ಮೂಲಕ ಅದ್ದೂರಿಯಾಗಿ ಸ್ವಾಗತ ಮಾಡಲಾಯಿತು.

ಈ ಸಂದರ್ಭದಲ್ಲಿ ಅಖಿಲ ಕರ್ನಾಟಕ ಮಾಜಿ ಸೈನಿಕರು ಗದಗ ಜಿಲ್ಲೆ ಹಾಗೂ ಲಕ್ಷ್ಮೇಶ್ವರ ತಾಲ್ಲೂಕು ಘಟಕದ ಸರ್ವ ಸದಸ್ಯರಿಗೆ ಸನ್ಮಾನಿಸಲಾಯಿತು. ಸೊರಟೂರ ಗ್ರಾಮದ ಮಾಜಿ ಸೈನಿಕರಾದ ಭೈರಪ್ಪ ಮಾಡಳ್ಳಿ. ಪ್ರಕಾರ ಮಾಡಳ್ಳಿ. ಪುಲಿಕೇಶಿಯ ಮೇಗೂರ. ಅಂದಾನಿಶೆಟ್ಟಿ ಚನ್ನವೀರಶೆಟ್ಟರ. ರುದ್ರಪ್ಪ ಕೊ ಕೂಸ್ಲಾಪೂರ. ಮಹಾವೀರ ಹೊಳಗಿ. ಅವರಿಗೆ ಗೌರವ ಸನ್ಮಾನ ಮಾಡಲಾಯಿತು. ಹಾಗೂ ಅ,ಕ,ರಾ,ಮಾ,ಸೈ,ಸಂಘ ಅಧ್ಯಕ್ಷರಾದ ಬಸಲಿಂಗಪ್ಪ ಬ ಮುಂಡರಗಿ, ಲಕ್ಷ್ಮೇಶ್ವರ ತಾಲ್ಲೂಕ ಅಧ್ಯಕ್ಷರಾದ ಚನ್ನಬಸಪ್ಪ ಹುಡೇದ ಅವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಗ್ರಾಮದ ಸರ್ವ ಸಂಘಟನೆಗಳು ಹಾಗೂ ಶಿಕ್ಷಣ ಪ್ರೇಮಿಗಳು, ದೇಶಭಕ್ತ ಯುವ ಮಿತ್ರರು, ಗುರು ಹಿರಿಯ ಭಾಗವಹಿಸಿದ್ದರು. ಕೆ ಎ ಬಳಿಗಾರ ಶಿಕ್ಷಕರು ಪ್ರಾಸ್ತಾವಿಕವಾಗಿ ಮಾತನಾಡಿದರು. ಬಸವರಾಜ ಶೇಲಿಯಪ್ಪನವರ ಕಾರ್ಯಕ್ರಮ ನಿರೂಪಿಸಿದರು. ಪ್ರಕಾಶ ಮಾಡಳ್ಳಿ ಸ್ವಾಗತಿಸಿದರು. ಯುವ ಮುಖಂಡರಾದ ಮಂಜುನಾಥ ಮಿರಗಾಣಿ ದೇಶಭಕ್ತಿ ದೇಶ ಪ್ರೇಮ ವಿಷಯವಾಗಿ ಮಾತನಾಡಿದರು.


ಉದಯವಾಹಿನಿ ಚಿತ್ರ

## ಸ್ವಯಂ-ಗಣತಿ ನಡೆಯುವಂತೆ ಪ್ರೋತ್ಸಾಹಿಸಿ: ಪೂಜಾರ

• **ಉದಯವಾಹಿನಿ ನವಲಗುಂದ**

ಏ 16ರಿಂದ ಮೇ 15ರವರೆಗೆ ಜನವಸತಿ ಕಟ್ಟಡಗಳ ಸ್ಥಿತಿ, ಸೌಲಭ್ಯಗಳು ಹಾಗೂ ಸ್ವತ್ತುಗಳ ಕುರಿತು ವಿವರವಾದ ಮಾಹಿತಿಯನ್ನು ಸಂಗ್ರಹಿಸುವ ಕಾರ್ಯವನ್ನು ಸಮರ್ಪಕವಾಗಿ ನಿರ್ವಹಿಸಬೇಕು ಎಂದು ಪುರಸಭೆ ಮುಖ್ಯಾಧಿಕಾರಿ ಎಸ್ ಪಿ ಪೂಜಾರ ಹೇಳಿದರು.

ಸ್ಥಳೀಯ ಪುರಸಭೆ ವ್ಯಾಪ್ತಿಯಲ್ಲಿ ಭಾರತ್ ಜನಗಣತಿ 2027ರ ಮನೆ ಪಟ್ಟಿ ಕಾರ್ಯಾಚರಣೆಯ ಮೇಲ್ವಿಚಾರಕರು ಹಾಗೂ ಗಣತಿದಾರರ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಗಣತಿದಾರರು ತಮ್ಮ ಬ್ಲಾಕ್ ಪ್ರದೇಶಗಳಲ್ಲಿ ಏ.15 ರ ವರಿಗೆ ಸ್ವಯಂ ಗಣತಿಗೆ ಮಾಡಿಕೋಳ್ಳಬಹುದು. ನಂತರ ಸಂಚರಿಸಿ ಮಾಹಿತಿ ಸಂಗ್ರಹಿಸಿಕೊಳ್ಳಬೇಕು, ಜಾಗೃತಿ ಮೂಡಿಸಿ ಹೆಚ್ಚಿನ ಪ್ರಮಾಣದಲ್ಲಿ ಸ್ವಯಂ-ಗಣತಿ ನಡೆಯುವಂತೆ ಪ್ರೋತ್ಸಾಹಿಸಬೇಕು ಎಂದರು.

ಕ್ಷೇತ್ರ ಶಿಕ್ಷಣಾಧಿಕಾರಿ ದೀಪಕ ಕುಲಕರ್ಣಿ ಮಾತನಾಡಿ ಪ್ರತಿ ಗಣತಿದಾರರು ಮನೆಮನೆಗೆ ತೆರಳಿ ಸರಿಯಾದ , ನಿಖರ ಮಾಹಿತಿ ಸಂಗ್ರಹಿಸುವ ಮೂಲಕ ಜನಗಣತಿಯ ಯಶಸ್ಸಿಗೆ ಕೈಜೋಡಿಸಬೇಕು. ಪ್ರತಿಯೊಬ್ಬ ಗಣತಿದಾರರು ತಮ್ಮ ಕರ್ತವ್ಯವನ್ನು ನಿಷ್ಠೆಯಿಂದ ಮತ್ತು ಜವಾಬ್ದಾರಿಯಿಂದ ನೆರವೇರಿಸಬೇಕು ಎಂದರು.

## ಅಭಿವೃದ್ಧಿ, ಕ್ರಾಂತಿಕಾರಿ ನಿಲುವಿನ ನಾಯಕ ಬಾಬು ಜಗಜೀವನ ರಾಮ್: ರವಿಕುಮಾರ್ ಮಲ್ಲಿಗೆ

• **ಉದಯವಾಹಿನಿ ಔರಾದ್**

ಮಾಜಿ ಉಪಪ್ರಧಾನಿ, ಹಸಿರು ಕ್ರಾಂತಿಯ ಹರಿಕಾರ ಬಾಬು ಜಗಜೀವನರಾಮ್ ಅವರು ಜನರ ಒಳಿತಾಗಿ ಕ್ರಾಂತಿಕಾರಿ ನಿಲುವು ಮತ್ತು ಅಭಿವೃದ್ಧಿಗಾಗಿ ಒಲವು ಎರಡನ್ನೂ ಮೈಗೂಡಿಸಿಕೊಂಡಿದ್ದ ಅಪ್ರತಿಮ ನಾಯಕ ಎಂದು ರವಿಕುಮಾರ್ ಮಲ್ಲಿಗೆ ತಿಳಿಸಿದರು.

ತಾಲ್ಲೂಕಿನ ಬೆಳಕುಣಿ (ಚೌ) ಗ್ರಾಮ ಪಂಚಾಯಿತಿಯಲ್ಲಿ ಆಯೋಜಿಸಿರುವ ಡಾ. ಬಾಬು ಜಗಜೀವನ ರಾಮ್ ಅವರ ಜನ್ಮದಿನಾಚರಣೆ ಉದ್ದೇಶಿಸಿ ಮಾತನಾಡಿದ ಅವರು ದೇಶಕ್ಕೆ ಸ್ವಾತಂತ್ರ್ಯ ಬಂದ ಸಂದರ್ಭದಲ್ಲಿ ಹಲವು ಗಂಭೀರ ಸಮಸ್ಯೆಗಳಿದ್ದವು. ಅವುಗಳ ನಿವಾರಣೆಯಲ್ಲಿ ಅವರ ಪಾತ್ರ ಬಹಳ ಮುಖ್ಯವಾಗಿದೆ. ಜಗಜೀವನ್ ರಾಮ್ ಅವರ ಜೀವನ ಚರಿತ್ರೆ ಅವಲೋಕಿಸಿದರೆ ದೇಶದ ಇತಿಹಾಸವೇ ಕಂಡುಬರುತ್ತದೆ ಎಂದರು. ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಆತ್ಮರಾಮ ಮಾತನಾಡಿ ಬಾಬೂಜಿ ಬಿಎಸ್ಸಿ ವ್ಯಾಸಂಗದ ವೇಳೆ ದಲಿತ ಕಾರ್ಮಿಕರನ್ನು ಒಗ್ಗೂಡಿಸಿ ಗಿರಣಿ ಮಾಲೀಕರ ವಿರುದ್ಧ ಬೃಹತ್ ಪ್ರತಿಭಟನೆ ನಡೆಸಿ ಜಯ ಸಾಧಿಸಿದರು. ಸಮಾನತೆಗಾಗಿ ಹೋರಾಡಿದ ಮಹಾನ್ ನಾಯಕ. ಅವರ ಆಶಯಗಳನ್ನು ನಾವು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ಯುವ ಪತ್ರಕರ್ತ ಅರವಿಂದ್ ಮಲ್ಲಿಗೆ ಮಾತನಾಡಿ ಕಾರ್ಮಿಕ ಸಚಿವ, ರಕ್ಷಣಾ ಸಚಿವ, ಕೃಷಿ ಸಚಿವರಾಗಿ ದೇಶಕ್ಕೆ ತಮ್ಮದೇ ಆದ ಕೊಡುಗೆ ನೀಡಿದರು. 40 ವರ್ಷ ಒಂದೇ ಲೋಕಸಭಾ ಕ್ಷೇತ್ರದಿಂದ ಗೆಲುವು ಸಾಧಿಸಿದ್ದರು. ಅವರ ನಿಧನ ನಂತರ ಅವರ ಪುತ್ರಿ ಮೀರಾ ಕುಮಾರಿ ಎರಡು ಬಾರಿ ಅದೇ ಕ್ಷೇತ್ರದಲ್ಲಿ ಸಂಸದರಾಗಿ ಆಯ್ಕೆಯಾದರು. ಅಂದರೆ ಬಾಬೂಜಿ ಅವರು ಎಷ್ಟು ಪ್ರಭಾವಿ ರಾಜಕೀಯ ನಾಯಕರು ಎಂಬುದನ್ನು ಇದು ತೋರಿಸುತ್ತದೆ ಎಂದು ಹೇಳಿದರು.

ಎಂ.ಡಿ.ನಯೂಮ್, ಸುಭಾಷ್ ಸೈನೋರೆ , ಶಿವಕಾಂತ್ ಮಾಳೆಗೆ , ಶಿವಕುಮಾರ ಸೈನೋರೆ, ಉಮಕಾಂತ್, ಮಾಳೆಗೆ, ಪೌಲ್ ಧೋಳೆ, ಜೀವನ ಮಾಳೆಗೆ, ನವೀನ್, ಅನಿಲ್ , ಮಾರುತಿ, ಶಿವಶಾಂತ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.


ಉದಯವಾಹಿನಿ ಚಿತ್ರ

**ಸಮಾಜದಲ್ಲಿರುವ ಜಾತಿ ಮತ್ತು ವರ್ಗಗಳ ನಡುವಿನ ಅಸಮಾನತೆಯನ್ನು ತೊಡೆದು ಹಾಕಿ ಸಮ ಸಮಾಜ ನಿರ್ಮಾಣ ಮಾಡುವಲ್ಲಿ ಡಾ.ಬಾಬು ಜಗಜೀವನ ರಾಂ ಅವಿರತವಾಗಿ ಶ್ರಮಿಸಿದ್ದಾರೆ. ಕಾರ್ಮಿಕರ, ಶೋಷಿತರ ಪರ ದನಿಯಾಗಿ, ರೈತರಲ್ಲಿ ಹೋರಾಟ ಮತ್ತು ಪ್ರತಿರೋಧದ ಪ್ರಜ್ಞೆ ಭಿತ್ತಿದ್ದರು. ರೈತರು ಮತ್ತು ಸೈನಿಕರಿಗೆ ಬೆನ್ನೆಲುಬಾಗಿ ಹಲವು ಅಭಿವೃದ್ಧಿ ಯೋಜನೆಗಳನ್ನು ಜಾರಿಗೊಳಿಸಿದವರು.**
**-ಅರವಿಂದ್ ಮಲ್ಲಿಗೆ ಯುವ ಪತ್ರಕರ್ತ ಬೆಳಕುಣಿ (ಚೌ)**

## ತುಂಗಭದ್ರಾ ಜಲಾಶಯದಲ್ಲಿನ ಹೂಳು ತೆರವುಗೊಳಿಸಲು ಮನವಿ

• **ಉದಯವಾಹಿನಿ ಬಳ್ಳಾರಿ**

ರಾಯಚೂರು ಜಿಲ್ಲೆ ಸಿಂಧನೂರು ಪಟ್ಟಣದಲ್ಲಿ ಶ್ರೀ ಕೃಷ್ಣದೇವರಾಯ ಸೈನಿಕ್ ಶಾಲೆಯ ಉದ್ಘಾಟನಾ ಕಾರ್ಯಕ್ರಮಕ್ಕೆ ಆಗಮಿಸಿದ್ದ ಕೇಂದ್ರದ ಸಚಿವರುಗಳಾದ, ಎಚ್. ಡಿ. ಕುಮಾರಸ್ವಾಮಿಯವರು, ಹಾಗೂ ನಾರ ಲೋಕೇಶ್ ಭೇಟಿ ಮಾಡಿ, ತುಂಗಭದ್ರಾ ಜಲಾಶಯದಲ್ಲಿ ತುಂಬಿರುವ 33 ಟಿಎಂಸಿ ಹೂಳನ್ನು ತೆರವುಗೊಳಿಸಲು ಕೇಂದ್ರ ಸರ್ಕಾರದಲ್ಲಿ ಚರ್ಚಿಸಿ ಕಾರ್ಯರೂಪಕ್ಕೆ ತರಬೇಕೆಂದು ತುಂಗಭದ್ರಾ ರೈತ ಸಂಘ. ಮನವಿ ಮಾಡಿಕೊಂಡಿತು. ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷ ಡಾ. ಪುರುಷೋತ್ತಮಗೌಡ, ಮುಖಂಡರಾದ ಎಂ. ವೀರಭದ್ರ ನಾಯಕ್ , ಜಾಲಿಹಾಳ ಶ್ರೀಧರಗೌಡ , ಕುರುಬರ ಗಾದಿಲಿಂಗಮೂರ್ತಿ , ಎಸ್. ತಿಪ್ಪೇರುದ್ರಗೌಡ ಉಪಸ್ಥಿತರಿದ್ದರು.

## ಅಕ್ರಮ ಮರಳು ಸಾಗಾಟ: ಟ್ರ್ಯಾಕ್ಟರ್ ವಶಕ್ಕೆ

• **ಉದಯವಾಹಿನಿ ಲಕ್ಷ್ಮೇಶ್ವರ**

ಪೊಲೀಸ್ ಠಾಣಾ ವ್ಯಾಪ್ತಿಯ ಅಮರಾಪುರ ರಸ್ತೆಯಲ್ಲಿ ಅಕ್ರಮವಾಗಿ ಮರಳು ಸಾಗಿಸುತ್ತಿದ್ದ ಎರಡು ಟ್ರ್ಯಾಕ್ಟರ್‌ಗಳನ್ನು ವಶಪಡಿಸಿಕೊಂಡು ಪ್ರಕರಣ ದಾಖಲಿಸಲಾಗಿದೆ. ಈ ಕುರಿತು ಪೊಲೀಸ್ ಠಾಣೆಯ ಪ್ರಕಟಣೆಯಲ್ಲಿ ಎರಡು ಟ್ರ್ಯಾಕ್ಟರ್‌ಗಳಲ್ಲಿ 1 ಕ್ಯೂಬಿಕ್ ಮರಳು ಅಕ್ರಮವಾಗಿ ಯಾವುದೇ ಪಾಸು ಪರ್ಮಿಟ್ ಇಲ್ಲದೆ ಸಾಗಿಸಲಾಗುತ್ತಿತ್ತು.

ಪಿಎಸ್‌ಐ ನಾಗರಾಜ ಗಡದ ಪ್ರಕರಣ ದಾಖಲಿಸಿಕೊಂಡು ಎರಡು ಟ್ರ್ಯಾಕ್ಟರ್‌ಗಳನ್ನು ಮಾಲು ಸಹಿತ ಜಪ್ತಿ ಮಾಡಿ ಕ್ರಮ ಕೈಗೊಳ್ಳಲು ಗಣಿ ಮತ್ತು ಭೂ ವಿಜ್ಞಾನ ಇಲಾಖೆಗೆ ಹಸ್ತಾಂತರಿಸಿದ್ದಾರೆ.

## ಅರ್ಬನ್ ಬ್ಯಾಂಕ್ ನೇಮಕಾತಿಯಲ್ಲಿ ವಿಕಲಚೇತನರಿಗೆ ಅನ್ಯಾಯ ಆರೋಪ

• **ಉದಯವಾಹಿನಿ ಜಮಖಂಡಿ**

ನಗರದ ದಿ ಜಮಖಂಡಿ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್ ವತಿಯಿಂದ 2025ನೇ ಸಾಲಿನಲ್ಲಿ 45 ಹುದ್ದೆಗಳ ನೇಮಕಾತಿ ನಡೆಸಲಾಗಿದೆ. ವಿವಿಧ ಹುದ್ದೆಗಳ ಭರ್ತಿಗೆ ಪ್ರಕಟಣೆ ಹೊರಡಿಸಿ ಲಿಖಿತ ಪರೀಕ್ಷೆ ಹಾಗೂ ಸಂದರ್ಶನದ ಮೂಲಕ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗಿದೆ

ಆದರೆ ಈ ನೇಮಕಾತಿಯಲ್ಲಿ ವಿಕಲಚೇತನರಿಗೆ ಯಾವುದೇ ಮೀಸಲಾತಿ ನೀಡಿಲ್ಲ ಎಂಬ ಆರೋಪ ಕೇಳಿಬಂದಿದೆ. ಈ ಕುರಿತು ನಗರದ ಖಾಸಗಿ ಲಾಡ್ಜ್‌ನಲ್ಲಿ ಸುದ್ದಿಗೋಷ್ಠಿ ನಡೆಸಿದ ಸಾಮಾಜಿಕ ಕಾರ್ಯಕರ್ತ ಗಿರಮಲ್ಲಪ್ಪ ಕಡಪಟ್ಟಿ ಮಾತನಾಡಿ, ನೇಮಕಾತಿ ಪ್ರಕಟಣೆಯಲ್ಲೇ ವಿಕಲಚೇತನರಿಗೆ ಅವಕಾಶ ನೀಡದೇ ಅನ್ಯಾಯ ಮಾಡಲಾಗಿದೆ ಎಂದು ದೂರಿದರು. ಈ ಸಂಬಂಧ ಸಹಕಾರಿ ಇಲಾಖೆಯ ಅಸಿಸ್ಟೆಂಟ್ ರಿಜಿಸ್ಟ್ರಾರ್ ಹಾಗೂ ಅಂಗವಿಕಲರ ಆಯುಕ್ತರಿಗೆ ದೂರು ಸಲ್ಲಿಸಲಾಗಿದ್ದು, ಬ್ಯಾಂಕ್ ಅಧಿಕಾರಿಗಳು ಈ ಆದೇಶ ನಮ್ಮ ಬ್ಯಾಂಕ್‌ಗೆ ಅನ್ವಯಿಸುವುದಿಲ್ಲ ಎಂದು ಲಿಖಿತ ಉತ್ತರ ನೀಡಿದ್ದಾರೆ ಎಂದು ಹೇಳಿದರು. ಇನ್ನೂ, ಅಸಿಸ್ಟೆಂಟ್ ರಿಜಿಸ್ಟ್ರಾರ್ ಕಡೆಯಿಂದ ನ್ಯಾಯ ಬೇಕಿದ್ದರೆ ನ್ಯಾಯಾಲಯವನ್ನು ಸಂಪರ್ಕಿಸಿ ಎಂಬ ಉತ್ತರ ದೊರೆತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ನ್ಯಾಯವಾದಿ ಶಂಕರ ಲೀಲೆ ಮಾತನಾಡಿ, ಸರ್ಕಾರದ 2012 ಹಾಗೂ 2013ರ ಸುತ್ತೋಲೆಗಳ ಪ್ರಕಾರ ನೇಮಕಾತಿಯಲ್ಲಿ ವಿಕಲಚೇತನರಿಗೆ ಮೀಸಲಾತಿ ನೀಡಬೇಕಾಗಿದೆ. ಆದರೆ ಈ ನಿಯಮಗಳನ್ನು ಉಲ್ಲಂಘಿಸಿರುವ ಶಂಕೆ ಇರುವುದಾಗಿ ಹೇಳಿದರು. ಪ್ರಥಮ ದೃಷ್ಟಿಯಲ್ಲಿ ನೇಮಕಾತಿ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಕೊರತೆಯಿದ್ದು, ಅನುಕೂಲಕರ ಅಭ್ಯರ್ಥಿಗಳನ್ನು ಆಯ್ಕೆ ಮಾಡಿರುವ ಅನುಮಾನ ವ್ಯಕ್ತವಾಗಿದೆ ಎಂದರು.

ವಿಕಲಚೇತನ ಅಭ್ಯರ್ಥಿ ಹನುಮಂತ ಕಡ್ಲಿ ಸೇರಿದಂತೆ ಹಲವರು ಈ ನೇಮಕಾತಿಯಲ್ಲಿ ಅವಕಾಶ ಸಿಕ್ಕಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಈ ಹಿನ್ನೆಲೆಯಲ್ಲಿ ವಿಕಲಚೇತನ ಅಭ್ಯರ್ಥಿಗಳಿಗೆ ನ್ಯಾಯ ದೊರಕಿಸಲು ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ ಸಲ್ಲಿಸಲು ತೀರ್ಮಾನಿಸಿರುವುದಾಗಿ ತಿಳಿಸಿದರು.

# ಜಾನುವಾರು ಸಂತೆಗೆ ಜೀವಕಳೆ: ಎತ್ತುಗಳಿಗೆ ಎಲ್ಲಿಲ್ಲದ ಬೇಡಿಕೆ

### ಟ್ರ್ಯಾಕ್ಟರ್ ಹಾಗೂ ಹಲವಾರು ಯಂತ್ರಗಳ ಬಳಕೆ ಮಾಡುವ ಸಂದರ್ಭದಲ್ಲಿಯೂ ರೈತರ ಆಪ್ತಮಿತ್ರ, ಎತ್ತುಗಳ ಬೇಡಿಕೆ ಕಡಿಮೆಯಾಗಿಲ್ಲ

• **ಉದಯವಾಹಿನಿ ಔರಾದ್**

ಮುಂಗಾರು ಹಂಗಾಮು ಆರಂಭವಾದರೆ ಸಾಕು ಔರಾದ್ ಪಟ್ಟಣದ ಎಪಿಎಂಸಿ ಆವರಣದಲ್ಲಿರುವ ಜಾನುವಾರು ಸಂತೆಗೆ ಮತ್ತೆ ಜೀವಕಳೆ ಬಂದಂತಾಗಿದೆ. ಅದರಲ್ಲೂ ಮುಂಗಾರು ಪೂರ್ವ ಮಳೆ ಆದರೆ ಸಾಕು ರೈತರ ಜೀವನಾಡಿ ಎತ್ತುಗಳಿಗೆ ಎಲ್ಲಿಲ್ಲದ ಬೇಡಿಕೆ ಬಂದಿದೆ.

ರೈತರ ಜೀವನಾಡಿ ಎತ್ತುಗಳಿಗೆ ಹೇಳಿಕೊಳ್ಳುವ ಬೇಡಿಕೆ ಮತ್ತು ಬೆಲೆ ಇಲ್ಲದಂತಾಗಿತ್ತು. ಆದರೆ, ಪ್ರಸಕ್ತ ವರ್ಷ ಮುಂಗಾರು ಆರಂಭಕ್ಕೂ ಮುನ್ನ ಮಳೆರಾಯ ದರ್ಶನ ನೀಡಿದ ಹಿನ್ನೆಲೆಯಲ್ಲಿ ರೈತರ ಮುಖದಲ್ಲಿ ಮತ್ತೆ ಮಂದಹಾಸ ಮೂಡಿದಂತಾಗಿದೆ. ಹೀಗಾಗಿ ಎತ್ತುಗಳ ವ್ಯಾಪಾರ ಜೋರಾಗಿ ನಡೆಯುತ್ತಿದೆ.

**ರೈತರ ಮುಖದಲ್ಲಿ ಮಂದಹಾಸ**

**ಕೃಷಿ ಚಟುವಟಿಕೆಗೆ ಎತ್ತುಗಳೇ ಜೀವಾಳ:** ಆಧುನಿಕ ಯುಗದಲ್ಲಿ ಸಹ ಟ್ರ್ಯಾಕ್ಟರ್ ಹಾಗೂ ಹಲವಾರು ಯಂತ್ರಗಳ ಬಳಕೆ ಮಾಡುವ ಸಂದರ್ಭದಲ್ಲಿಯೂ ರೈತರ ಆಪ್ತಮಿತ್ರ ಎತ್ತುಗಳ ಬೇಡಿಕೆ ಕಡಿಮೆಯಾಗಿಲ್ಲ, ಹೆಚ್ಚು ಜಮೀನು ಹೊಂದಿದವರು ಮಾತ್ರ ಟ್ರ್ಯಾಕ್ಟರ್‌ಗಳ ಮೊರೆ ಹೋಗುತ್ತಾರೆ. ಆದರೆ, ಕಡಿಮೆ ಜಮೀನು ಇರುವವರು ಎತ್ತುಗಳ ಮೂಲಕ ಉಳುಮೆ ಮಾಡುತ್ತಾರೆ. ಕೆಲವು ಭಾಗದಲ್ಲಿ ಟ್ರ್ಯಾಕ್ಟರ್‌ಗಳು ಇದ್ದರು ಸಹ ಎತ್ತುಗಳ ಮೂಲಕ ಬಿತ್ತನೆ ಮಾಡಿದರೆ ಉತ್ತಮ ಫಸಲು ಬರುತ್ತದೆ ಎಂಬುದು ರೈತರ ಅಭಿಪ್ರಾಯವಾಗಿದೆ. ತಂತ್ರಜ್ಞಾನ ಎಷ್ಟೇ ಮುಂದುವರಿದರು ಎತ್ತುಗಳ ಬೇಡಿಕೆ ಕಡಿಮೆಯಾಗುವುದಿಲ್ಲ ಎನ್ನುತ್ತಾರೆ ರೈತರು.

**ಪ್ರತಿ ಜೋಡಿ ಎತ್ತುಗಳ ಪರೀಕ್ಷೆ:** ಜಾನುವಾರು ಸಂತೆ ಅಂದರೆ ಸಾಕು ಅಲ್ಲಿ ವಿವಿಧ ಎತ್ತುಗಳ ಜೋಡಿಗಳನ್ನು ಕಾಣಬಹುದು. ಸಂತೆಯಲ್ಲಿ ತಾಲ್ಲೂಕಿನ ರೈತರು ಇಷ್ಟ ಪಟ್ಟ ಎತ್ತುಗಳನ್ನು ಪರೀಕ್ಷೆ ಮಾಡುತ್ತಾರೆ. ಎತ್ತುಗಳ ಹಲ್ಲು ಕಾಲು, ಅಂಗಾಗಳ ಪರೀಕ್ಷೆ ಮಾಡಲಾಗುತ್ತದೆ. ಎತ್ತುಗಳನ್ನು ಹೂಡಿ ನಾಲ್ಕು ಮಂದಿ ಚಿಕ್ಕಡಿಯಲ್ಲಿ ಕುಳಿತು ಅವುಗಳ ಪರೀಕ್ಷೆ ಮಾಡುತ್ತಾರೆ. ನಂತರ ಎತ್ತು ಖರೀದಿಸಲು ರೈತರು ಮುಂದಾಗುತ್ತಾರೆ.

**ವಿವಿಧ ಸಲಕರಣೆ ಮಾರಾಟ:** ನಗರದ ಎಪಿಎಂಸಿ ಆವರಣದಲ್ಲಿ ನಡೆಯುತ್ತಿರುವ ಜಾನುವಾರ ಸಂತೆಯಲ್ಲಿ ಎತ್ತುಗಳಿಗೆ ಬೇಕಾದ ವಿವಿಧ ರೀರಿಯ ಹಗ್ಗಾ, ಗಂಟೆ, ಬಾರಕೋಲ, ಕರಿದಾರ ಸೇರಿದಂತೆ ವಿವಿಧ ವಸ್ತುಗಳ ಮಾರಾಟ ಜೋರಾಗಿತ್ತು. ಹಾಗೆ ಜಾನುವಾರ ಸಂತೆಯಲ್ಲಿ ಬಿಸಿಲಿನಿಂದ ಜೋಡಿ ಎತ್ತುಗಳ ಸಾಕಷ್ಟು ಕಷ್ಟ ಪಡುತ್ತದೆ. ಹೀಗಾಗಿ ಎಪಿಎಂಸಿ ಆವರಣದಲ್ಲಿ ಎತ್ತುಗಳಿಗೆ ನೆರಳಿನ ವ್ಯವಸ್ಥೆ ಮಾಡಲು ಅವಕಾಶ ಮಾಡಬೇಕು ಎಂದು ಮಾಲೀಕರು ಒತ್ತಾಯಿಸಿದ್ದಾರೆ.

**1.ಸ20 ಲಕ್ಷಕ್ಕೆ ಮಾರಾಟ:** ಔರಾದ್ ಎಪಿಎಂಸಿ ಆವರಣದ ದನದ ಸಂತೆಯಲ್ಲಿ ಜೋಡಿ ಎತ್ತುಗಳ ಬೆಲೆ ಆಕಾಶ ಮುಟ್ಟುತ್ತಿದ್ದರೂ ರೈತರ ಉತ್ಸಾಹ ಮಾತ್ರ ಕುಗ್ಗಿಲ್ಲ. ಆಕಾರ, ಬಣ್ಣ ಮತ್ತು ಬಲವನ್ನು ನೋಡಿ ಎತ್ತುಗಳ ಬೆಲೆ ನಿರ್ಧಾರವಾಗುತ್ತಿದೆ.

ಸಾಮಾನ್ಯ ಜೋಡಿ ಎತ್ತುಗಳು ರೂ. 80 ಸಾವಿರದಿಂದ ಆರಂಭವಾಗಿ, ಉತ್ತಮ ತಳಿಯ ಹಾಗೂ ಬಲಿಷ್ಠ ಎತ್ತುಗಳು ಮಾರಾಟವಾಗುತ್ತಿವೆ. ರೂ.1.20 ಲಕ್ಷಗಳವರೆಗೂ ಇಲ್ಲಿನ ವ್ಯಾಪಾರ ಕೇವಲ ನೋಟಕ್ಕೆ ಸೀಮಿತವಾಗಿಲ್ಲ, ರೈತರು ಅತ್ಯಂತ ಚತುರತೆಯಿಂದ ಎತ್ತುಗಳನ್ನು ಪರೀಕ್ಷಿಸುತ್ತಿದ್ದಾರೆ. ಭೂಮಿ ತಾಯಿಯನ್ನು ಉಳುಮೆ ಮಾಡಲು ಸಮರ್ಥವಾಗಿರುವ ಎತ್ತುಗಳನ್ನು ಆಯ್ದುಕೊಳ್ಳುವಲ್ಲಿ ರೈತರು ಮಗ್ನರಾಗಿದ್ದಾರೆ.


ಉದಯವಾಹಿನಿ ಚಿತ್ರ

**ಅಂತರರಾಜ್ಯ ಜಾನುವಾರು ಮಾರುಕಟ್ಟೆ**

**ಔರಾದ್ ಜಾನುವಾರು ಮಾರುಕಟ್ಟೆ ಅಂತರರಾಜ್ಯ ಜಾನುವಾರು ಮಾರುಕಟ್ಟೆ. ಇಲ್ಲಿ ಮಹಾರಾಷ್ಟ್ರ, ತೆಲಂಗಾಣ ಸೇರಿದಂತೆ ವಿವಿಧೆಡೆಯ ಸಾವಿರಾರು ಜಾನುವಾರುಗಳು ಮತ್ತು ವ್ಯಾಪಾರಸ್ಥರು ಬರುವರು. ಗಡಿ ಭಾಗದ ದೊಡ್ಡ ಮಾರುಕಟ್ಟೆ ಈ ಮಾರುಕಟ್ಟೆಯು ಪ್ರತಿ ಸೋಮವಾರ ನಡೆಯುತ್ತದೆ.**

**ನಮ್ಮ ಜಮೀನಿನಲ್ಲಿ ಎತ್ತುಗಳ ಮೂಲಕವೇ ಉಳುಮೆ ಕಾರ್ಯ ಮಾಡಿ ಉತ್ತಮ ಬೆಳೆ ತೆಗೆಯುತ್ತಿದ್ದೇವೆ. ನಗರದ ಜಾನುವಾರ ಸಂತೆಯಲ್ಲಿ ಉತ್ತಮ ಕಳೆಯ ಎತ್ತುಗಳನ್ನು ಖರೀದಿ ಮಾಡಲು ಬಂದಿದ್ದೇವೆ. ಕೃಷಿ ಚಟುವಟಿಕೆ ಚುರುಕುಗೊಂಡ ಹಿನ್ನೆಲೆಯಲ್ಲಿ ಉಳುಮೆ ಎತ್ತುಗಳಿಗೆ ಬೇಡಿಕೆ ಹೆಚ್ಚಾಗಿದೆ. ಉತ್ತಮ ತಳಿಯ ಎತ್ತುಗಳಿಗೆ ದುಬಾರಿ ಬೆಲೆ ಕೊಟ್ಟು ಖರೀದಿ ಮಾಡುತ್ತಿದ್ದೇವೆ. -ಸಂತೋಷ ಶೇಟಕಾರ್ , ಸ್ಥಳೀಯ ರೈತ ಔರಾದ್**

### ಒಬ್ಬರ ಧರ್ಮವನ್ನು ಲೆಕ್ಕಿಸದೆ ಎಲ್ಲರನ್ನೂ ಒಟ್ಟಿಗೆ ತೆಗೆದುಕೊಳ್ಳುವುದು ಬಿಜೆಪಿಯ ನೀತಿಯಾಗಿದೆ: ನಿತಿನ್ ಗಡ್ಕರಿ

# ನುಸುಳುಕೋರರನ್ನು ವಿರೋಧಿಸುತ್ತೇವೆ ಮುಸ್ಲಿಮರನ್ನಲ್ಲ

**ನವದೆಹಲಿ:** ಬಿಜೆಪಿ ನುಸುಳುಕೋರರನ್ನು ವಿರೋಧಿಸುತ್ತದೆ ಆದರೆ ಮುಸ್ಲಿಮರನ್ನು ವಿರೋಧಿಸುವುದಿಲ್ಲ ಎಂದು ಕೇಂದ್ರ ಸಚಿವ ನಿತಿನ್ ಗಡ್ಕರಿ ಪ್ರತಿಪಾದಿಸಿದ್ದಾರೆ. ಅಸ್ಸಾಂ ಮತ್ತು ಪಶ್ಚಿಮ ಬಂಗಾಳದಲ್ಲಿ ಪಕ್ಷದ ಚುನಾವಣಾ ನಿರೀಕ್ಷೆಗಳ ಬಗ್ಗೆ ವಿಶ್ವಾಸ ವ್ಯಕ್ತಪಡಿಸಿದರು. ಅಸ್ಸಾಂನಲ್ಲಿ ವಿಧಾನಸಭಾ ಚುನಾವಣೆ ಏಪ್ರಿಲ್ 9 ರಂದು ನಡೆಯಲಿದ್ದು, ಪಶ್ಚಿಮ ಬಂಗಾಳದಲ್ಲಿ ಏಪ್ರಿಲ್ 23 ಮತ್ತು 29 ರಂದು 2 ಹಂತಗಳಲ್ಲಿ ಮತದಾನ ನಡೆಯಲಿದ್ದು, ಮೇ 4 ರಂದು ಎಣಿಕೆ ನಡೆಯಲಿದೆ.


ಅಸ್ಸಾಂ ಮತ್ತು ಪಶ್ಚಿಮ ಬಂಗಾಳ ಎರಡರಲ್ಲೂ ಗೆಲ್ಲುತ್ತೇವೆ

ನಾವು ಅಸ್ಸಾಂ ಮತ್ತು ಪಶ್ಚಿಮ ಬಂಗಾಳ ಎರಡರಲ್ಲೂ ಗೆಲ್ಲುತ್ತೇವೆ ಎಂದು ನಾನು ಬಲವಾಗಿ ನಂಬುತ್ತೇನೆ. ಒಬ್ಬರ ಧರ್ಮವನ್ನು ಲೆಕ್ಕಿಸದೆ ಎಲ್ಲರನ್ನೂ ಒಟ್ಟಿಗೆ ತೆಗೆದುಕೊಳ್ಳುವುದು ಬಿಜೆಪಿಯ ನೀತಿಯಾಗಿದೆ. ನಾವು ನುಸುಳುಕೋರರನ್ನು ವಿರೋಧಿಸುತ್ತೇವೆ ಆದರೆ ಮುಸ್ಲಿಮರನ್ನು ವಿರೋಧಿಸುವುದಿಲ್ಲ ಎಂದು ಗಡ್ಕರಿ ಪಿಟಿಐಗೆ ನೀಡಿದ ಸಂದರ್ಶನದಲ್ಲಿ ಹೇಳಿದರು.

ಪಕ್ಷದ ಅಭಿವೃದ್ಧಿಯ ಧ್ಯೇಯವನ್ನು ಎತ್ತಿ ತೋರಿಸುತ್ತಾ, ದೊಡ್ಡ ಪ್ರಮಾಣದ ಮೂಲಸೌಕರ್ಯ ಹೂಡಿಕೆಗಳು ಮತ್ತು ಆಡಳಿತ-ಕೇಂದ್ರಿತ ವಿಧಾನವು ಬಿಜೆಪಿಯ ಪ್ರಚಾರ ಕಾರ್ಯತಂತ್ರದ ಪ್ರಮುಖ ಆಧಾರಸ್ತಂಭಗಳಾಗಿವೆ ಎಂದು ಹೇಳಿದರು. ಅಸ್ಸಾಂ ಸೇರಿದಂತೆ ಈಶಾನ್ಯ ಪ್ರದೇಶದಾದ್ಯಂತ ಸುಮಾರು 5 ಲಕ್ಷ ಕೋಟಿ ರೂ. ಮೌಲ್ಯದ ಯೋಜನೆಗಳನ್ನು ಜಾರಿಗೆ ತರಲಾಗುತ್ತಿದೆ.

ಈ ಉಪಕ್ರಮಗಳು ವಿಶೇಷವಾಗಿ ರಸ್ತೆ ಸಾರಿಗೆ, ಹೆದ್ದಾರಿಗಳು ಮತ್ತು ಲಾಜಿಸ್ಟಿಕ್ಸ್‌ನಲ್ಲಿ ಸಂಪರ್ಕವನ್ನು ಪರಿವರ್ತಿಸುವುದು, ವ್ಯಾಪಾರವನ್ನು ಹೆಚ್ಚಿಸುವುದು ಮತ್ತು ಆರ್ಥಿಕ ಬೆಳವಣಿಗೆಯನ್ನು ವೇಗಗೊಳಿಸುವ ಗುರಿಯನ್ನು ಹೊಂದಿವೆ. ಈ ನಿರಂತರ ಪ್ರಯತ್ನವು ಐತಿಹಾಸಿಕವಾಗಿ ಸಂಪರ್ಕ ಸವಾಲುಗಳನ್ನು ಎದುರಿಸಿದ ಪ್ರದೇಶವಾದ ಅಸ್ಸಾಂ ಮತ್ತು ಈಶಾನ್ಯದಲ್ಲಿ ಮೂಲಸೌಕರ್ಯದ ಮುಖವನ್ನು ಬದಲಾಯಿಸುತ್ತದೆ ಎಂದು ಅವರು ಹೇಳಿದರು.

ಹಿಮಂತ ಬಿಸ್ವಾ ಶರ್ಮಾ ನೇತೃತ್ವದ ಸರ್ಕಾರವು ತನ್ನ ಅಭಿವೃದ್ಧಿ ದಾಖಲೆ ಮತ್ತು ಕಲ್ಯಾಣ ಉಪಕ್ರಮಗಳನ್ನು ಎತ್ತಿ ತೋರಿಸುವ ಮೂಲಕ ಅಧಿಕಾರವನ್ನು ಉಳಿಸಿಕೊಳ್ಳಲು ಪ್ರಯತ್ನಿಸುತ್ತಿರುವುದರಿಂದ ಈ ಹೇಳಿಕೆಗಳು ಮಹತ್ವದ್ದಾಗಿವೆ. ಪಕ್ಷದ ನೀತಿಯಲ್ಲಿ ಒಳನುಸುಳುವಿಕೆ ಕೇಂದ್ರಬಿಂದುವಾಗಿದೆ ಎಂದು ಗಡ್ಕರಿ ಪುನರುಚ್ಚರಿಸಿದರು. ಎಲ್ಲರನ್ನೂ ಒಟ್ಟಿಗೆ ಕೊಂಡೊಯ್ಯುವುದು ಬಿಜೆಪಿಯ ನೀತಿಯಾಗಿದೆ ಎಂದು ಅವರು ಹೇಳಿದರು, ಪಕ್ಷದ ವಿರೋಧವು ಯಾವುದೇ ಧಾರ್ಮಿಕ ಸಮುದಾಯದ ವಿರುದ್ಧವಲ್ಲ,



> ಸುಮಾರು 1.5 ಲಕ್ಷ ಕೋಟಿ ರೂ. ಮೌಲ್ಯದ ಮೂಲಸೌಕರ್ಯ ಯೋಜನೆಗಳು ಈಗಾಗಲೇ ಪೂರ್ಣಗೊಂಡಿವೆ, ಆದರೆ 1.5 ಲಕ್ಷದಿಂದ 2 ಲಕ್ಷ ಕೋಟಿ ರೂ. ಮೌಲ್ಯದ ಯೋಜನೆಗಳು ಅನುಷ್ಠಾನ ಹಂತದಲ್ಲಿವೆ. ಇದಲ್ಲದೆ, ಇನ್ನೂ 2 ಲಕ್ಷ ಕೋಟಿ ರೂ. ಮೌಲ್ಯದ ಯೋಜನೆಗಳು ಪೈಪ್‌ಲೈನ್‌ನಲ್ಲಿವೆ.
> -ನಿತಿನ್ ಗಡ್ಕರಿ ಕೇಂದ್ರ ಸಚಿವ

ಒಳನುಸುಳುವಿಕೆಗೆ ನಿರ್ದೇಶಿಸಲ್ಪಟ್ಟಿದೆ ಎಂದು ಸ್ಪಷ್ಟಪಡಿಸಿದರು. ಇತ್ತೀಚೆಗೆ ಅಸ್ಸಾಂನಲ್ಲಿ ನಡೆದ ರ್‍ಯಾಲಿಯನ್ನುದ್ದೇಶಿಸಿ ಮಾತನಾಡಿದ ಗಡ್ಕರಿ, ಭಾರತವು ಹಂಚಿಕೆಯ ಪರಂಪರೆಯನ್ನು ಹೊಂದಿರುವ ಜನರಿಗೆ ಆಶ್ರಯ ನೀಡಬಹುದು, ಆದರೆ ಅಕ್ರಮ ಪ್ರವೇಶವನ್ನು ಸ್ವೀಕರಿಸಲು ಸಾಧ್ಯವಿಲ್ಲ ಏಕೆಂದರೆ ಅದು ದೇಶವನ್ನು ಧರ್ಮಶಾಲೆ ಆಗಿ ಪರಿವರ್ತಿಸುತ್ತದೆ ಎಂದು ಹೇಳಿದರು. ರಾಜ್ಯದಲ್ಲಿ ಸ್ಪರ್ಧೆ ತೀವ್ರವಾಗಿದೆ ಎಂದು ಒಪ್ಪಿಕೊಂಡರೂ, ಪಕ್ಷವು ಅನಗತ್ಯ ರಾಜಕೀಯ ಮುಖಾಮುಖಿಗಿಂತ ಆಡಳಿತ ಮತ್ತು ಅಭಿವೃದ್ಧಿಯ ಮೇಲೆ ಕೇಂದ್ರೀಕರಿಸುತ್ತದೆ ಎಂದು ಅವರು ಹೇಳಿದರು. 2021 ರ ಚುನಾವಣೆಯಲ್ಲಿ ಪ್ರಮುಖ ವಿರೋಧ ಪಕ್ಷವಾಗಿ ಹೊರಹೊಮ್ಮಿದ ನಂತರ ಬಿಜೆಪಿ ರಾಜ್ಯದಲ್ಲಿ ತನ್ನ ಹೆಜ್ಜೆಗುರುತನ್ನು ವಿಸ್ತರಿಸಲು ಪ್ರಯತ್ನಿಸುತ್ತಿದೆ. ವಿಧಾನಸಭಾ ಚುನಾವಣೆಗೆ ಮುನ್ನ ಮತದಾರರನ್ನು ನಿರ್ಮೂಲನೆ ಮಾಡಲು ಬಿಜೆಪಿ ನೇತೃತ್ವದ ಕೇಂದ್ರವು ನಡೆಸುತ್ತಿರುವ ಮೂಕ, ಅದೃಶ್ಯ ಮತದಾರರ ಪಟ್ಟಿ ಪರಿಷ್ಕರಣೆ ತಂತ್ರವಾಗಿದೆ ಎಂಬ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರ ಆರೋಪಗಳ ಬಗ್ಗೆ ಕೇಳಿದಾಗ, ಗಡ್ಕರಿ ಅವರು ತಮ್ಮ ಪಕ್ಷವು ನೀತಿ ನಿರೂಪಣೆಯಲ್ಲಿ ರಾಷ್ಟ್ರೀಯ ಹಿತಾಸಕ್ತಿಗೆ ಆದ್ಯತೆ ನೀಡಿದೆ ಎಂದು ಹೇಳಿದರು.

**ವಿವಿಧತೆಯಲ್ಲಿ ಏಕತೆ**

**ವಿವಿಧತೆಯಲ್ಲಿ ಏಕತೆ ನಮ್ಮ ಮೂಲತತ್ವ ಎಂದು ಪ್ರತಿಪಾದಿಸಿದ ಅವರು, ಬಿಜೆಪಿ ಯಾವುದೇ ಜಾತಿ, ಧರ್ಮ ಅಥವಾ ಭಾಷೆಗೆ ವಿರುದ್ಧವಾಗಿಲ್ಲ ಮತ್ತು ಸಂವಿಧಾನದ ಪ್ರಕಾರ ಹಕ್ಕುಗಳನ್ನು ನೀಡುವುದನ್ನು ಬೆಂಬಲಿಸುತ್ತದೆ ಎಂದು ಹೇಳಿದರು. ಪೌರತ್ವ (ತಿದ್ದುಪಡಿ) ಕಾಯ್ದೆಯಡಿ ಕಿರುಕುಳಕ್ಕೊಳಗಾದ ಅಲ್ಪಸಂಖ್ಯಾತರಿಗೆ ನೀಡಲಾಗುವ ಪೌರತ್ವವನ್ನು ಅವರು ಸ್ಪಷ್ಟವಾಗಿ ಉಲ್ಲೇಖಿಸುತ್ತಿದ್ದರು.ಪಶ್ಚಿಮ ಬಂಗಾಳದಲ್ಲಿ, ಮತದಾರರಲ್ಲಿ ರಾಜಕೀಯ ಬದಲಾವಣೆಯ ಬಯಕೆ ಹೆಚ್ಚುತ್ತಿದೆ ಎಂದು ಗಡ್ಕರಿ ಹೇಳಿಕೊಂಡರು. ಜನರು ಬದಲಾವಣೆಯ ಪರವಾಗಿದ್ದಾರೆ ಎಂದು ಅವರು ಹೇಳಿದರು, ಬಿಜೆಪಿ ಗಮನಾರ್ಹ ಲಾಭಗಳನ್ನು ಗಳಿಸುತ್ತದೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು.**

## ಹಾರ್ಮುಜ್ ಜಲಸಂಧಿ ಮುಕ್ತಗೊಳಿಸುವಂತೆ ಇರಾನ್‌ಗೆ ಟ್ರಂಪ್ 48 ಗಂಟೆಗಳ ಅಂತಿಮ ಗಡುವು

**ಹೊಸದಿಲ್ಲಿ :** ವಿಶ್ವದ ಪ್ರಮುಖ ತೈಲ ಸಾಗಾಣಿಕಾ ಮಾರ್ಗವಾದ 'ಹಾರ್ಮುಜ್ ಜಲಸಂಧಿ'ಯನ್ನು ಕೂಡಲೇ ಮುಕ್ತಗೊಳಿಸುವಂತೆ ಅಥವಾ ಶಾಂತಿ ಒಪ್ಪಂದಕ್ಕೆ ಬರುವಂತೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಇರಾನ್‌ಗೆ 48 ಗಂಟೆಗಳ ಕಠಿಣ ಗಡುವು ನೀಡಿದ್ದಾರೆ. ಒಂದು ವೇಳೆ ಈ ಅವಧಿಯೊಳಗೆ ಇರಾನ್ ಸ್ಪಂದಿಸದಿದ್ದರೆ ಆ ದೇಶದ ಮೇಲೆ ಭೀಕರ ದಾಳಿ ನಡೆಸಲಾಗುವುದು ಎಂದು ಅವರು ಎಚ್ಚರಿಸಿದ್ದಾರೆ.

ತಮ್ಮ 'ಟ್ರೂತ್ ಸೋಶಿಯಲ್' ಜಾಲತಾಣದಲ್ಲಿ ಈ ಬಗ್ಗೆ ಬರೆದುಕೊಂಡಿರುವ ಟ್ರಂಪ್, ಇರಾನ್‌ಗೆ ಒಪ್ಪಂದ ಮಾಡಿಕೊಳ್ಳಲು ಅಥವಾ ಹಾರ್ಮುಜ್ ಜಲಸಂಧಿಯನ್ನು ತೆರೆಯಲು ನಾನು ನೀಡಿದ್ದ 10 ದಿನಗಳ ಸಮಯ ಮುಗಿಯುತ್ತಾ ಬಂದಿದೆ. ಈಗ ಕೇವಲ 48 ಗಂಟೆಗಳು ಮಾತ್ರ ಬಾಕಿ ಇವೆ, ಇಲ್ಲದಿದ್ದರೆ ಅವರ ಮೇಲೆ ನರಕವೇ ಕುಸಿಯಲಿದೆ. ಈ ಹಿಂದೆ ಮಾರ್ಚ್ 26 ರಂದು ನೀಡಿದ್ದ 10 ದಿನಗಳ ಕಾಲಾವಕಾಶ ಏಪ್ರಿಲ್ 6 ಕ್ಕೆ ಮುಕ್ತಾಯವಾಗಲಿದ್ದು, ಆ ಹಿನ್ನೆಲೆಯಲ್ಲಿ ಟ್ರಂಪ್ ಈ ಅಂತಿಮ ಎಚ್ಚರಿಕೆ ನೀಡಿದ್ದಾರೆ.

**ಇರಾನ್ ತಿರುಗೇಟು:** ಟ್ರಂಪ್ ಎಚ್ಚರಿಕೆಯನ್ನು ಇರಾನ್ ತಕ್ಷಣವೇ ತಿರಸ್ಕರಿಸಿದೆ. ಅಮೆರಿಕ ಅಧ್ಯಕ್ಷರ ಈ ನಡೆ ಅಸಮತೋಲನದಿಂದ ಕೂಡಿದೆ ಮತ್ತು ಮೂರ್ಖತನದ ಪರಮಾವಧಿ ಎಂದು ಇರಾನ್‌ನ ಮಿಲಿಟರಿ ಕಮಾಂಡ್ ಟೀಕಿಸಿದೆ. ಟ್ರಂಪ್ ಅವರ ಬೆದರಿಕೆಗೆ ಪ್ರತಿಕ್ರಿಯಿಸಿರುವ ಇರಾನ್ ಸೇನಾ ಕಮಾಂಡರ್ ಅಲಿ ಅಬ್ದುಲ್ಲಾಹಿ , ಅಮೆರಿಕ ಅಥವಾ ಇಸ್ರೇಲ್ ನಮ್ಮ ದೇಶದ ಮೂಲಸೌಕರ್ಯಗಳ ಮೇಲೆ ದಾಳಿ ನಡೆಸಿದರೆ, ಪಶ್ಚಿಮ ಏಷ್ಯಾದಲ್ಲಿರುವ ಅಮೆರಿಕದ ಎಲ್ಲಾ ಸೇನಾ ನೆಲೆಗಳ ಮೇಲೆ ನಾವು ಭೀಕರವಾಗಿ ದಾಳಿ ನಡೆಸುತ್ತೇವೆ. ಅಮೆರಿಕಕ್ಕೆ ನರಕದ ಬಾಗಿಲುಗಳು ತೆರೆಯಲಿವೆ ಎಂದು ಪ್ರತಿ ಎಚ್ಚರಿಕೆ ನೀಡಿದ್ದಾರೆ. ಫೆಬ್ರವರಿ ಕೊನೆಯಲ್ಲಿ ಆರಂಭವಾದ ಅಮೆರಿಕ-ಇಸ್ರೇಲ್ ಮತ್ತು ಇರಾನ್ ನಡುವಿನ ಸಂಘರ್ಷದಿಂದಾಗಿ ಇರಾನ್ ಹಾರ್ಮುಜ್ ಜಲಸಂಧಿಯನ್ನು ಬಂದ್ ಮಾಡಿದೆ. ಇದರಿಂದಾಗಿ

- ಜಾಗತಿಕವಾಗಿ ಪ್ರಮುಖವಾಗಿರುವ ಹಾರ್ಮುಜ್ ಜಲಸಂಧಿಯನ್ನು ಕೂಡಲೇ ಮುಕ್ತಗೊಳಿಸಿ
- ಅಮೆರಿಕ ಅಧ್ಯಕ್ಷ ಟ್ರಂಪ್ ಇರಾನ್‌ಗೆ 48 ಗಂಟೆಗಳ ಗಡುವು
- ಟ್ರಂಪ್ ಎಚ್ಚರಿಕೆಯನ್ನು ಇರಾನ್ ತಿರಸ್ಕರಿಸಿದೆ

ಜಾಗತಿಕವಾಗಿ ತೈಲ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಿದ್ದು, ಇಂಧನ ಬೆಲೆಗಳು ಏರಿಕೆಯಾಗಿವೆ. ಇರಾನ್‌ನ ವಿದ್ಯುತ್ ಸ್ಥಾವರಗಳು ಮತ್ತು ತೈಲ ಕೇಂದ್ರಗಳನ್ನು ಗುರಿಯಾಗಿಸಿಕೊಂಡು ದಾಳಿ ನಡೆಸುವುದಾಗಿ ಟ್ರಂಪ್ ಪದೇ ಪದೇ ಎಚ್ಚರಿಸುತ್ತಿದ್ದಾರೆ. ಪ್ರಸ್ತುತ ಪರಿಸ್ಥಿತಿ ಯುದ್ಧದ ಭೀತಿಯನ್ನು ಮತ್ತಷ್ಟು ಹೆಚ್ಚಿಸಿದೆ.




## ಇರಾನ್‌ನ ಪರಮಾಣು ವಿದ್ಯುತ್ ಘಟಕ ಬುಶೆಹರ್ ಮೇಲೆ ಅಮೆರಿಕ-ಇಸ್ರೇಲ್ 4ನೇ ಬಾರಿಗೆ ದಾಳಿ



**ಟೆಹ್ರಾನ್:** ಅಮೆರಿಕದ ಎರಡು ಯುದ್ಧ ವಿಮಾನಗಳನ್ನು ಶುಕ್ರವಾರ ಹೊಡೆದುರುಳಿಸಿದ್ದ ಇರಾನ್ ಮೇಲೆ ಅಮೆರಿಕ-ಇಸ್ರೇಲ್ ಜಂಟಿಯಾಗಿ ವೈಮಾನಿಕ ದಾಳಿ ನಡೆಸಿವೆ.

ಸಂಧಾನ ಮಾತುಕತೆ ನಡುವೆ ದಕ್ಷಿಣ ಇರಾನ್‌ಗೆ ಹೊಂದಿಕೊಂಡ ಕರಾವಳಿ ತೀರದ ಬುಶೆಹರ್ ಪರಮಾಣು ವಿದ್ಯುತ್ ಘಟಕದ ಮೇಲೆ ವಾಯುದಾಳಿ ನಡೆಸಲಾಗಿದೆ. 14 ದಿನಗಳ ಅಂತರದಲ್ಲಿ ಬುಶೆಹರ್ ಪರಮಾಣು ವಿದ್ಯುತ್ ಘಟಕದ ಮೇಲೆ ಅಮೆರಿಕ-ಇಸ್ರೇಲ್ ನಾಲ್ಕನೇ ಬಾರಿ ದಾಳಿ ನಡೆಸಿವೆ.

''ವಿದ್ಯುತ್ ಘಟಕದ ಮೇಲೆ ನಡೆದ ವೈಮಾನಿಕ ದಾಳಿಯಲ್ಲಿ ಒಬ್ಬ ಭದ್ರತಾ ಸಿಬ್ಬಂದಿ ಮೃತಪಟ್ಟಿದ್ದಾರೆ. ಘಟಕಕ್ಕೆ ಹೆಚ್ಚಿನ ಪ್ರಮಾಣದ ಹಾನಿಯಾಗಿಲ್ಲ,'' ಎಂದು ಐಆರ್‌ಜಿಸಿ ಹೇಳಿಕೊಂಡಿದೆ. ದಾಳಿ ಖಂಡಿಸಿರುವ ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಘಚಿ, ಇಸ್ರೇಲ್-ಅಮೆರಿಕ ಪಡೆಗಳು ಬುಶೆಹರ್ ವಿದ್ಯುತ್ ಘಟಕದ ಮೇಲೆ ಬಾಂಬ್ ದಾಳಿ ನಡೆಸಿವೆ. ವಿಕಿರಣ ಸೋರಿಕೆಯಾದರೆ ಕೊಲ್ಲಿದೇಶಗಳ ಜನರ ಬದುಕು ನಾಶವಾಗಲಿದೆ. ಟೆಹ್ರಾನ್‌ನ ಪೆಟ್ರೋಕೆಮಿಕಲ್ ಘಟಕಗಳ ಮೇಲೆ ದಾಳಿ ನಡೆಸಲಾಗಿದೆ. ಒಟ್ಟಾರೆ ನಾಗರಿಕ ಮೌಲಸೌಲಭ್ಯಗಳನ್ನು ನಾಶಗೊಳಿಸುವ ಉದ್ದೇಶದೊಂದಿಗೆ ದಾಳಿ ನಡೆಸಲಾಗಿದೆ. ಪ್ರತೀಕಾರವಾಗಿ ಕೊಲ್ಲಿ ದೇಶಗಳಲ್ಲಿರುವ ಅಮೆರಿಕ ನೆಲೆಗಳ ಮೇಲೆ ದಾಳಿ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದ್ದಾರೆ.

ಈ ಬಗ್ಗೆ ಅಂತಾರಾಷ್ಟ್ರೀಯ ಪರಮಾಣು ಶಕ್ತಿ ಸಂಸ್ಥೆಗೆ(ಐಎಇಎ) ಇರಾನ್ ಮಾಹಿತಿ ನೀಡಿದೆ. ದಾಳಿಯ ಬಗ್ಗೆ ಕಳವಳವ ವ್ಯಕ್ತಪಡಿಸಿರುವ ಐಎಇಎ ಕ್ಷಿಪಣಿಯು ಪರಮಾಣು ವಿದ್ಯುತ್ ಘಟಕದ ಹೊರವಲಯದ ಕಟ್ಟಡಕ್ಕೆ ಬಿದ್ದಿದೆ. ಕಂಪನದ ತೀವ್ರತೆಗೆ ಒಳಗಿನ ಕಟ್ಟಡಕ್ಕೂ ಹಾನಿಯಾಗಿದೆ. ಆದರೆ, ವಿಕಿರಣ ಪ್ರಮಾಣದಲ್ಲಿ ಇದುವರೆಗೂ ಯಾವುದೇ ಹೆಚ್ಚಳ ಕಂಡುಬಂದಿಲ್ಲ, ಎಂದು ತಿಳಿಸಿದೆ.

## ಕೇಂದ್ರದ 'ಒನ್ ಸ್ಟಾಪ್ ಸೆಂಟರ್' ಪ್ರಾಮಾಣಿಕತೆ ಪ್ರಶ್ನಿಸಿದ ರಾಹುಲ್

**ನವದೆಹಲಿ:** ಹಿಂಸಾಚಾರದಿಂದ ಬಳಲುತ್ತಿರುವ ಮಹಿಳೆಯರನ್ನು ಬೆಂಬಲಿಸಲು ಉದ್ದೇಶಿಸಿರುವ ಕೇಂದ್ರದ ಒನ್ ಸ್ಟಾಪ್ ಸೆಂಟರ್‌ಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಬಹಿರಂಗಪಡಿಸಿದರು ಮತ್ತು ಮೋದಿ ಸರ್ಕಾರ ಯಾರ ಮಾತನ್ನೂ ಕೇಳುತ್ತಿಲ್ಲ ಎಂದು ಹೇಳಿದ್ದಾರೆ.



**ಸುರಕ್ಷತೆ ಕೇವಲ ಒಂದು ಯೋಜನೆಯಲ್ಲ;** ಅದು ಸರ್ಕಾರದ ಮೂಲಭೂತ ಜವಾಬ್ದಾರಿ ಎಂದು ಗಾಂಧಿ ಅವರು ಇದೇ ಸಂದರ್ಭದಲ್ಲಿ ಪ್ರತಿಪಾದಿಸಿದ್ದಾರೆ. ಮಹಿಳೆಯರು ಸಹಾಯಕ್ಕಾಗಿ ಬಾಗಿಲು ತಟ್ಟುತ್ತಿದ್ದಾರೆ, ಆದರೆ ಸರ್ಕಾರ ಆ ಬಾಗಿಲುಗಳನ್ನು ಮುಚ್ಚಿದೆ. ನಾನು ಸಂಸತ್ತಿನಲ್ಲಿ ಕೇಳಿದೆ ಒಬ್ಬ ಮಹಿಳೆ ಹಿಂಸಾಚಾರದಿಂದ ಪಲಾಯನ ಮಾಡಿ ಒನ್ ಸ್ಟಾಪ್ ಸೆಂಟರ್ ತಲುಪಿದಾಗ ಅವಳು ಸಹಾಯವನ್ನು ಏಕೆ ಪಡೆಯುವುದಿಲ್ಲ? ಅವಳು ಬಾಗಿಲುಗಳನ್ನು ಏಕೆ ಲಾಕ್ ಮಾಡಿದ್ದಾಳೆ? ಸಿಬ್ಬಂದಿ ಕೊರತೆ ಏಕೆ? ದೇಶಾದ್ಯಂತ ದೂರುಗಳು ಏಕೆ ಕೇಳಲ್ಪಡುತ್ತಿಲ್ಲ? ಎಂದು ಅವರು ತಮ್ಮ ವಾಟ್ಸಾಪ್ ಚಾನೆಲ್‌ನಲ್ಲಿ ಪೋಸ್ಟ್‌ನಲ್ಲಿ ಪ್ರಶ್ನಿಸಿದ್ದಾರೆ. ಸುರಕ್ಷತೆಯು ಆದ್ಯತೆಯಾಗಿದ್ದರೆ, ಪ್ರತಿ ಐದು ಮಹಿಳೆಯರಲ್ಲಿ ಮೂವರು ಮಹಿಳೆಯರನ್ನು ತಲುಪಲು ಸಹಾಯ ಇನ್ನೂ ಏಕೆ ವಿಫಲವಾಗಿದೆ ಎಂದು ಗಾಂಧಿ ಪ್ರಶ್ನಿಸಿದರು.ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯಕ್ಕೆ ನಿಗದಿಪಡಿಸಿದ ಪ್ರತಿ 100 ರೂ.ಗಳಲ್ಲಿ ಕೇವಲ 60 ಪೈಸೆಯನ್ನು ಮಾತ್ರ ಸೆಂಟರ್‌ಗಳಿಗೆ ಖರ್ಚು ಮಾಡಲಾಗುತ್ತಿದೆ ಎಂದು ಮಾಜಿ ಕಾಂಗ್ರೆಸ್ ಮುಖ್ಯಸ್ಥರು ತಿಳಿಸಿದ್ದಾರೆ.

ಇದು ಅಗತ್ಯವಿರುವ ಮಹಿಳೆಯರಿಗೆ ವೈದ್ಯಕೀಯ ನೆರವು, ಕಾನೂನು ನೆರವು ಮತ್ತು ಸಲಹೆ, ತಾತ್ಕಾಲಿಕ ಆಶ್ರಯ, ಪೊಲೀಸ್ ನೆರವು ಮತ್ತು ಮಾನಸಿಕ-ಸಾಮಾಜಿಕ ಸಮಾಲೋಚನೆಯಂತಹ ಸೇವೆಗಳನ್ನು ಒದಗಿಸುತ್ತದೆ. ಆರಂಭವಾದಾಗಿನಿಂದ, ಅಂದರೆ ಏಪ್ರಿಲ್ 1, 2015 ರಿಂದ ಡಿಸೆಂಬರ್ 31, 2025 ರವರೆಗೆ, ದೇಶದಲ್ಲಿ 13.37 ಲಕ್ಷಕ್ಕೂ ಹೆಚ್ಚು ಮಹಿಳೆಯರಿಗೆ ಸಹಾಯ ಮಾಡಲಾಗಿದೆ ಎಂದು ಮಾಹಿತಿ ನೀಡಿದ್ದರು.

## ಹಿಂದೂ ಯುವಕರಿಗೆ ಪಾಕ್ ಮೂಲದ ಉಗ್ರ ಸಂಘಟನೆ ಗಾಳ

**ಲಕ್ನೋ :** ಉತ್ತರ ಪ್ರದೇಶದ ಮೀರತ್‌ನಿಂದ ಕಾರ್ಯನಿರ್ವಹಿಸುತ್ತಿರುವ ಪಾಕಿಸ್ತಾನದೊಂದಿಗೆ ಸಂಪರ್ಕ ಹೊಂದಿರುವ ಭಯೋತ್ಪಾದಕ ಸಂಘಟನೆಯೊಂದು ಕಾನೂನಿನ ಕಣ್ಣು ತಪ್ಪಿಸಲು ಹಿಂದೂ ಉಗ್ರರನ್ನು ನೇಮಿಸಿಕೊಂಡಿದೆ ಎಂದು ಉತ್ತರ ಪ್ರದೇಶ ಎಟಿಎಸ್ ತಿಳಿಸಿದೆ. ಪಾಕಿಸ್ತಾನ ಮೂಲದ ಹ್ಯಾಂಡ್ಲರ್‌ಗಳೊಂದಿಗೆ ನೇರ ಸಂಪರ್ಕದಲ್ಲಿದ್ದ ಎಂದು ನಂಬಲಾದ ಪ್ರಮುಖ ಆರೋಪಿಗಳಲ್ಲಿ ಒಬ್ಬನಾದ ಶಕೀಬ್ ವಿಚಾರಣೆ ಸಂದರ್ಭದಲ್ಲಿ ಈ ಮಹತ್ವದ ಮಾಹಿತಿ ಲಭ್ಯವಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಭದ್ರತಾ ಪರಿಶೀಲನೆಯನ್ನು ತಪ್ಪಿಸಲು ಸಹಾಯ ಮಾಡಲು ಯುವ ಹಿಂದೂ ಪುರುಷರನ್ನು ಮಾಡ್ಯೂಲ್‌ಗೆ ಕರೆತರಲು ಶಕೀಬ್ ಅವರನ್ನು ಕೇಳಲಾಗಿದೆ ಎಂದು ತನಿಖಾಧಿಕಾರಿಗಳು ಹೇಳುತ್ತಾರೆ. ಆ ಸೂಚನೆಗಳ ಮೇರೆಗೆ ಕಾರ್ಯ ನಿರ್ವಹಿಸುತ್ತಾ, ಅವರು ವಿಕಾಸ್ ಮತ್ತು ಲೋಕೇಶ್ ಅವರನ್ನು ನೇಮಕ ಮಾಡಿಕೊಂಡರು, ಹಣ ಮತ್ತು ಆಮೂಲಾಗ್ರ ಸಂದೇಶ ಕಳುಹಿಸುವ ಮೂಲಕ ಅವರನ್ನು ಆಕರ್ಷಿಸಿದ್ದಾರೆ ಎಂದು ಆರೋಪಿಸಲಾಗಿದೆ.



**ಇಬ್ಬರಿಗೂ ಸಂಕೇತಿತ ಗುರುತುಗಳನ್ನು ನೀಡಲಾಯಿತು;** ಲೋಕೇಶ್ ಅವರನ್ನು ಸಲೀಮ್ ಮತ್ತು ವಿಕಾಸ್ ಅವರನ್ನು ಜಾಹಿದ್ ಎಂದು ಕರೆಯಲಾಯಿತು, ಅವರ ಪಾತ್ರಗಳನ್ನು ಮರೆಮಾಚುವ ಪ್ರಯತ್ನಗಳ ಭಾಗವಾಗಿ. ಪ್ರಶ್ನೆ ಸಮಯದಲ್ಲಿ, ಶಕೀಬ್ ವಿಚಕ್ಷಣಕ್ಕಾಗಿ ಲೋಕೇಶ್ ಅವರನ್ನು ಅವಲಂಬಿಸಿದ್ದಾರೆ ಎಂದು ತಿಳಿದುಬಂದಿದೆ.

ವಿಶೇಷವಾಗಿ ಧಾರ್ಮಿಕ ಸ್ಥಳಗಳು ಸೇರಿದಂತೆ ಹಿಂದೂ ಎಂದು ಗುರುತಿಸಲ್ಪಟ್ಟವರಿಗೆ ಸುಲಭ ಪ್ರವೇಶವನ್ನು ಅನುಮತಿಸುವ ಪ್ರದೇಶಗಳಲ್ಲಿ.ದುಬೈ ಲಿಂಕ್ ಮತ್ತು ಆನ್‌ಲೈನ್ ರಾಡಿಕಲೈಸೇಶನ್ ತನಿಖೆಯು ಪ್ರಮುಖ ವಿದೇಶಿ ಸಂಪರ್ಕವನ್ನು ಸಹ ಸೂಚಿಸಿದೆ. ದುಬೈ ಮೂಲದ ಆಕಿಬ್ ಎಂದು ಗುರುತಿಸಲಾದ ವ್ಯಕ್ತಿ ಮಾಡ್ಯೂಲ್ ಅನ್ನು ಸಂಯೋಜಿಸುತ್ತಿದ್ದ ಮತ್ತು ಶಕೀಬ್ ಮತ್ತು ಪಾಕಿಸ್ತಾನಿ ಹ್ಯಾಂಡ್ಲರ್‌ಗಳ ನಡುವೆ ಸಂಪರ್ಕವನ್ನು ಸುಗಮಗೊಳಿಸುತ್ತಿದ್ದನೆಂದು ತನಿಖಾಧಿಕಾರಿಗಳು ನಂಬಿದ್ದಾರೆ.

ಆಕಿಬ್ ಯುವಕರನ್ನು ನೇಮಿಸಿಕೊಳ್ಳಲು ಮತ್ತು ಪ್ರಭಾವಿಸಲು ಇನ್‌ಸ್ಟಾಗ್ರಾಮ್ ಮತ್ತು ಟೆಲಿಗ್ರಾಮ್‌ನಂತಹ ಸಾಮಾಜಿಕ ಮಾಧ್ಯಮ ವೇದಿಕೆಗಳನ್ನು ಬಳಸುತ್ತಿದ್ದರು, ಎಕೆ -47 ರೈಫಲ್‌ಗಳು ಸೇರಿದಂತೆ ಶಸ್ತ್ರಾಸ್ತ್ರಗಳನ್ನು ಒಳಗೊಂಡಿರುವ ವಿಷಯವನ್ನು ಹಂಚಿಕೊಂಡರು ಅವರನ್ನು ಆಕರ್ಷಿಸಲು ಹಣವನ್ನು ನೀಡಿದರು ಎಂದು ಆರೋಪಿಸಲಾಗಿದೆ.


## 'ಟಿಕೆಟ್ ಫಾರ್ ಮನಿ' ಪ್ರಕರಣದಲ್ಲಿ ಮಾನನಷ್ಟ ಮೊಕದ್ದಮೆ ದಾಖಲಿಸಿದ ಕೆ.ಸಿ. ವೇಣುಗೋಪಾಲ್

**ಅಲಪ್ಪು:** ಮುಂಬರುವ ಕೇರಳ ವಿಧಾನಸಭಾ ಚುನಾವಣೆಗೆ ಮುನ್ನ ತಮ್ಮ ವಿರುದ್ಧ ಟಿಕೆಟ್ ಫಾರ್ ಮನಿ ಕುರಿತ ರಾಜಕೀಯ ಪ್ರೇರಿತ ಆರೋಪಗಳನ್ನು ಮಾಡಲಾಗಿದೆ ಎಂದು ಆರೋಪಿಸಿ ಕಾಂಗ್ರೆಸ್ ನಾಯಕ ಕೆ.ಸಿ. ವೇಣುಗೋಪಾಲ್ ಅವರು ಹರಿಯಾಣ ಮೂಲದ ವ್ಯಕ್ತಿಯೊಬ್ಬರ ವಿರುದ್ಧ ಇಲ್ಲಿನ ನ್ಯಾಯಾಲಯದಲ್ಲಿ ಮಾನನಷ್ಟ ಮೊಕದ್ದಮೆ ಹೂಡಿದ್ದಾರೆ.

ರಾಜಕೀಯ ಪ್ರೇರಿತ ಆರೋಪ

ಇಂದು ಬಿಡುಗಡೆ ಮಾಡಿದ ಪಕ್ಷದ ಹೇಳಿಕೆಯ ಪ್ರಕಾರ, ಅಲಪ್ಪುಳದಲ್ಲಿರುವ ನ್ಯಾಯಾಂಗ ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ ನ್ಯಾಯಾಲಯದಲ್ಲಿ ಗೌರವ್ ಕುಮಾರ್ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಆಲಪ್ಪುಳ ಸಂಸದರೂ ಆಗಿರುವ ವೇಣುಗೋಪಾಲ್ ಅವರು ತಮ್ಮ ದೂರಿನಲ್ಲಿ, ಈ ಆರೋಪಗಳು ಸ್ಪಷ್ಟ ಚುನಾವಣಾ ಉದ್ದೇಶಗಳೊಂದಿಗೆ ಎತ್ತಲ್ಪಟ್ಟಿವೆ ಮತ್ತು ಅವರ ಖ್ಯಾತಿ ಮತ್ತು ಸಾರ್ವಜನಿಕ ಇಮೇಜ್‌ಗೆ ಕಳಂಕ ತರುವ ಗುರಿಯನ್ನು ಹೊಂದಿವೆ ಎಂದು ಹೇಳಿದ್ದಾರೆ. ಈ ಹೇಳಿಕೆಗಳು 2024 ರ ಹರಿಯಾಣ ವಿಧಾನಸಭಾ ಚುನಾವಣೆಗೆ ಸಂಬಂಧಿಸಿವೆ ಆದರೆ 2026 ರಲ್ಲಿ ಮಾತ್ರ ಹೊರಹೊಮ್ಮಿದವು, ಪಕ್ಷದ ಹೇಳಿಕೆಯ ಪ್ರಕಾರ ಅವುಗಳ ಉದ್ದೇಶ ಮತ್ತು ಸಮಯದ ಬಗ್ಗೆ ಅನುಮಾನಗಳನ್ನು ಹುಟ್ಟುಹಾಕಿವೆ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಗಮನಸೆಳೆದರು.

ಆರೋಪಿಗಳು ಪತ್ರಿಕಾಗೋಷ್ಠಿಗಳ ಮೂಲಕ ಈ ಹೇಳಿಕೆಗಳನ್ನು ಪ್ರಕಟಿಸಿದ್ದಾರೆ ಮತ್ತು ಮಾಧ್ಯಮಗಳು ಮತ್ತು ಸಾಮಾಜಿಕ ಮಾಧ್ಯಮ ವೇದಿಕೆಗಳ ಮೂಲಕ ಅವುಗಳನ್ನು ವ್ಯಾಪಕವಾಗಿ ಪ್ರಸಾರ ಮಾಡಿದ್ದಾರೆ ಎಂದು ಕಾಂಗ್ರೆಸ್ ಮುಖಂಡರು ಆರೋಪಿಸಿದ್ದಾರೆ.



ಈ ವಿಷಯಕ್ಕೆ ಸಂಬಂಧಿಸಿದಂತೆ ಫೆಬ್ರವರಿ 23, 2026 ರಂದು ರಾಜ್ಯ ಪೊಲೀಸ್ ಮುಖ್ಯಸ್ಥರಿಗೆ ದೂರು ಸಲ್ಲಿಸಲಾಗಿದೆ ಎಂದು ಅವರು ಗಮನಿಸಿದರು. ರಾಜ್ಯದಲ್ಲಿ ಏಪ್ರಿಲ್ 9 ರಂದು ನಡೆಯಲಿರುವ ವಿಧಾನಸಭಾ ಚುನಾವಣೆಯ ಮೇಲೆ ಪ್ರಭಾವ ಬೀರುವ ಮತ್ತು ಯುಡಿಎಫ್ ಅಧಿಕಾರಕ್ಕೆ ಬರದಂತೆ ತಡೆಯುವ ಗುರಿಯನ್ನು ಹೊಂದಿರುವ ಉತ್ತಮ ಯೋಜಿತ ಪಿತೂರಿಯ ಭಾಗವಾಗಿ ಆರೋಪಗಳು ನಡೆದಿವೆ ಎಂದು ವೇಣುಗೋಪಾಲ್ ಹೇಳಿದ್ದಾರೆ. ದೂರಿನಲ್ಲಿ, ಹಿರಿಯ ನಾಯಕರು ತಮ್ಮ ಸಾರ್ವಜನಿಕ ಸೇವೆಯ ವರ್ಷಗಳಲ್ಲಿ ನಿರ್ಮಿಸಲಾದ ವಿಶ್ವಾಸಾರ್ಹತೆಗೆ ಹಾನಿ ಮಾಡುವ ಉದ್ದೇಶವನ್ನು ಈ ಆರೋಪಗಳು ಹೊಂದಿವೆ ಎಂದು ಹೇಳಿದರು. ಆರೋಪಿಗಳು ಕಾನೂನು ನೋಟಿಸ್‌ಗೆ ಪ್ರತಿಕ್ರಿಯಿಸಲು ಅಥವಾ ಆರೋಪಗಳನ್ನು ಹಿಂಪಡೆಯಲು ವಿಫಲವಾದ ನಂತರ ಭಾರತೀಯ ನ್ಯಾಯ ಸಂಹಿತದ ನಿಬಂಧನೆಗಳ ಅಡಿಯಲ್ಲಿ ದೂರು ದಾಖಲಿಸಲಾಗಿದೆ ಎಂದು ಅದು ಹೇಳಿದೆ. ಕಾಂಗ್ರೆಸ್‌ಗೆ ಸಂಬಂಧಿಸಿದ ವ್ಯಕ್ತಿಗಳನ್ನು ಒಳಗೊಂಡ ಟಿಕೆಟ್-ಫಾರ್- ಮನಿಹಣ ಪ್ರಕರಣಕ್ಕೆ ಸಂಬಂಧಿಸಿದಂತೆ ದೆಹಲಿ ಪೊಲೀಸರು ಇತ್ತೀಚೆಗೆ ಎಫ್‌ಐಆರ್ ದಾಖಲಿಸಿದ ನಂತರ ಈ ಬೆಳವಣಿಗೆ ಸಂಭವಿಸಿದೆ.

# ಚುನಾವಣಾ ಅಫಿಡವಿಟ್‌ನಲ್ಲಿ 2 ಎಫ್‌ಐಆರ್‌ಗಳ ಮಾಹಿತಿ ನೀಡಿದ ವಿಜಯ್

### ಪೆರಂಬೂರ್ ವಿಧಾನಸಭಾ ಕ್ಷೇತ್ರ ಮತ್ತು ತಿರುಚಿರಾಪಳ್ಳಿ ಪೂರ್ವ ಕ್ಷೇತ್ರಕ್ಕೆ ತಮ್ಮ ನಾಮಪತ್ರ ಸಲ್ಲಿಕೆ

**ಚೆನ್ನೈ:** ಇದೇ ಏ. 23 ರಂದು ನಡೆಯಲಿರುವ ತಮಿಳುನಾಡು ವಿಧಾನಸಭಾ ಚುನಾವಣೆಗೆ ಚುನಾವಣಾಧಿಕಾರಿಯ ಮುಂದೆ ಸಲ್ಲಿಸಿದ ಹೊಸ ಅಫಿಡವಿಟ್‌ನಲ್ಲಿ ಎರಡು ಎಫ್‌ಐಆರ್‌ಗಳು ಬಾಕಿ ಇವೆ ಎಂದು ಟಿವಿಕೆ ಪಕ್ಷದ ಮುಖ್ಯಸ್ಥ ಹಾಗೂ ಖ್ಯಾತ ಚಲನಚಿತ್ರ ನಟ ವಿಜಯ್ ಘೋಷಿಸಿದ್ದಾರೆ.

ಮೂಲಗಳ ಪ್ರಕಾರ, ಏಪ್ರಿಲ್ 3 ರಂದು ನೋಟರೈಸ್ ಮಾಡಲಾದ ಹೊಸ ಅಫಿಡವಿಟ್ ಅನ್ನು ಏಪ್ರಿಲ್ 4 ರಂದು ಪ್ರತಿನಿಧಿಯೊಬ್ಬರು ಸಲ್ಲಿಸಿದ್ದಾರೆ. ಮಾರ್ಚ್ 30 ರಂದು ನೋಟರೈಸ್ ಮಾಡಿದ ಹಿಂದಿನ ದಾಖಲೆಯಲ್ಲಿ ಸೇರಿಸದ ಚೆನ್ನೈ ಮತ್ತು ಮಧುರೈನಲ್ಲಿನ ಎರಡು ಪ್ರಕರಣಗಳನ್ನು ಇದು ಪಟ್ಟಿ ಮಾಡುತ್ತದೆ.

ಇತ್ತೀಚಿನ ಫೈಲಿಂಗ್‌ನಲ್ಲಿ, ನಟ ಮಾರ್ಚ್ 30 ರಂದು ಚುನಾವಣಾ ಪ್ರಚಾರದ ಸಮಯದಲ್ಲಿ ಸಾರ್ವಜನಿಕರಿಗೆ ತೊಂದರೆ ನೀಡಿದ ಆರೋಪದ ಮೇಲೆ ಚೆನ್ನೈನ ಕೆ 5 ಪೆರವಲ್ಲೂರ್ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಎಫ್‌ಐಆರ್ ಸಂಖ್ಯೆ 74 ಅನ್ನು ಬಹಿರಂಗಪಡಿಸಿದ್ದಾರೆ. ಈ ಪ್ರಕರಣದ ಬಗ್ಗೆ ಏಪ್ರಿಲ್ 2 ರಂದು ಸಾಮಾಜಿಕ ಮಾಧ್ಯಮದ ಮೂಲಕ ತಿಳಿದುಕೊಂಡಿದ್ದೇನೆ ಎಂದು ವಿಜಯ್ ಅಫಿಡವಿಟ್‌ನಲ್ಲಿ ತಿಳಿಸಿದ್ದಾರೆ.

ಮಧುರೈ ಜಿಲ್ಲೆಯ ಕೂಡಕೋವಿಲ್ ಪೊಲೀಸ್ ಠಾಣೆಯಿಂದ 2025 ರ 108 ನೇ ಸಂಖ್ಯೆಯ ಎರಡನೇ ಎಫ್‌ಐಆರ್ ಆಗಸ್ಟ್ 21, 2025 ರಂದು ನಡೆದ ಪಕ್ಷದ ಸಮ್ಮೇಳನದ ಸಂದರ್ಭದಲ್ಲಿ ನಡೆದ ಘಟನೆಗೆ ಸಂಬಂಧಿಸಿದ ದೂರನ್ನು ಒಳಗೊಂಡಿದೆ.

ರ್‍ಯಾಂಪ್ ವಾಕ್ ಸಮಯದಲ್ಲಿ ನಾಯಕನನ್ನು ಸಂಪರ್ಕಿಸಲು ಪ್ರಯತ್ನಿಸುವಾಗ ಬೌನ್ಸರ್‌ಗಳು ತಳ್ಳಿ ಗಾಯಗೊಳಿಸಿದ್ದಾರೆ ಎಂದು ದೂರುದಾರರು ಆರೋಪಿಸಿದ್ದಾರೆ, ಆದರೆ ಈ ವಿಷಯಕ್ಕಾಗಿ ಅವರಿಗೆ ಇನ್ನೂ ಔಪಚಾರಿಕ ಸಮನ್ಸ್ ಬಂದಿಲ್ಲ ಎಂದು ವಿಜಯ್ ತಿಳಿಸಿದ್ದಾರೆ. ಪ್ರಸ್ತುತ ಮೇಲ್ಮನವಿಯಲ್ಲಿರುವ ಬಹು ಮೌಲ್ಯಮಾಪನ ವರ್ಷಗಳಲ್ಲಿ ಸುಮಾರು 3.44 ಕೋಟಿ ರೂಪಾಯಿಗಳ ಬಾಕಿ ಇರುವ ಆದಾಯ ತೆರಿಗೆ ಬೇಡಿಕೆಗಳನ್ನು ಸಹ ಅವರು ಪಟ್ಟಿ ಮಾಡಿದ್ದಾರೆ.

### ಬಾಕಿ ಇರುವ ಎಲ್ಲಾ ಕ್ರಿಮಿನಲ್ ಮೊಕದ್ದಮೆಗಳ ಬಹಿರಂಗ

**ವಿಜಯ್ ಪೆರಂಬೂರ್ ಮತ್ತು ತಿರುಚಿರಾಪಳ್ಳಿ ಪೂರ್ವ ವಿಧಾನಸಭಾ ಕ್ಷೇತ್ರಗಳಿಂದ ಚುನಾವಣೆಯಲ್ಲಿ ಸ್ಪರ್ಧಿಸುತ್ತಿದ್ದಾರೆ. ಅವರು ಮಾರ್ಚ್ 30 ರಂದು ಪೆರಂಬೂರ್ ವಿಧಾನಸಭಾ ಕ್ಷೇತ್ರಕ್ಕೆ ತಮ್ಮ ಮೊದಲ ನಾಮಪತ್ರ ಸಲ್ಲಿಸಿದರು. ನಂತರ ಅವರು ಏಪ್ರಿಲ್ 2 ರಂದು ತಿರುಚಿರಾಪಳ್ಳಿ ಪೂರ್ವ ಕ್ಷೇತ್ರಕ್ಕೆ ತಮ್ಮ ನಾಮಪತ್ರ ಸಲ್ಲಿಸಿದರು. ಏಪ್ರಿಲ್ 4 ರಂದು ಪೆರಂಬೂರ್‌ನಲ್ಲಿ ಸಲ್ಲಿಸಲಾದ ಹೊಸ ಅಫಿಡವಿಟ್ ಆರಂಭಿಕ ಪೆರಂಬೂರ್ ಘೋಷಣೆ ಮತ್ತು ನಂತರ ತಿರುಚಿರಾಪಳ್ಳಿ ಪೂರ್ವದಲ್ಲಿ ಸಲ್ಲಿಸಲಾದ ಒಂದರ ನಡುವಿನ ವ್ಯತ್ಯಾಸಗಳನ್ನು ಪರಿಹರಿಸುವ ಉದ್ದೇಶದಿಂದ ಪೂರಕ ಸಲ್ಲಿಕೆಯಾಗಿದೆ. ಪರಿಷ್ಕೃತ ಫೈಲಿಂಗ್, ಬಾಕಿ ಇರುವ ಎಲ್ಲಾ ಕ್ರಿಮಿನಲ್ ಮೊಕದ್ದಮೆಗಳ ಬಹಿರಂಗಪಡಿಸುವಿಕೆಗೆ ಸಂಬಂಧಿಸಿದಂತೆ ಟಿವಿಕೆ ಮುಖ್ಯಸ್ಥರು ಚುನಾವಣಾ ಆಯೋಗದ ಮಾನದಂಡಗಳನ್ನು ಅನುಸರಿಸುತ್ತಿದ್ದಾರೆ ಎಂದು ಖಚಿತಪಡಿಸುತ್ತದೆ.**

ಚರಾಸ್ತಿಗಳ ಮೌಲ್ಯ ರೂ. 410.59 ಕೋಟಿ



**ಕ್ರಿಮಿನಲ್ ದಾಖಲೆ ವಿಭಾಗವು ಬದಲಾವಣೆಗಳನ್ನು ಕಂಡಿದ್ದರೂ, 2 ದಾಖಲೆಗಳಲ್ಲಿ ಹಣಕಾಸಿನ ಘೋಷಣೆಗಳು ಹೆಚ್ಚಾಗಿ ಸ್ಥಿರವಾಗಿವೆ. ಈ ಹಿಂದೆ ಘೋಷಿಸಲಾದ ರೂ 404.58 ಕೋಟಿಗೆ ಹೋಲಿಸಿದರೆ ವಿಜಯ್ ಅವರ ಚರಾಸ್ತಿಗಳ ಮೌಲ್ಯ ಸುಮಾರು ರೂ 410.59 ಕೋಟಿಗಳಷ್ಟಿದೆ, ಹೊಸ ಅಫಿಡವಿಟ್‌ನಲ್ಲಿ ವಿಜಯ್ ಅವರ ಚರಾಸ್ತಿಗಳ ಮೌಲ್ಯ ಸುಮಾರು ರೂ 410.59 ಕೋಟಿಗಳಷ್ಟಿದೆ. ಇದರಲ್ಲಿ 15 ಲಕ್ಷ ರೂಪಾಯಿ ಮೌಲ್ಯದ ಬೆಳ್ಳಿ ವಸ್ತುಗಳು ಮತ್ತು 1.20 ಕೋಟಿ ರೂಪಾಯಿಗಳಿಗೂ ಹೆಚ್ಚು ಮೌಲ್ಯದ 883 ಗ್ರಾಂ ಚಿನ್ನಾಭರಣಗಳು ಸೇರಿವೆ. ನೀಲಂಕರೈ ಮತ್ತು ಸಾಲಿಗ್ರಾಮದಂತಹ ಸ್ಥಳಗಳಲ್ಲಿನ ವಾಣಿಜ್ಯ ಮತ್ತು ವಸತಿ ಕಟ್ಟಡಗಳು ಅವರ ಸ್ಥಿರ ಆಸ್ತಿಗಳ ಒಟ್ಟು ಪ್ರಸ್ತುತ ಮಾರುಕಟ್ಟೆ ಮೌಲ್ಯವು 220.15 ಕೋಟಿ ರೂಪಾಯಿಗಳೆಂದು ಅಂದಾಜಿಸಲಾಗಿದೆ.**

## ಮಿನಿ ನ್ಯೂಸ್

### ಬಿಜೆಪಿ ಕಚೇರಿಗೆ ಸ್ಫೋಟಕ ಎಸೆದಿದ್ದ ಐವರ ಬಂಧನ

**ಚಂಡೀಗಢ;** ಪಂಜಾಬ್ ಬಿಜೆಪಿ ಪ್ರಧಾನ ಕಚೇರಿಯ ಹೊರಗೆ ಸಂಭವಿಸಿದ ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿದಂತೆ ಐವರನ್ನು ಬಂಧಿಸಲಾಗಿದೆ ಎಂದು ಪೊಲೀಸ್ ಮಹಾನಿರ್ದೇಶಕ ಗೌರವ್ ಯಾದವ್ ತಿಳಿಸಿದ್ದಾರೆ.

ಪ್ರಕರಣದಲ್ಲಿ ಭಾಗಿಯಾಗಿರುವ ಐದು ಜನರನ್ನು ಬಂಧಿಸಲಾಗಿದೆ. ಈ ದಾಳಿಯಲ್ಲಿ ಭಾಗಿಯಾಗಿರುವ ಇಬ್ಬರು ದುಷ್ಕರ್ಮಿಗಳನ್ನು ಗುರುತಿಸಲಾಗಿದೆ. ಇದುವರೆಗೆ ಒಂದು ಗ್ರೆನೇಡ್ ವಶಪಡಿಸಿಕೊಳ್ಳಲಾಗಿದೆ ಎಂದು ಅವರು ಹೇಳಿದ್ದಾರೆ. ಪ್ರಾಥಮಿಕ ತನಿಖೆಯಲ್ಲಿ ಮಾಡ್ಯೂಲ್ ಪಾಕಿಸ್ತಾನದ ಬೇಹುಗಾರಿಕೆ ಸಂಸ್ಥೆ ಐಎಸ್‌ಐ ಬೆಂಬಲಿತವಾಗಿದೆ ಎಂದು ತಿಳಿದುಬಂದಿದೆ. ಪೋರ್ಚುಗಲ್ ಮತ್ತು ಜರ್ಮನಿಯಲ್ಲಿ ವಿದೇಶಿ ಮೂಲದ ನಿರ್ವಾಹಕರನ್ನು ಗುರುತಿಸಲಾಗಿದೆ. ತಲೆಮರೆಸಿಕೊಂಡಿರುವ ಆರೋಪಿಗಳನ್ನು ಬಂಧಿಸಲು ಪೊಲೀಸರ ತಂಡಗಳು ಕಾರ್ಯಾಚರಣೆ ನಡೆಸುತ್ತಿವೆ. ಆರೋಪಿಗಳ ಬಂಧನದಿಂದ ಈ ಪ್ರದೇಶದಲ್ಲಿ ಶಾಂತಿ ಮತ್ತು ಸಾಮರಸ್ಯವನ್ನು ಭಂಗಗೊಳಿಸುವ ಭಯೋತ್ಪಾದಕ ಪಿತೂರಿಯನ್ನು ಪರಿಣಾಮಕಾರಿಯಾಗಿ ವಿಫಲಗೊಳಿಸಿದೆ. ಪ್ರಕರಣದಲ್ಲಿ ಭಾಗಿಯಾಗಿರುವ ಪ್ರಮುಖ ಆರೋಪಿಗಳನ್ನು ಬಂಧಿಸುವ ಪ್ರಯತ್ನಗಳು ಮುಂದುವರೆದಿದೆ. ಸಂಜೆ 5 ಗಂಟೆ ಸುಮಾರಿಗೆ ಚಂಡೀಗಢದ ಸೆಕ್ಟರ್ 37ರಲ್ಲಿರುವ ಬಿಜೆಪಿ ಕಚೇರಿ ಬಳಿ ಸ್ಫೋಟ ಸಂಭವಿಸಿತ್ತು. ಶಂಕಿತ ಕಚ್ಚಾ ಸ್ಫೋಟಕ ಸಾಧನವನ್ನು ಕಚೇರಿಯ ಬಳಿ ಎಸೆಯಲಾಗಿತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಈ ಸ್ಫೋಟದಲ್ಲಿ ಯಾವುದೇ ಸಾವುನೋವುಗಳು ಸಂಭವಿಸಿರಲಿಲ್ಲ.

### ಪ್ರೀತಿಸಿದ ಯುವಕನನ್ನು ಮದುವೆಯಾಗಿದ್ದಕ್ಕೆ ಮಗಳನ್ನೇ ಕೊಂದ ಇನ್‌ಸ್ಪೆಕ್ಟರ್ ತಂದೆ

**ಹೈದರಾಬಾದ್:** ಪ್ರೀತಿಸಿದ ಯುವಕನನ್ನು ಮದುವೆಯಾಗಿದ್ದಕ್ಕೆ ವ್ಯಕ್ತಿಯೊಬ್ಬ ಮಗಳನ್ನೇ ಹತ್ಯೆ ಮಾಡಿರುವ ಪ್ರಕರಣ ಆಂಧ್ರಪ್ರದೇಶದ ಮಾಚೆರ್ಲಾ ಪಟ್ಟಣದಲ್ಲಿ ನಡೆದಿದೆ. ಮಾರ್ಚ್‌ನಲ್ಲಿ ಈ ಹತ್ಯೆ ನಡೆದಿದ್ದು ತಡವಾಗಿ ಬೆಳಕಿಗೆ ಬಂದಿದೆ. ಹತ್ಯೆಯಾದ ಮಹಿಳೆಯನ್ನು ಚೌಡೇಶ್ವರಿ (22) ಎಂದು ಗುರುತಿಸಲಾಗಿದೆ. ಮಹಿಳೆ ಯುವಕನೊಬ್ಬನ ಜೊತೆ ಪ್ರೇಮ ಸಂಬಂಧ ಹೊಂದಿದ್ದಳು. ಇದಕ್ಕೆ ಆಕೆಯ ಕುಟುಂಬಸ್ಥರ ವಿರೋಧವಿತ್ತು. ಮಾ.4 ರಂದು, ಆಕೆ ಮನೆ ಬಿಟ್ಟು ಪೋಷಕರ ಇಚ್ಛೆಗೆ ವಿರುದ್ಧವಾಗಿ ಮದುವೆಯಾಗಿದ್ದಳು. ಈ ಸಂಬಂಧ ಕುಟುಂಬಸ್ಥರು ದೂರು ದಾಖಲಿಸಿದ್ದರು. ಮಾಚೆರ್ಲಾ ಪಟ್ಟಣದ ಸರ್ಕಲ್ ಇನ್‌ಸ್ಪೆಕ್ಟರ್ (ಸಿಐ) ಮಾ.15 ರಂದು ದಂಪತಿಯನ್ನು ಪತ್ತೆಹಚ್ಚಿದ್ದರು. ಬಳಿಕ ಮಹಿಳೆಗೆ ಬೆದರಿಸಿ ಪೋಷಕರ ಮನೆಗೆ ಹಿಂತಿರುಗುವಂತೆ ಒತ್ತಾಯಿಸಿದ್ದರು ಎಂದು ಆರೋಪಿಸಲಾಗಿದೆ.

### ಬ್ಲ್ಯಾಕ್ ಬಾಕ್ಸ್ ಡೇಟಾ ಬಿಡುಗಡೆಗೆ ಒತ್ತಾಯ ಸಂತ್ರಸ್ತ ಕುಟುಂಬಗಳಿಂದ ಮೋದಿಗೆ ಪತ್ರ

**ಅಹಮದಾಬಾದ್:** 275 ಜನರ ಸಾವಿಗೆ ಕಾರಣವಾದ ಏರ್ ಇಂಡಿಯಾ ವಿಮಾನ ದುರಂತ ಪ್ರಕರಣ ಮತ್ತೆ ಮುನ್ನೆಲೆಗೆ ಬಂದಿದೆ. ಘಟನೆ ಸಂಭವಿಸಿದ ಸುಮಾರು 10 ತಿಂಗಳ ಬಳಿಕ ಕಾಕ್‌ಪಿಟ್ ವಾಯ್ಸ್ ರೆಕಾರ್ಡರ್ ಮತ್ತು ಫ್ಲೈಟ್ ಡೇಟಾ ರೆಕಾರ್ಡರ್ (ಬ್ಲ್ಯಾಕ್ ಬಾಕ್ಸ್) ಮಾಹಿತಿ ಬಿಡುಗಡೆಗೊಳಿಸುವಂತೆ ಒತ್ತಾಯಿಸಿ ಸಂತ್ರಸ್ತ ಕುಟುಂಬಸ್ಥರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದಿದ್ದಾರೆ. 2025ರ ಜೂ.12ರಂದು ಅಹಮದಾಬಾದ್‌ನ ಸರ್ದಾರ್ ವಲ್ಲಭಭಾಯಿ ಪಟೇಲ್ ಅಂತಾರಾಷ್ಟ್ರೀಯ ಏರ್‌ಪೋರ್ಟ್‌ನಿಂದ ಹಾರಿದ್ದ ಏರ್ ಇಂಡಿಯಾ ವಿಮಾನ ದುರಂತದಲ್ಲಿ ಸ್ಥಳೀಯರು ಸೇರಿ 275 ಜನರ ಸಾವನ್ನಪ್ಪಿದ್ದರು. ಅವಶೇಷಗಳನ್ನು ತೆರವುಗೊಳಿಸುವ ವೇಳೆ ಬಿಜೆ ಮೆಡಿಕಲ್ ಹಾಸ್ಟೆಲಿನ ಮೇಲ್ಛಾವಣಿಯಲ್ಲಿ ವಿಮಾನದ ಬ್ಲ್ಯಾಕ್ ಬಾಕ್ಸ್ ಪತ್ತೆಯಾಗಿತ್ತು. ಇದನ್ನು ವಶಪಡಿಸಿಕೊಂಡಿದ್ದ ವಿಮಾನ ಅಪಘಾತ ತನಿಖಾ ಬ್ಯೂರೋ ತನಿಖೆ ಆರಂಭಿಸಿತ್ತು. ಇದೀಗ ಇದರ ದತ್ತಾಂಶ ಬಿಡುಗಡೆಗೊಳಿಸುವಂತೆ ಪ್ರಧಾನಿ ಮೋದಿಗೆ ಪತ್ರ ಬರೆಯಲಾಗಿದೆ.

### ಪ್ರೇಮಿಯ ಕೈಯಲ್ಲಿ ಗಂಡನ ಹತ್ಯೆ ಮಾಡಿಸಿದ ಮಹಿಳೆ, ಪ್ರಕರಣ ಭೇದಿಸಿದ ಪೊಲೀಸರು

**ಆಗ್ರಾ:** ಮಹಿಳೆಯೊಬ್ಬಳು ಪ್ರೇಮಿಯ ಜತೆ ಸೇರಿ ಗಂಡನನ್ನು ಹತ್ಯೆ ಮಾಡಿರುವ ಘಟನೆ ಉತ್ತರ ಪ್ರದೇಶದ ಆಗ್ರಾದಲ್ಲಿ ನಡೆದಿದೆ. ಏಪ್ರಿಲ್ 1 ರ ರಾತ್ರಿ ಆಗ್ರಾದ ಸೈಯಾನ್ ಪ್ರದೇಶದಲ್ಲಿ ಅರ್ಧ ಸುಟ್ಟ ಶವ ಪತ್ತೆಯಾಗಿತ್ತು, ಸ್ಥಳೀಯರಲ್ಲಿ ಆತಂಕ ಸೃಷ್ಟಿಯಾಗಿತ್ತು. ಮುಖ ಗುರುತಿಸಲಾಗದಷ್ಟು ಸುಟ್ಟು ಹೋಗಿದ್ದರಿಂದ ಶವವನ್ನು ಗುರುತಿಸುವುದು ಒಂದು ಸವಾಲಾಗಿತ್ತು, ಆದರೆ ಮುಂಗೈ ಮೇಲಿನ ಹಚ್ಚೆ ಉಳಿದುಕೊಂಡಿತ್ತು ಬಳಿಕ ಆತ ಲೋಕೇಂದ್ರನ ಶವ ಎಂದು ತಿಳಿದುಬಂದಿತ್ತು.

ಲೋಕೇಂದ್ರ ಅವರ ಸಹೋದರ ಪೊಲೀಸರಿಗೆ ನಾಪತ್ತೆಯಾದವರ ದೂರು ದಾಖಲಿಸಿದ್ದರು, ಲೋಕೇಂದ್ರ ರಾತ್ರಿ ಮನೆಗೆ ಹಿಂತಿರುಗಲಿಲ್ಲ ಮತ್ತು ಕೊನೆಯ ಬಾರಿಗೆ ಮಹೇಶ್ ಪ್ರಜಾಪತಿಯೊಂದಿಗೆ ಕಾಣಿಸಿಕೊಂಡಿದ್ದರು ಎಂದು ದೂರಿನಲ್ಲಿ ತಿಳಿಸಲಾಗಿತ್ತು. ಆಘಾತಕಾರಿ ಕೊಲೆ ಪ್ರಕರಣವನ್ನು ಭೇದಿಸಲು ಪೊಲೀಸರು ಐದು ತಂಡಗಳನ್ನು ರಚಿಸಿದರು. ಸಿಸಿಟಿವಿ ದೃಶ್ಯಾವಳಿಗಳನ್ನು ಪರಿಶೀಲಿಸಲಾಯಿತು. ಅಪರಾಧದ ಸ್ಥಳದ ಬಳಿ ಪೊಲೀಸರು ಮದ್ಯದ ಬಾಟಲಿಗಳು ಮತ್ತು ಕೆಲವು ಕಾಗದದ ತುಂಡುಗಳನ್ನು ವಶಪಡಿಸಿಕೊಂಡರು.ಅದರಲ್ಲಿ ಕೆಲವು ಪುರಾವೆಗಳು ದೊರೆತ ಬಳಿಕ ಲೋಕೇಂದ್ರನ ಪತ್ನಿ ಆಕೆಯ ಪ್ರಿಯಕರ ಮಹೇಶ್ ಪ್ರಜಾಪತಿ ಮತ್ತು ಆತನ ಸ್ನೇಹಿತ ಧರ್ಮವೀರ್ ಅವರನ್ನು ವಶಕ್ಕೆ ಪಡೆಯಲಾಗಿದೆ.

### ಭಾರತ-ಬಾಂಗ್ಲಾದೇಶ ಗಡಿಯಲ್ಲಿ ಹಾವುಗಳು, ಮೊಸಳೆಗಳ ಗಸ್ತು

**ಕೋಲ್ಕತ್ತಾ:** ಭಾರತ-ಬಾಂಗ್ಲಾ ಗಡಿಯಲ್ಲಿ ಬಿಎಸ್‌ಎಫ್ ಜವಾನರಲ್ಲ ಇನ್ನುಮುಂದೆ ಹಾವುಗಳು, ಮೊಸಳೆಗಳು ಗಸ್ತು ತಿರುಗಲಿವೆ ಎನ್ನುವ ಸುದ್ದಿ ಹರಿದಾಡುತ್ತಿದೆ. ಗಡಿಯಲ್ಲಿ ಸಾಕಷ್ಟು ಕಡೆ ಬೇಲಿಗಳೇ ಇಲ್ಲದ ಕಾರಣ ಒಳನುಸುಳುವವರ ಸಂಖ್ಯೆಯೂ ಹೆಚ್ಚಾಗುತ್ತಿದೆ. ಇದನ್ನು ತಡೆಯಲು ಗಡಿಯಲ್ಲಿ ಹಾವುಗಳು, ಮೊಸಳಗೆಗಳನ್ನು ನಿಯೋಜಿಸಲು ಬಿಎಸ್‌ಎಫ್ ಮುಂದಾಗಿದೆ. ಗಡಿಯಲ್ಲಿ ಸುಮಾರು 175 ಕಿ.ಮೀ ಬೇಲಿ ಇಲ್ಲದ ಪ್ರದೇಶದುದ್ದಕ್ಕೂ ಸರೀಸೃಪಗಳನ್ನು ನಿಯೋಜಿಸಲಾಗುತ್ತದೆ. 4,096 ಕಿ.ಮೀ.ಗಳಲ್ಲಿ, 850 ಕಿ.ಮೀ. ಬೇಲಿಯಿಲ್ಲದೇ ಉಳಿದಿದೆ. ಆದರೆ ಸರ್ಕಾರದಿಂದ ಯಾವುದೇ ಅಂತಿಮ ನಿರ್ಧಾರವಾಗಿಲ್ಲ. ಉನ್ನತ ಮಟ್ಟದ ಸಭೆಗಳ ನಂತರ ಗಡಿ ಭದ್ರತಾ ಪಡೆ (ಬಿಎಸ್‌ಎಫ್) ಬಾಂಗ್ಲಾದೇಶದೊಂದಿಗಿನ 175 ಕಿಲೋಮೀಟರ್‌ಗಳಷ್ಟು ಬೇಲಿಯಿಲ್ಲದ ನದಿಗಳು ಮತ್ತು ಜೌಗು ಪ್ರದೇಶಗಳಲ್ಲಿ ದಾಟುವಿಕೆಯನ್ನು ತಡೆಯಲು ಹಾವುಗಳು ಮತ್ತು ಮೊಸಳೆಗಳನ್ನು ನಿಯೋಜಿಸಬಹುದು ಎಂದು ಸಲಹೆ ನೀಡಿತ್ತು. ಭಾರತ-ಬಾಂಗ್ಲಾದೇಶ ಗಡಿಯಲ್ಲಿ ಹಾವುಗಳು ಮತ್ತು ಮೊಸಳೆಗಳನ್ನು ನಿಯೋಜಿಸಲು ಬಿಎಸ್‌ಎಫ್ ಆಲೋಚಿಸಿದೆ. ಈ ಪ್ರಸ್ತಾವನೆಯನ್ನು ಅಂತಿಮಗೊಳಿಸಲಾಗಿದೆ. ಭಾರತ-ಬಾಂಗ್ಲಾದೇಶ ಗಡಿಯು 4,096 ಕಿಲೋಮೀಟರ್‌ಗಳವರೆಗೆ ವ್ಯಾಪಿಸಿದೆ.



# ಕಮಲ್ ಹಾಸನ್ ಮೇಲೆ ಭುಗಿಲೆದ್ದ ಆಕ್ರೋಶ: 50 ಸಾವಿರ ಮರಳಿಸುವಂತೆ ಒತ್ತಾಯ




ಕಮಲ್ ಹಾಸನ್ ಭಾರತದ ಸ್ಟಾರ್ ನಟ, ನಿರ್ದೇಶಕ ಮತ್ತು ನಿರ್ಮಾಪಕ ಆಗಿರುವ ಜೊತೆಗೆ ರಾಜಕಾರಣಿಯೂ ಹೌದು. ಇತ್ತೀಚೆಗಷ್ಟೆ ಅವರು ರಾಜ್ಯಸಭೆಗೆ ಸಹ ಆಯ್ಕೆ ಆಗಿದ್ದಾರೆ. ಕೆಲ ವರ್ಷಗಳ ಹಿಂದೆ ಕಮಲ್ ಹಾಸನ್ ಅವರು 'ಮಕ್ಕಳ್ ನಿಧಿ ಮಯಂ ಹೆಸರಿನ ರಾಜಕೀಯ ಪಕ್ಷ ಸ್ಥಾಪಿಸಿದ್ದರು. ರಾಜ್ಯದಾದ್ಯಂತ ಸಂಚರಿಸಿ ಪಕ್ಷವನ್ನು ಬಲಗೊಳಿಸುವ ಪ್ರಯತ್ನ ಮಾಡಿದ್ದರು.

ತಮಿಳುನಾಡಿನ ಬಲಿಷ್ಟ ಪಕ್ಷವಾದ ಡಿಎಂಕೆಗೆ ಸವಾಲೊಡ್ಡುವ ಪಕ್ಷ ಎಂದೇ ಆರಂಭದಲ್ಲಿ ಬಿಂಬಿತವಾಗಿತ್ತು. ಆದರೆ ಈ ಬಾರಿ ಕಮಲ್ ಹಾಸನ್ ಅವರ ಪಕ್ಷ ಚುನಾವಣೆ ಸ್ಪರ್ಧಿಸುತ್ತಲೇ ಇಲ್ಲ. ಡಿಎಂಕೆ ಎದುರಾಳಿ ಎಂದೇ ಗುರುತಿಸಿಕೊಂಡಿದ್ದ ಕಮಲ್ ಹಾಸನ್ ಅವರು ಸ್ವತಃ ಡಿಎಂಕೆಯಿಂದ ಸೀಟು ಪಡೆದು ರಾಜ್ಯಸಭೆ ಪ್ರವೇಶಿಸಿದ್ದು, ಈ ಬಾರಿ ವಿಧಾನಸಭೆ ಚುನಾವಣೆಯಲ್ಲಿ ತಮ್ಮ ಪಕ್ಷ ಸ್ಪರ್ಧಿಸುವುದಿಲ್ಲ ಎಂದಿದ್ದಾರೆ. ಇದು ಪಕ್ಷದ ಕಾರ್ಯಕರ್ತರು ಮತ್ತು ಪದಾಧಿಕಾರಿಗಳ ಅಸಮಾಧಾನಕ್ಕೆ ಕಾರಣವಾಗಿದ್ದು, ಸ್ವಪಕ್ಷೀಯರಿಂದಲೇ ಕಮಲ್ ಹಾಸನ್ ತೀವ್ರ ಪ್ರತಿರೋಧ ಎದುರಿಸುತ್ತಿದ್ದಾರೆ. ಚುನಾವಣೆಗೆ ಸ್ಪರ್ಧಿಸಲು ಅಭ್ಯರ್ಥಿಗಳಿಂದ ತಲಾ 50,000 ರೂಪಾಯಿ ಅರ್ಜಿ ಶುಲ್ಕವನ್ನ ಮಕ್ಕಳ್ ನೀಧಿ ಮೈಯಂ ಪಕ್ಷ ಸಂಗ್ರಹಿಸಿತ್ತು, ಆದರೆ ಈಗ ಸ್ವತಃ ಕಮಲ್ ಹಾಸನ್ ಅವರೇ ಚುನಾವಣೆಗೆ ಹೋಗದಿರುವ ನಿರ್ಧಾರ ಮಾಡಿದ ಬಳಿಕ, ಆಕಾಂಕ್ಷಿ ಅಭ್ಯರ್ಥಿಗಳು ತೀವ್ರ ಅಸಮಾಧಾನ ಹೊರಹಾಕಿರುವುದು ಮಾತ್ರವೇ ಅಲ್ಲದೆ, ತಮ್ಮ ಹಣವನ್ನು ಮರಳಿ ನೀಡುವಂತೆ ಒತ್ತಾಯಿಸಿದ್ದಾರೆ. ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ಆಸಕ್ತಿ ಹೊಂದಿದ್ದ ಅಭ್ಯರ್ಥಿಗಳು ಅರ್ಜಿ ಶುಲ್ಕವಾಗಿ ತಲಾ 50,000 ರೂ.ಗಳನ್ನು ಪಕ್ಷಕ್ಕೆ ಪಾವತಿಸಿದ್ದರು.

ಈಗ ಕಮಲ್ ಹಾಸನ್ ಅವರು ಚುನಾವಣಾ ಕಣದಿಂದ ಹಿಂದೆ ಸರಿಯಲು ನಿರ್ಧರಿಸಿರುವುದರಿಂದ, ಆಕಾಂಕ್ಷಿಗಳು ತಮ್ಮ ಹಣವನ್ನು ವಾಪಸ್ ಕೇಳುತ್ತಿದ್ದಾರೆ. ವಿಧಾನಸಭಾ ಚುನಾವಣೆಯಲ್ಲಿ ಅಭ್ಯರ್ಥಿಗಳ ಈ ಬೇಡಿಕೆಗೆ ಪ್ರತಿಕ್ರಿಯಿಸಿರುವ ಪಕ್ಷದ ಪದಾಧಿಕಾರಿಗಳು, ಪಾವತಿಸಿದ ಮೊತ್ತವನ್ನು 'ಪಕ್ಷಕ್ಕೆ ನೀಡಿದ ದೇಣಿಗೆ ಎಂದು ಪರಿಗಣಿಸಲಾಗುತ್ತದೆ ಮತ್ತು ಈ ಸಮಯದಲ್ಲಿ ಅದನ್ನು ಮರುಪಾವತಿಸಲು ಸಾಧ್ಯವಿಲ್ಲ ಎಂದು ತಿಳಿಸಿದ್ದಾರೆ. ಇದು ಇನ್ನಷ್ಟು ಅಸಮಾಧಾನಕ್ಕೆ ಕಾರಣವಾಗಿದೆ.

# ರಣಬೀರ್ ಕಪೂರ್ ಅಭಿನಯದ 'ರಾಮಾಯಣ'



## 'ರಾಮಾಯಣ' ಸಿನಿಮಾ ಚಿತ್ರತಂಡದ ಎದುರಿಗೆ ಇದೆ ದೊಡ್ಡ ಸವಾಲು

ಸಿನಿಮಾ ಪ್ರೇಕ್ಷಕರ ಸಂಭ್ರಮ

ಎರಡು ಭಾಗದಲ್ಲಿ ಬಿಡುಗಡೆ

ಸಿನಿಮಾದ ಅವಧಿ ಎಷ್ಟೇ ದೀರ್ಘ ವಾಗಿದ್ದರೂ ಕಥೆ ಪ್ರೇಕ್ಷಕರನ್ನು ಹಿಡಿದಿಡುವಂತಿದ್ದರೆ ಅದು ಯಶಸ್ವಿಯಾಗುತ್ತದೆ ಎಂಬುದನ್ನು ಧುರಂಧರ್ ಸಿನಿಮಾ ಸಾಬೀತುಪಡಿಸಿದೆ. ಈ ಚಿತ್ರದ ಎರಡು ಭಾಗಗಳ ಒಟ್ಟು ಅವಧಿ 7 ಗಂಟೆಗಳಿಗೂ ಹೆಚ್ಚು. ಆದರೂ ರೋಚಕ ನಿರೂಪಣೆಯಿಂದಾಗಿ ಪ್ರೇಕ್ಷಕರು ಈ ಸಿನಿಮಾವನ್ನು ಸಂಭ್ರಮಿಸಿದರು. ಇದೀಗ ರಣಬೀರ್ ಕಪೂರ್ ಅಭಿನಯದ 'ರಾಮಾಯಣ' ಕೂಡ ಇದೇ ದಾರಿಯಲ್ಲಿ ಸಾಗಲು ಸಿದ್ಧವಾಗುತ್ತಿದೆ. ಎರಡು ಭಾಗಗಳಲ್ಲಿ ಬರುತ್ತಿರುವ ಈ ಸಿನಿಮಾದ ಅವಧಿ 6 ಗಂಟೆ ಇರಲಿದೆ. ನಿರ್ದೇಶಕ ನಿತೇಶ್ ತಿವಾರಿ ಅವರ ಈ ಮಹತ್ವಾಕಾಂಕ್ಷೆಯ 'ರಾಮಾಯಣ' ಸಿನಿಮಾ ಒಟ್ಟು ಎರಡು ಭಾಗಗಳಲ್ಲಿ ಬಿಡುಗಡೆಯಾಗಲಿದೆ. ಈ ಎರಡು ಭಾಗಗಳ ಒಟ್ಟು ಅವಧಿ ಸುಮಾರು 6 ಗಂಟೆಗಳಿರಲಿದೆ. ಅಂದರೆ ಪ್ರತಿ ಭಾಗವು ಸರಿಸುಮಾರು 3 ಗಂಟೆಗಳ ಕಾಲ ಪ್ರೇಕ್ಷಕರನ್ನು ಕುರ್ಚಿಯ ತುದಿಯಲ್ಲಿ ಕೂರಿಸಬೇಕಿದೆ. ಇದು 'ಧುರಂಧರ್' ಚಿತ್ರಕ್ಕಿಂತಲೂ ಕಡಿಮೆ ಅವಧಿ ಆಗಿದ್ದರೂ ಕೂಡ ಚಿತ್ರತಂಡಕ್ಕೆ ಸವಾಲಾಗಲಿದೆ.'ಧುರಂಧರ್' ಕಥೆ ಏನು ಎಂಬುದು ಪ್ರೇಕ್ಷಕರಿಗೆ ತಿಳಿದಿರಲಿಲ್ಲ. ಹಾಗಾಗಿ ಜನರು ಅಷ್ಟು ದೀರ್ಘ ಅವಧಿಯ ಸಿನಿಮಾವನ್ನು ಗಮನವಿಟ್ಟು ನೋಡಿದರು. ಆದರೆ 'ರಾಮಾಯಣ' ಚಿತ್ರದ ವಿಚಾರದಲ್ಲಿ ಹಾಗೆ ಆಗುವುದು ಕಷ್ಟ. ಯಾಕೆಂದರೆ, ರಾಮಾಯಣದ ಕಥೆ ಏನು ಎಂಬುದು ಎಲ್ಲರಿಗೂ ತಿಳಿದಿದೆ. ಮತ್ತೆ ಆಸಕ್ತಿಕರವಾಗಿ ಸುದೀರ್ಘವಾಗಿ ನಿರೂಪಿಸುವುದು ನಿರ್ದೇಶಕರಿಗೆ ಇರುವ ದೊಡ್ಡ ಸವಾಲು. ರಾಮಾಯಣವನ್ನು ತೆರೆಯ ಮೇಲೆ ತರುವ ಪ್ರಯತ್ನಗಳು ಸಂಪೂರ್ಣ ಯಶಸ್ವಿಯಾಗಿಲ್ಲ.

# ಕ್ರಿಮಿನಲ್ ಮಾನನಷ್ಟ ಮೊಕದ್ದಮೆ ಹೂಡಿದ್ದ ಕಿಚ್ಚ ಸುದೀಪ್ ನಟನಿಗೆ ಕಷ್ಟವಾಯ್ತಾ ಕ್ರಾಸ್ ಎಕ್ಸಾಮಿನೇಷನ್



ಅಭಿನಯ ಚಕ್ರವರ್ತಿ ನಟ ಸುದೀಪ್ ಅವರು ಮೂರು ವರ್ಷಗಳ ಹಿಂದೆ ನಿರ್ಮಾಪಕ ಎಂ.ಎನ್ ಕುಮಾರ್ ಮತ್ತು ಎಂ.ಎನ್ ಸುರೇಶ್ ವಿರುದ್ಧ ಹೂಡಿದ್ದ ಕ್ರಿಮಿನಲ್ ಮಾನನಷ್ಟ ಮೊಕದ್ದಮೆ ಪ್ರಕರಣಕ್ಕೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ಮಹತ್ವದ ಬೆಳವಣಿಗೆ ನಡೆದಿದೆ.

ಮೂರು ಗಂಟೆ ಸುಮಾರಿಗೆ 7ನೇ ಎಸಿಜೆಎಂ ನ್ಯಾಯಾಲಯಕ್ಕೆ ಹಾಜರಾಗಿದ್ದ ನಟ ಸುದೀಪ್ ಅವರನ್ನ ನಿರ್ಮಾಪಕರ ಪರ ವಕೀಲರು ಕ್ರಾಸ್ ಎಕ್ಸಾಮಿನೇಷನ್‌ಗೆ ಒಳಪಡಿಸಿದರು. ವಕೀಲರ ಪ್ರಶ್ನೆಗಳಿಗೆ ಸುದೀಪ್ ಉತ್ತರಿಸಲು ತಡವರಿಸಿದ್ರು ಅನ್ನೋದು ಗೊತ್ತಾಗಿದೆ.

ನಿರ್ಮಾಪಕರು ಸುದೀಪ್ ವಿರುದ್ಧ, ಸಿನಿಮಾ ಕಾಲ್ ಶೀಟ್ ನೀಡಲು 9 ಕೋಟಿ ರೂಪಾಯಿ ಪಡೆದಿದ್ದಾರೆ ಎಂದು ಆರೋಪಿಸಿದ್ದರು. ಈ ಆರೋಪಗಳ ವಿರುದ್ಧ ಸುದೀಪ್ 2023ರಲ್ಲಿ ಮಾನನಷ್ಟ ಮೊಕದ್ದಮೆ ಹೂಡಿದ್ದರು. ಪ್ರಸ್ತುತ ಪ್ರಕರಣವು ಎವಿಡೆನ್ಸ್ ಹಂತದಲ್ಲಿದ್ದು, ನಿನ್ನೆಯ ವಿಚಾರಣೆಯ ನಂತರ ನ್ಯಾಯಾಲಯವು ಮುಂದಿನ ವಿಚಾರಣೆಯನ್ನು 2026ರ ಜೂನ್ 6ಕ್ಕೆ ಮುಂದೂಡಿದೆ.

# ಮೆಟ್ಟಿಲೇರಿಯೇ ತಿಮ್ಮಪ್ಪನ ದರ್ಶನ ಮಾಡುವುದೇಕೆ ಜಾನ್ವಿ: ಅದ್ಭುತ ಕಾರಣ ಕೊಟ್ಟ ನಟಿ



ಜಾನ್ವಿ ಕಪೂರ್ , ಬಾಲಿವುಡ್‌ನ ಬಲು ಜನಪ್ರಿಯ ಮತ್ತು ಬೇಡಿಕೆಯ ಯುವನಟಿ. ಇತ್ತೀಚೆಗೆ ದಕ್ಷಿಣ ಭಾರತ ಚಿತ್ರರಂಗದಲ್ಲಿಯೂ ಸಹ ಬೇಡಿಕೆ ಸೃಷ್ಟಿಸಿಕೊಂಡಿದ್ದಾರೆ. ಜಾನ್ವಿ ಕಪೂರ್, ಬಾಲಿವುಡ್‌ನ ಗ್ಲಾಮರಸ್ ನಟಿಯರಲ್ಲಿ ಒಬ್ಬರು. ಸಿನಿಮಾಗಳಲ್ಲಿ ಮಾಡರ್ನ್ ಯುವತಿಯಾಗಿ ಕಾಣಿಸಿಕೊಳ್ಳುವ ಜಾನ್ವಿ, ಅಪ್ಪಟ ದೈವ ಭಕ್ತೆ. ಅದರಲ್ಲೂ ತಿರುಪತಿ ತಿಮ್ಮಪ್ಪನ ಪರಮ ಭಕ್ತೆ. ವರ್ಷದಲ್ಲಿ ಹಲವು ಭಾರಿ ಅವರು ತಿರುಪತಿ ದೇವಾಲಯಕ್ಕೆ ಭೇಟಿ ನೀಡುತ್ತಾರೆ. ಹೀಗೆ ಭೇಟಿ ನೀಡಿದ ಪ್ರತಿಬಾರಿ ಅವರು ಮೆಟ್ಟಿಲುಗಳ ಮೂಲಕ ಬೆಟ್ಟವನ್ನೇರಿಯೇ ದರ್ಶನ ಪಡೆಯುತ್ತಾರೆ. ತಾವು ಹೀಗೆ ಮಾಡುವುದು ಏಕೆ ಎಂಬುದನ್ನು ಸಹ ಜಾನ್ವಿ ಕಪೂರ್ ವಿವರಿಸಿದ್ದಾರೆ. ಜಾನ್ವಿ ಕೊಟ್ಟಿರುವ ಉತ್ತರ ತಿಮ್ಮಪ್ಪನ ಭಕ್ತರ ಮಾತ್ರವಲ್ಲ ಎಲ್ಲರ ಹೃದಯ ಗೆಲ್ಲುವಂತಿದೆ.

ದೇಶದ ಹಲವಾರು ದೇವಾಲಯಗಳಲ್ಲಿ ವಿಐಪಿ ಸಂಸ್ಕೃತಿ ಇದೆ. ಸಾಮಾನ್ಯ ಭಕ್ತರು ಗಂಟೆ ಗಟ್ಟಲೆ ಸಾಲಿನಲ್ಲಿ ನಿಂತು ಹೋಗಿ ದೇವರ ದರ್ಶನ ಮಾಡಬೇಕು ಆದರೆ ಹಣ ಇದ್ದರು ಅಥವಾ ಪ್ರಭಾವಿಗಳು ಹಣ ನೀಡಿದರೆ ಅವರಿಗೆ ವಿಶೇಷ ದರ್ಶನ ಸಿಗುತ್ತದೆ. ತಿರುಪತಿಯಲ್ಲೂ ಈ ವಿಶೇಷ ದರ್ಶನ ಸೌಲಭ್ಯ ಇದೆ. ಅದರಲ್ಲೂ ವಿವಿಐಪಿಗಳು ಕೆಲ ಸಮಯವೂ ಕಾಯುವಂತಿಲ್ಲ ಅವರಿಗೆ ನೇರ ದರ್ಶನ ವ್ಯವಸ್ಥೆ ಇದೆ. ನಟಿ ಜಾನ್ವಿ ಹೇಳಿರುವಂತೆ ಅವರೂ ಸಹ ಅದೇ ವಿಐಪಿ ದರ್ಶನದ ಮೂಲಕವೇ ದರ್ಶನ ಮಾಡುತ್ತಾರೆ. ಆದರೆ, 'ಸಾವಿರಾರು ಮಂದಿ ಗಂಟ್ಟೆಗಟ್ಟಲೆ ದೇವರ ದರ್ಶನಕ್ಕಾಗಿ ಕಾದು ದರ್ಶನ ಪಡೆಯುತ್ತಾರೆ, ಆದರೆ ನಾನು ಸುಲಭವಾಗಿ ಹಣ ಕೊಟ್ಟು ವಿಶೇಷ ದರ್ಶನ ಪಡೆಯುತ್ತೇನೆ. ಆದರೆ ಇದು ಸರಿಯಲ್ಲ, ಹಾಗೆಂದು ನಾನು ಕೆಲವು ಕಾರಣಗಳಿಗೆ (ಸೆಲೆಬ್ರಿಟಿ ಆಗಿರುವುದರಿಂದ) ಸಾಮಾನ್ಯ ಜನರ ಜೊತೆಗೆ ಹೋಗಿ ದರ್ಶನ ಮಾಡುವಂತೆಯೂ ಇಲ್ಲ. ಶ್ರಮ ದಾಖಲಾಗಲಿ ಎಂಬ ಕಾರಣಕ್ಕೆ ನಾನು ಪ್ರತಿ ಬಾರಿ ಮೆಟ್ಟಿಲುಗಳನ್ನು ಹತ್ತಿ, ಕಷ್ಟಪಟ್ಟು, ಶ್ರಮಪಟ್ಟು ದರ್ಶನಕ್ಕೆ ಹೋಗುತ್ತೇನೆ' ಎಂದಿದ್ದಾರೆ ಜಾನ್ವಿ. ಕಾರಿನಲ್ಲಿ ಬೆಟ್ಟಕ್ಕೆ ಹೋಗಿ, ಅಲ್ಲಿ ಹಣ ಕೊಟ್ಟು ವಿಐಪಿ, ವಿವಿಐಪಿ ದರ್ಶನ ಮಾಡುವುದು ಜಾನ್ವಿಗೆ ಬಹಳ ಸುಲಭ. ಆದರೆ ತಾನು ವಿಐಪಿ ಆಗಿ ಅಲ್ಲ ಬದಲಿಗೆ ಭಕ್ತಳಾಗಿ ದರ್ಶನಕ್ಕೆ ಹೋಗಬೇಕು ಎಂಬ ಕಾರಣಕ್ಕೆ ಜಾನ್ವಿ ಕಪೂರ್ ಅವರು ತಿರುಪತಿ ಬೆಟ್ಟದ 3500 ಮೆಟ್ಟಿಲುಗಳನ್ನು ಹತ್ತಿ ದೇವರ ದರ್ಶನಕ್ಕೆ ಹೋಗುತ್ತಾರೆ.

# ನ್ಯಾಷನಲ್ ಕ್ರಶ್‌ಗೆ ಪತಿಯ ಪ್ರೀತಿಯ ಶುಭಾಶಯ; ಬರ್ತ್‌ಡೇ ಸಂಭ್ರಮದಲ್ಲಿರುವ ರಶ್ಮಿಕಾಗೆ 'ಜಯಮ್ಮ' ಎಂದ ವಿಜಯ್!

ಕೊಡಗಿನ ಕುವರಿ ರಶ್ಮಿಕಾ ಮಂದಣ್ಣ ಇಂದು ತಮ್ಮ 30ನೇ ಹುಟ್ಟುಹಬ್ಬವನ್ನು ಆಚರಿಸಿಕೊಳ್ಳುತ್ತಿದ್ದಾರೆ. ಅದು ಕೂಡ ಮದುವೆ ಆದ ಮೇಲೆ ರಶ್ಮಿಕಾ ತಮ್ಮ ಮೊದಲ ಹುಟ್ಟುಹಬ್ಬವನ್ನು ಆಚರಿಸಿಕೊಳ್ಳುತ್ತಿದ್ದಾರೆ. ಹೀಗಾಗಿ ರಶ್ಮಿಕಾಗೆ ಇಂದು ತುಂಬಾ ಸ್ಪೆಷಲ್ ದಿನ. ಹೀಗಾಗಿ ರಶ್ಮಿಕಾ ತಮ್ಮ ಹುಟ್ಟುಹಬ್ಬವನ್ನು ಪತಿ ಹಾಗೂ ಮನೆಯವರ ಜೊತೆಯಲ್ಲಿ ಸಮಯ ಕಳೆಯಲು ನಿರ್ಧರಿಸಿದ್ದಾರೆ ಎಂದು ಹೇಳಲಾಗುತ್ತಿದೆ.

ಈ ಮಧ್ಯೆ, ಇದೀಗ ರಶ್ಮಿಕಾ ಹುಟ್ಟುಹಬ್ಬಕ್ಕೆ ಪತಿ ವಿಜಯ್ ದೇವರಕೊಂಡ ಸ್ಪೆಷಲ್ ವಿಶ್ ಮಾಡಿದ್ದಾರೆ. ರಶ್ಮಿಕಾ ಹುಟ್ಟುಹಬ್ಬಕ್ಕೆ ವಿಜಯ್ ದೇವರಕೊಂಡ ಶುಭ ಕೋರಿ, ವಿಡಿಯೋ ಒಂದನ್ನು ಹಂಚಿಕೊಂಡಿದ್ದಾರೆ.

ವಿಜಯ್ ಮತ್ತು ರಶ್ಮಿಕಾ ಮುಂಬರುವ ಚಿತ್ರ ರಣಬಾಲಿಯಲ್ಲಿ ಮತ್ತೆ ಒಟ್ಟಿಗೆ ಪರದೆಯನ್ನು ಹಂಚಿಕೊಳ್ಳಲಿದ್ದಾರೆ. ಹೀಗಾಗಿ ರಣಬಾಲಿ ಸಿನಿಮಾದಲ್ಲಿನ ರಶ್ಮಿಕಾ ಲುಕ್‌ನ ವಿಡಿಯೋವನ್ನು ಹಂಚಿಕೊಂಡು ಪತ್ನಿಗೆ ಮುದ್ದಾಗಿ ವಿಶ್ ಮಾಡಿದ್ದಾರೆ ವಿಜಯ್. ರಣಬಾಲಿ ಸಿನಿಮಾದಲ್ಲಿ ರಶ್ಮಿಕಾ



ಪಾತ್ರದ ಹೆಸರು ಜಯಮ್ಮ, ಹೀಗಾಗಿ ವಿಜಯ್ ದೇವರಕೊಂಡ ರಶ್ಮಿಕಾಳನ್ನು ಜಯಮ್ಮ ಎಂದೇ ಕರೆದಿದ್ದಾರೆ. ಮುದ್ದಾದ ವಿಡಿಯೋ ಹಂಚಿಕೊಂಡು ಕ್ಯಾಪ್ಶನ್‌ನಲ್ಲಿ ಲವ್ ಯು ಜಯಮ್ಮ ಎಂದು ಬರೆದುಕೊಂಡಿದ್ದಾರೆ. ರಶ್ಮಿಕಾ ಮುಂಬರುವ ಚಿತ್ರ ರಣಬಾಲಿಯಲ್ಲಿ ಮತ್ತೆ ಒಟ್ಟಿಗೆ ಪರದೆಯನ್ನು ಹಂಚಿಕೊಳ್ಳಲಿದ್ದಾರೆ. ರಾಹುಲ್ ಸಂಕೃತ್ಯನ್ ನಿರ್ದೇಶನದ ಮತ್ತು ಟಿ-ಸೀರೀಸ್ ಸಹಯೋಗದೊಂದಿಗೆ ಮೈತ್ರಿ ಮೂವಿ ಮೇಕರ್ಸ್‌ನ ವೈ. ರವಿಶಂಕರ್ ಮತ್ತು ನವೀನ್ ಯೆರ್ನೇನಿ ಚಿತ್ರವನ್ನು ನಿರ್ಮಿಸಲಿದ್ದಾರೆ.

ರಣಬಾಲಿ, ಅಂತರರಾಷ್ಟ್ರೀಯ ನಟ ಆರ್ನಾಲ್ಡ್ ವೋಸ್ಲೂ ಸೇರಿದಂತೆ ಪ್ರಬಲ ತಾರಾಗಣವನ್ನು ಹೊಂದಿದ್ದು, ಅದರ ಜಾಗತಿಕ ಆಕರ್ಷಣೆಯನ್ನು ಮತ್ತಷ್ಟು ಹೆಚ್ಚಿಸುತ್ತದೆ. ಈ ಚಿತ್ರವು ಸೆಪ್ಟೆಂಬರ್ 11, 2026 ರಂದು ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗಲಿದೆ. ಇನ್ನು ರಶ್ಮಿಕಾ ಮಂದಣ್ಣ ಹುಟ್ಟುಹಬ್ಬಕ್ಕೂ ಮುನ್ನ, ಹೈದರಾಬಾದ್ ವಿಮಾನ ನಿಲ್ದಾಣದಲ್ಲಿ ವಿಜಯ್ ಮತ್ತು ಅವರ ಕುಟುಂಬದೊಂದಿಗೆ ಕಾಣಿಸಿಕೊಂಡರು, ಹೀಗಾಗಿ ರಶ್ಮಿಕಾ ತಮ್ಮ ಹುಟ್ಟುಹಬ್ಬವನ್ನು ತನ್ನ ಗಂಡ ಹಾಗೂ ಫ್ಯಾಮಿಲಿ ಜೊತೆಯಲ್ಲಿ ಆಚರಿಸಿಕೊಳ್ಳಲಿದ್ದಾರೆ ಎಂದು ಹೇಳಲಾಗುತ್ತಿದೆ.

# ನಾನೊಂದು ಮರದ ತುಂಡಿನಂತೆ, ಐಶ್ವರ್ಯಾ ಜೊತೆ ನಡೆಯೋಕೆ ಭಯ ಆಗುತ್ತೆ, ಎಂದ ಅಭಿಷೇಕ್ ಬಚ್ಚನ್

ಬಾಲಿವುಡ್‌ನ ಮುದ್ದಾದ ಜೋಡಿ ಐಶ್ವರ್ಯಾ ರೈ ಹಾಗೂ ಅಭಿಷೇಕ್ ಬಚ್ಚನ್ .ಆದರೆ ಕಳೆದ ವರ್ಷ ಕೇಳಿ ಬಂದ ಕೆಲವು ಡಿವೋರ್ಸ್ ವದಂತಿ ಎಲ್ಲರಿಗೂ ಶಾಕ್ ಕೊಟ್ಟಿತ್ತು. ಐಶ್ವರ್ಯಾ ಹಾಗೂ ಅಭಿಷೇಕ್ ಜೊತೆಯಾಗಿ ಕಾಣಿಸಿಕೊಳ್ಳದೆ ಇದೆಲ್ಲ ವದಂತಿಗೆ ದಾರಿ ಮಾಡಿಕೊಟ್ಟಿದ್ದರು. ಆದರೆ ನಂತರದಲ್ಲಿ ಇಬ್ಬರೂ ಒಟ್ಟೊಟ್ಟಿಗೆ ಹೆಚ್ಚಾಗಿ ಕಾಣಿಸಿಕೊಂಡು ಜನರ ಬಾಯಿ ಮುಚ್ಚಿಸಿದ್ದಾರೆ. ಇತ್ತೀಚೆಗೆ ಅಭಿಷೇಕ್ ಅವರು ಐಶ್ವರ್ಯಾ ಜೊತೆ ನಡೆಯುವಾಗ ನಾನೊಂದು ಮರದ ತುಂಡಿನಂತೆ ಅನಿಸುತ್ತದೆ ಎಂದಿದ್ದಾರೆ. ನಟ ಹಾಗೆ ಹೇಳಿದ್ಯಾಕೆ?

ಐಶ್ವರ್ಯಾ ರೈ ಅಂದ್ರೆ ಭುವನ ಸುಂದರಿ. ಸುಂದರಿಯರ ಸುಂದರಿ. ಸೌಂದರ್ಯ ದೇವತೆ. ಮಿಸ್ ವರ್ಲ್ಡ್ ಆಗಿ ಮಾಜಿ ಮಿಸ್ ವರ್ಲ್ಡ್ ಆದ್ರೂ ಅವರಂತಹ ಸೌಂದರ್ಯವತಿ ಇನ್ನ್ಯಾರೂ ಬಂದೇ ಇಲ್ಲ ಎಂದು ನಂಬುತ್ತೆ ಜಗತ್ತು. ಅಷ್ಟು ಮೋಹಕ ಸೌಂದರ್ಯ. ಇಂಥಹ ನಟಿ ರೆಡ್ ಕಾರ್ಪೆಟ್ ಮೇಲೆ ನಡೆದರೇ ಸುತ್ತಲಿನ ಜಗವೇ ಮೂಕವಾಗುತ್ತದೆ. ಕಣ್ರೆಪ್ಪೆ ಮುಚ್ಚದೇ ನೋಡುತ್ತಲೇ ಇರುತ್ತಾರೆ ಜನ. ಈ ನಟಿಗೆ ಎಲ್ಲರ ಗಮನ ತನ್ನತ್ತ ಸೆಳೆಯೋಕೆ ವಿಶೇಷ ಪ್ರಯತ್ನವೇ ಬೇಡ. ಸುಮ್ಮನೆ ನಡೆದರೆ ಸಾಕು, ಅಷ್ಟೂ ಕಣ್ಣುಗಳು ತನ್ನೆಡೆ ತಿರುಗುವಂತೆ ಮಾಡುವ ಸೌಂದರ್ಯವತಿ. ಇನ್ನು ಐಶ್ವರ್ಯಾ ಅವರ ರೆಡ್ ಕಾರ್ಪೆಟ್ ವಾಕ್ ಎಂದರೆ ಅದೊಂದು ಹಬ್ಬ. ಐಶ್ವರ್ಯಾ ತಲೆ ಎತ್ತಿ ಮುಗುಳು ನಗುತ್ತಾ ಅತ್ಯಂತ ಆತ್ಮವಿಶ್ವಾಸದೊಂದಿಗೆ ರೆಡ್ ಕಾರ್ಪೆಟ್ ಮೇಲೆ ನಡೆಯುತ್ತಾರೆ. ಪತ್ನಿ ಐಶ್ವರ್ಯಾ ಜೊತೆ ರೆಡ್ ಕಾರ್ಪೆಟ್ ಮೇಲೆ ನಡೆಯುವಾಗ ಸಿಕ್ಕಾಪಟ್ಟೆ ಭಯವಾಗುತ್ತದೆ.

ದೊಡ್ಡ ದೊಡ್ಡ ಇವೆಂಟ್‌ಗಳಲ್ಲಿ ತುಂಬಾನೆ ಭಯ ಆಗುತ್ತೆ ಎಂದಿದ್ದಾರೆ. ಲಿಲ್ಲಿ ಸಿಂಗ್ ಜೊತೆಗಿನ ಪಾಡ್‌ಕಾಸ್ಟ್‌ನಲ್ಲಿ ಮಾತನಾಡಿದ ಅಭಿಷೇಕ್ ಬಚ್ಚನ್ ಅವರು ದೊಡ್ಡ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ತನ್ನ ಹಿಂಜರಿಕೆ ಬಗ್ಗೆ ಮಾತನಾಡಿದರು. ನೀವು ನನ್ನ ಪತ್ನಿಯನ್ನು ನೋಡಿದ್ದೀರಾ? ಅವರು ರೆಡ್ ಕಾರ್ಪೆಟ್ ಮೇಲೆ ನಡೆಯೋದು ನೋಡಿದ್ದೀರಾ? ನನಗೆ ರೆಡ್ ಕಾರ್ಪೆಟ್ ಮೇಲೆ ನಡೆಯೋಕೆ ಬರುತ್ತಿರಲಿಲ್ಲ.

ನಾನೇನಾದರೂ ಐಶ್ ಜೊತೆ ನಡೆಯಬೇಕಾಗಿ ಬಂದರೆ ನನಗೆ ಭಯವಾಗುತ್ತಿತ್ತು. ಅವರೆಲ್ಲ ಪ್ರೊಫೆಷನಲ್ಸ್. ಅವರು ಬೆಸ್ಟ್. ನಾನು ಒಂದು ಮರದ ತುಂಡಿನಂತೆ. ನನಗೆ ಏನು ಮಾಡಬೇಕೆಂದು ಗೊತ್ತಿಲ್ಲ. ನನ್ನ ಕೈಯನ್ನು ಪಾಕೆಟ್ ಒಳಗಿಡಬೇಕಾ ಹೊರಗಿಡಬೇಕಾ? ನನಗೆ ತುಂಬಾ ಮುಜುಗರವಾಗುತ್ತದೆ. ನನಗೆ ಏನು ಮಾಡಬೇಕೆಂದು ತಿಳಿಯಲ್ಲ. ಹಾಗಾಗಿ ಪ್ರತಿಬಾರಿ ಕ್ಯಾಮೆರಾ ಮಂದಿ ಇನ್ನೊಮ್ಮೆ ಸ್ಮೈಲ್ ಮಾಡಿ ಎಂದು ಕೇಳುತ್ತಲೇ ಇರುತ್ತಾರೆ. ಅಭಿಷೇಕ್ ಅವರು ತಮ್ಮ ಹಿಂಜರಿಕೆಯನ್ನು ಕೋಪ ಎಂದು ಕ್ಯಾಮೆರಾ ಮೆನ್‌ಗಳು ಅಪಾರ್ಥ ಮಾಡಿಕೊಂಡ ಘಟನೆಯ ಬಗ್ಗೆಯೂ ಮಾತನಾಡಿದ್ದಾರೆ.

ನಾನು ಹಿಂಜರಿದಿದ್ದನ್ನು ಅವರು ಕೋಪ ಎಂದುಕೊಂಡಿದ್ದರು. ಫೋಟೋಗ್ರಫರ್‌ಗಳು ಸರ್, ನಾವು ಏನು ತಪ್ಪು ಮಾಡಿದ್ವಿ? ನೀವು ಯಾಕೆ ಇಷ್ಟು ಕೋಪಗೊಂಡಿದ್ದೀರಿ ಎಂದು ಕೇಳಿದರು. ನಾನು ಸಾರಿ ಎಂದೆ ಎಂದು ನಟ ನೆನಪಿಸಿಕೊಂಡಿದ್ದಾರೆ. ಪ್ರತಿವರ್ಷ ಐಶ್ವರ್ಯಾ ರೈ ಅವರು ತಮ್ಮ ರೆಡ್ ಕಾರ್ಪೆಟ್ ಲುಕ್‌ನಿಂದಾಗಿ ಗಮನ ಸೆಳೆಯುತ್ತಾರೆ. ನಟಿ ತಮ್ಮ ಮಗಳೊಂದಿಗೆ ಕೇನ್ಸ್‌ಗೆ ಹೋಗುತ್ತಾರೆ. ಅಭಿಷೇಕ್ ಬಚ್ಚನ್ ಹಾಗೂ ಐಶ್ವರ್ಯಾ ರೈ ಅವರು ಮೊದಲು 2000ದ ಆರಂಭದಲ್ಲಿ ಧೂಮ್ 2, ಗುರು ನಂತಹ ಸಿನಿಮಾ ಸೆಟ್‌ಗಳಲ್ಲಿ ಭೇಟಿಯಾದರು. ಅವರು 2007 ಏಪ್ರಿಲ್‌ನಲ್ಲಿ ಮದುವೆಯಾಗಿ 2011ರಲ್ಲಿ ಆರಾಧ್ಯಗೆ ಪೋಷಕರಾದರು. ಅವರು ತಮ್ಮ ವೈವಾಹಿಕ ಜೀವನವನ್ನು ತುಂಬಾ ಖಾಸಗಿಯಾಗಿಟ್ಟಿದ್ದಾರೆ.





# ಆರ್ ಸಿಬಿಗೆ ಭರ್ಜರಿ ಜಯ

ನಾಯಕ ರಜತ್ ಪಾಟೀದಾರ್, ದೇವದತ್ ಪಡಿಕ್ಕಲ್ ಮತ್ತು ಟಿಮ್ ಡೇವಿಡ್ ಅವರ ಸ್ಫೋಟಕ ಬ್ಯಾಟಿಂಗ್ ನೆರವಿನಿಂದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಚೆನ್ನೈ ಸೂಪರ್ ಕಿಂಗ್ಸ್ ತಂಡದ ವಿರುದ್ಧ 43 ರನ್‌ಗಳ ಜಯ ಸಾಧಿಸಿದೆ.

ಇಲ್ಲಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಭಾನುವಾರ ರಾತ್ರಿ ನಡೆದ ಐಪಿಎಲ್ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಆರ್‌ಸಿಬಿ ತಂಡಕ್ಕೆ ವಿರಾಟ್ ಕೊಹ್ಲಿ ಮತ್ತು ಫಿಲಿಪ್ ಸಾಲ್ಟ್ ಉತ್ತಮ ಆರಂಭ ನೀಡಿದರು. ನಂತರ ಬಂದ ದೇವದತ್ತ ಪಡಿಕ್ಕಲ್ ಅರ್ಧಶತಕ (50; 29) ಬಾರಿಸಿ ತಂಡಕ್ಕೆ ನೆರವಾದರು. ರಜತ್ ಪಾಟಿದಾರ್ (ಅಜೇಯ 48, 28ಎಸೆತ, 4-1, 6-6) ಮತ್ತು ಟಿಮ್ ಡೇವಿಡ್ (ಅಜೇಯ 70, 25ಎಸೆತ, 4-3, 6-8) ಅಬ್ಬರದ ಆಟ, ತಂಡದ ಮೊತ್ತವನ್ನು 250ಕ್ಕೆ ತಲುಪಿಸಿತು.

**ಡೇವಿಡ್- ಪಾಟಿದಾರ್ ಅರ್ಭಟ:**

ಉತ್ತಮ ಬ್ಯಾಟಿಂಗ್ ಲಯ ಕಂಡುಕೊಂಡ ಟಿಮ್ ಡೇವಿಡ್ ರಜತ್ ಪಾಟಿದಾರ್, ಕೊನೆಯ ಆರು- ಏಳು ಓವರ್‌ಗಳಲ್ಲಿ ಸಿಕ್ಸರ್‌ಗಳ ಸುರಿಮಳೆಗೈದರು. ಕೇವಲ 25 ಎಸೆತಗಳಲ್ಲಿ 70 ರನ್ ಗಳಿಸಿದ ಡೇವಿಡ್, ಚೆನ್ನೈ ಬೌಲರ್‌ಗಳ ಪಾಲಿಗೆ ಸಿಂಹಸ್ವಪ್ನವಾದರು. ಕೇವಲ 35 ಎಸೆತಗಳಲ್ಲಿ ಮುರಿಯದ 99 ರನ್‌ಗಳ ಜೊತೆಯಾಟ ಆಡಿದ ರಜತ್- ಡೇವಿಡ್ ಜೋಡಿ, ತಂಡಕ್ಕೆ ದಾಖಲೆಯ ಮೊತ್ತ ಸೇರಿಸುವಲ್ಲಿ ಯಶಸ್ವಿಯಾದರು. ಆರ್‌ಸಿಬಿ ನೀಡಿದ ಸವಾಲಿನ ಗುರಿ ಬೆನ್ನತ್ತಿದ ಸಿಎಸ್‌ಕೆ ತಂಡ ಪ್ರಾರಂಭದಲ್ಲಿ ಆರಂಭಿಕ ಹಂತದಲ್ಲಿಯೇ ಪ್ರಮುಖ ವಿಕೆಟ್‌ಗಳನ್ನು ಕಳೆದುಕೊಂಡಿತು. ಆರ್‌ಸಿಬಿ ಬೌಲರ್‌ಗಳ ದಾಳಿಗೆ ಸಂಜು ಸ್ಯಾಮನ್ಸ್, ರುತುರಾಜ ಗಾಯಕವಾಡ್, ಅಯುಷ್ ಮಾತ್ರೆ ಒಂದಂಕಿಯ ರನ್ ಗಳಿಸಲಷ್ಟೇ ಶಕ್ತರಾದರು.

ನಂತರ ಬಂದ ಸರ್ಫರಾಜ್ ಖಾನ್ (50ರನ್, 25 ಎಸೆತ, 4-8, 6-2) ಶಾಂತಚಿತ್ತದ ಇನ್ನಿಂಗ್ ಆಡಿ ಅರ್ಧಶತಕ ಗಳಿಸಿದರು.

ಪ್ರಶಾಂತ್ ವೀರ್, ಜೇಮಿ ಓವರ್‌ಟನ್ ತಂಡಕ್ಕೆ ಬಲ ತುಂಬಿದರು. ಸಿಎಸ್‌ಕೆ ಪರ ಶಿವಂ ದುಬೆ, ಜೇಮಿ ಓವರ್‌ನ್ ಮತ್ತು ಅಸ್ಕುಲ್ ಕಾಂಬೋಜ್ ತಲಾ ಒಂದೊಂದು ವಿಕೆಟ್ ಪಡೆದುಕೊಂಡರು. ಆರ್‌ಸಿಬಿ ಪರ ಜಾಕೋಬ್ ಢಫಿ, ಭುವನೇಶ್ವರ ಕುಮಾರ್, ಕೃನಾಲ್ ಪಾಂಡ್ಯ ವಿಕೆಟ್ ಪಡೆದುಕೊಂಡರು.

# ವಿರಾಟ್ ಹೊಸ ವಿಕ್ರಮ

## ಹೊಸ ದಾಖಲೆ ಬರೆದ ಆರ್ ಸಿಬಿ

ಕಿಂಗ್ ಕೊಹ್ಲಿ ಇದೀಗ ಇಂಡಿಯನ್ ಪ್ರೀಮಿಯರ್ ಲೀಗ್ ನಲ್ಲಿ ಹೊಸ ಮೈಲಿಗಲ್ಲು ಸ್ಥಾಪಿಸಿದ್ದಾರೆ. ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧದ ಪಂದ್ಯದಲ್ಲಿ 28 ರನ್ ಗಳಿಸುವ ಮೂಲಕ ಐಪಿಎಲ್ ತಂಡವೊಂದರ ವಿರುದ್ಧ ಅತಿ ಹೆಚ್ಚು ರನ್ (1,174) ಗಳಿಸಿದ ತಮ್ಮದೇ ದಾಖಲೆಯನ್ನು ಮುರಿದಿದ್ದಾರೆ. ಈವರೆಗೂ ಪಂಜಾಬ್ ಕಿಂಗ್ಸ್ ವಿರುದ್ಧ ಅವರು ಗಳಿಸಿರುವ 1159 ರನ್ ತಂಡವೊಂದರ ವಿರುದ್ಧ ಗಳಿಸಿದ ಅತಿ ಹೆಚ್ಚಿನ ಮೊತ್ತವಾಗಿತ್ತು. ಇದೀಗ ಸಿಎಸ್ ಕೆ ವಿರುದ್ಧ ಕೊಹ್ಲಿ ಅವರು, 1174 ರನ್ ಕಲೆ ಹಾಕಿ ಈ ದಾಖಲೆಯನ್ನು ಮುರಿದಿದ್ದಾರೆ.

ಡೇವಿಲ್ ಬ್ಯಾಟಿಂಗ್‌ಗೆ ಸಿಎಸ್‌ಕೆ ಅಲ್ಲೋಲ ಕಲ್ಲೋಲ

25 ಎಸೆತ 70 ರನ್

ಆರ್ ಸಿಬಿ ರನ್ ಮಳೆ





ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣ ಇಂದು ಬೌಂಡರಿ ಹಾಗೂ ಸಿಕ್ಸರ್‌ಗಳ ಮಳೆಗೆ ಸಾಕ್ಷಿಯಾಯಿತು. ಅದರಲ್ಲೂ ಮಧ್ಯಮ ಕ್ರಮಾಂಕದಲ್ಲಿ ಬ್ಯಾಟಿಂಗ್‌ಗೆ ಬಂದ ಸ್ಫೋಟಕ ದಾಂಡಿಗ ಟಿಮ್ ಡೇವಿಡ್ ಸಿಎಸ್‌ಕೆ ಬೌಲರ್‌ಗಳು ಮೈದಾನದಲ್ಲೇ ಅಳುವಂತೆ ಮಾಡಿದರು. ಡೇವಿಡ್ ಸುನಾಮಿಗೆ ಸಿಲುಕಿದ ಸಿಎಸ್‌ಕೆ ಬೌಲರ್‌ಗಳು ದಿಕ್ಕೆ ತೋಚದವರಂತ್ತಾಗಿ ಡೇವಿಡ್ ಬಾರಿಸುವ ಸಿಕ್ಸರ್‌ಗಳನ್ನು ಮೂಕ ವಿಸ್ಮಿತರಾಗಿ ನಿಂತು ನೋಡಬೇಕಾಯಿತು. ಈ ಪಂದ್ಯದಲ್ಲಿ ಆರ್‌ಸಿಬಿ ಪರ ಎಲ್ಲಾ ಬ್ಯಾಟರ್‌ಗಳು ಅಮೋಘ ಪ್ರದರ್ಶನ ನೀಡಿದರು. ಹೀಗಾಗಿ ವಿಕೆಟ್ ಪತನದ ಬಳಿಕವೂ ಆ ಬಳಿಕ ಬಂದ ಬ್ಯಾಟ್ಸ್‌ಮನ್‌ಗಳು ಯಾವುದೇ ಒತ್ತಡವಿಲ್ಲದೆ ಮುಕ್ತವಾಗಿ ಬ್ಯಾಟ್ ಬೀಸಿದರು. ಅದರ ಪರಿಣಾಮ ಡೇವಿಡ್ ಅವರ ಬ್ಯಾಟಿಂಗ್‌ನಲ್ಲೂ ಕಂಡುಬಂತು. ಬಂದ ಬಂದವರೇ ಟಾಪ್ ಗೇರ್‌ನಲ್ಲಿ ಬ್ಯಾಟಿಂಗ್ ಶುರು ಮಾಡಿದ ಡೇವಿಡ್ ತಂಡದ ಸ್ಕೋರ್ ಬೋರ್ಡ್‌ನ ವೇಗ ಹೆಚ್ಚಿಸಿದರು. 15ನೇ ಓವರ್‌ನಲ್ಲಿ ಬ್ಯಾಟಿಂಗ್‌ಗೆ ಬಂದ ಡೇವಿಡ್ 17ನೇ ಓವರ್‌ನಿಂದ ಸಿಕ್ಸರ್‌ಗಳ ಮಳೆ ಸುರಿಸಲು ಶುರು ಮಾಡಿದರು. ಈ ಓವರ್‌ನ ಮೂರು, ನಾಲ್ಕು ಮತ್ತು ಐದನೇ ಎಸೆತಗಳಲ್ಲಿ ಸತತ ಮೂರು ಸಿಕ್ಸರ್‌ಗಳನ್ನು ಬಾರಿಸಿದರು. ಹೀಗಾಗಿ ಈ ಓವರ್‌ನಲ್ಲಿ 21 ರನ್‌ಗಳು ಬಂದವು. 18ನೇ ಓವರ್‌ನಲ್ಲೂ ಅವರ ಬ್ಯಾಟ್‌ನಿಂದ ಒಂದು ಬೌಂಡರಿ ಹಾಗೂ ಸಿಕ್ಸರ್ ಬಂತು. 19ನೇ ಓವರ್‌ನಲ್ಲಿ ಉಗ್ರರೂಪ ತಾಳಿದ ಡೇವಿಡ್ ಈ ಓವರ್‌ನ ಐದು ಎಸೆತಗಳನ್ನು ಬೌಂಡರಿಗಟ್ಟಿದರು. ಇದರಲ್ಲಿ 1 ಬೌಂಡರಿ ಹಾಗೂ 4 ಸಿಕ್ಸರ್‌ಗಳು ಸೇರಿದ್ದವು. ಹೀಗಾಗಿ ಈ ಓವರ್‌ನಲ್ಲಿ 30 ರನ್‌ಗಳು ಬಂದವು. ಹಾಗೆಯೇ ಇದೇ ಓವರ್‌ನಲ್ಲಿ ಡೇವಿಡ್ ಕೂಡ ಅರ್ಧಶತಕ ಪೂರೈಸಿದರು. ಕೊನೆಯ ಓವರ್‌ನ ಕೊನೆಯ ಎಸೆತದಲ್ಲಿ ಬೌಂಡರಿ ಬಾರಿಸುವ ಮೂಲಕ ಡೇವಿಡ್ ಇನ್ನಿಂಗ್ಸ್‌ಗೆ ಅಂತ್ಯ ಹಾಡಿದರು. ತಮ್ಮ ಇನ್ನಿಂಗ್ಸ್‌ನಲ್ಲಿ 25 ಎಸೆತಗಳನ್ನು ಎದುರಿಸಿದ ಡೇವಿಡ್ 3 ಬೌಂಡರಿ ಹಾಗೂ 8 ಸಿಕ್ಸರ್ ಸಹಿತ 70 ರನ್ ಬಾರಿಸಿದರು.

## 20 ಓವರ್‌ಗಳಲ್ಲಿ 250 ರನ್ ಬಾರಿಸಿದ ಆರ್‌ಸಿಬಿ

**ಟಾಸ್ ಸೋತು ಮೊದಲು ಬ್ಯಾಟ್ ಮಾಡಲಿಳಿದ ಆರ್‌ಸಿಬಿ ತಂಡಕ್ಕೆ ಎಲ್ಲಾ ಬ್ಯಾಟರ್‌ಗಳು ಉಪಯುಕ್ತ ರನ್ ಕಾಣಿಕೆ ನೀಡಿದರು. ಚೆನ್ನೈ ಬೌಲರ್‌ಗಳನ್ನು ಮನಬಂದಂತೆ ದಂಡಿಸಿದ ಆರ್‌ಸಿಬಿ ತಂಡವು ನಿಗದಿತ 20 ಓವರ್‌ಗಳಲ್ಲಿ 3 ವಿಕೆಟ್ ಕಳೆದುಕೊಂಡು 250 ರನ್‌ಗಳ ಬೃಹತ್ ಮೊತ್ತ ಕಲೆಹಾಕಿದೆ. ಈ ಮೂಲಕ 19ನೇ ಸೀಸನ್ ಐಪಿಎಲ್ ಟೂರ್ನಿಯಲ್ಲಿ ಇನ್ನಿಂಗ್ಸ್‌ವೊಂದರಲ್ಲಿ ಗರಿಷ್ಠ ಮೊತ್ತ ಕಲೆಹಾಕಿದ ತಂಡ ಎನ್ನುವ ಅಪರೂಪದ ದಾಖಲೆಗೆ ಆರ್‌ಸಿಬಿ ಪಾತ್ರವಾಗಿದೆ. ಈ ಮೊದಲು ಕೆಕೆಆರ್ ಎದುರು ಸನ್‌ರೈಸರ್ಸ್ ಹೈದರಾಬಾದ್ 226 ರನ್ ಬಾರಿಸಿದ್ದೇ ಈ ಸೀಸನ್‌ನ ಗರಿಷ್ಠ ಸ್ಕೋರ್ ಎನಿಸಿಕೊಂಡಿತ್ತು.**

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966